ನಾಳೆ ಇದರ ಬಗ್ಗೆ ಯೋಚನೆ ಮಾಡುತ್ತೇನೆ ಎನ್ನುವುದು ಸೂಕ್ತವಲ್ಲ ಎಂಬುದು ನನ್ನ ಭಾವನೆಯಾಗಿದೆ. ರಾಜ್ಯದ ಜನತೆಗೆ ವಿರೋಧ ಪಕ್ಷದವರು ಏನೂ ಕೆಲಸ ಮಾಡುತ್ತಿಲ್ಲ, ಅವರು ಸುಮ್ಮನೆ ಕುಳಿತಿದ್ದಾರೆ ಎಂಬ ಭಾವನೆ ಬರುತ್ತದೆ. ನಾವು ಕೆಲಸ ಮಾಡುತ್ತಿರುವ ಬಗ್ಗೆ ಕೂಡ ರಾಜ್ಯದ ಜನತೆಗೆ ಬೆಳಕು ಚೆಲ್ಲಬೇಕಾಗುತ್ತದೆ. ದಯವಿಟ್ಟು ಆ ಬಗ್ಗೆ ತಾವು ನಿರ್ಣಯ ಮಾಡಬೇಕಾಗುತ್ತದೆ. ನಿನ್ನೆ ಸನ್ಮಾನ್ಯ ಮುಖ್ಯಮಂತ್ರಿಗಳ ಬಜೆಟ್ ಮಂಡನೆಯನ್ನು ಏಳು ಚಾನೆಲ್‌ಗಳಲ್ಲಿ ರಾಜ್ಯದ ಜನತೆ ನೋಡಲು ತಾವು ಅವಕಾಶ ಮಾಡಿಕೊಟ್ಟಿದ್ದೀರಿ.

ಅಧ್ಯಕ್ಷರು : ನೇರ ಪ್ರಸಾರಕ್ಕೆ ನಾನು ಅವಕಾಶ ಕೊಟ್ಟಿರುವುದು ಕೇವಲ ನಿನ್ನೆ ಪ್ರಾರಂಭ ಮಾಡಿರುವಂತಾದ್ದಲ್ಲ. ಹಿಂದೆಯೂ ಕೂಡ ಎಲ್ಲಾ ಸ್ಪೀಕರ್‌ಗಳು ಹಿಂದಿನ ಸರ್ಕಾರಗಳಿದ್ದಾಗ ಮಾನ್ಯ ಮುಖ್ಯಮಂತ್ರಿಗಳ ಬಜೆಟ್ ಭಾಷಣವನ್ನು ನೇರ ಪ್ರಸಾರ ಮಾಡಲು ದೃಶ್ಯ ಮಾಧ್ಯಮಗಳಿಗೆ ಅವಕಾಶ ನೀಡಿದ್ದಾರೆ. ನಿನ್ನೆ ಕೂಡ ಅದರಂತೆಯೇ ಅವಕಾಶ ನೀಡಲಾಗಿತ್ತು. ಕೇವಲ ನಿನ್ನೆಯಷ್ಟೇ ಆ ರೀತಿಯ arrangements ಮಾಡಿರಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂತಾದ್ದೂ ಕೂಡ ಪ್ರಸಾರವಾಗಲು ಏನು ಮಾಡಬೇಕೆಂಬುದರ ಕಡೆಗೆ ಪೂರಕವಾಗಿ ಕೆಲಸ ಮಾಡುತ್ತೇನೆ ಎಂಬುದನ್ನು ಈಗಾಗಲೇ ನಾನು ಸ್ಪಷ್ಟವಾಗಿ ಹೇಳಿದ್ದೇನೆ. ತಕ್ಷಣವೇ, ಇವತ್ತೇ ಅದನ್ನು implement ಮಾಡಲಿಕ್ಕೆ ಯಾರಿಗೂ ಕೂಡ ಸಾಧ್ಯವಿಲ್ಲ. ನಿಮ್ಮ ಅಭಿಪ್ರಾಯಕ್ಕೆ ನಾನು ಮನ್ನಣೆ ಕೊಡುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ : ಈ ಬಜೆಟ್ ಅಧಿವೇಶನದಲ್ಲೇ ಅದನ್ನು ಇಂಪ್ಲಿಮೆಂಟ್ ಮಾಡುತ್ತೀರೋ ಅಥವಾ ಮುಂದಿನ ಅಧಿವೇಶನದಲ್ಲಿ ಮಾಡುತ್ತೀರೋ?

ಅಧ್ಯಕ್ಷರು : ಅದರ ಬಗ್ಗೆ ನಾನು think ಮಾಡುತ್ತಿದ್ದೇನೆ. ಆದಷ್ಟು ಬೇಗನೇ implement ಮಾಡಲಿಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಹೇಳಿದ್ದಕ್ಕೆ ಮನ್ನಣೆ ಕೊಡಲಿಲ್ಲ, ಅವರು ಹೇಳಿದ್ದಕ್ಕೆ ಮನ್ನಣೆ ಕೊಟ್ಟಿರಿ.

ಅಧ್ಯಕ್ಷರು : ನೀವೇ ಮೊದಲು ಸಲಹೆ ಕೊಟ್ಟಿರಿ, ಆದ್ದರಿಂದ ನಿಮ್ಮ ಮಾತಿಗೇ ಮನ್ನಣೆ ಸಿಕ್ಕಿದಂತಾಗಿದೆ.

2. ವಿತ್ತೀಯ ಕಾರ್ಯಕಲಾಪ :

2008-2009ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಶ್ರೀಮಾನ್ ಯಡಿಯೂರಪ್ಪನವರು 2008-2009ನೇ ಸಾಲಿನ ಬಜೆಟ್ ಅನ್ನು ಏನು ಮಂಡಿಸಿದ್ದಾರೆ, ಈ ಬಜೆಟ್‌ನಲ್ಲಿ ಒಂದೆರಡು ಅಂಶಗಳನ್ನು ಬಿಟ್ಟರೆ, ಬಹುಶಃ ಬಾಕಿಯದ್ದೆಲ್ಲಾ repeat ಆಗಿವೆ. ಹಿಂದೆ ಸತತವಾಗಿ ಎರಡು ವರ್ಷಗಳಲ್ಲಿ ಹೇಳಿದಂತಹ ಮಾತುಗಳೇ ಅದರಲ್ಲಿ ಬಂದಿವೆ. ಆದ್ದರಿಂದ, ಈ ಬಜೆಟ್‌ಗೆ ನಾನು

ಒಪ್ಪಿಗೆಯನ್ನು ಕೊಡದೆ, ಕೆಲವೊಂದು ಪ್ರಮುಖ ವಿಷಯಗಳನ್ನು ಮತ್ತು ಕಾರಣಗಳನ್ನು ಈ ಸದನದ ಮುಂದೆ ತಮ್ಮ ಮುಖಾಂತರ ಇಡಲಿಕ್ಕೆ ಇಚ್ಛೆಪಡುತ್ತಿದ್ದೇನೆ.

ಅಧ್ಯಕ್ಷರೆ, ಒಂದು ಕಡೆ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಾತಿ ಇಲ್ಲದೇ ಇರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಪಕ್ಷದವರಿಗೂ ಕೂಡ ನಾನು ವಿಪ್ ಜಾರಿ ಮಾಡುವುದಕ್ಕೆ ಮತ್ತು ಹಾಜರಾತಿ ಕಡ್ಡಾಯವಾಗಿ ಇರುವಂತೆ ಕೇಳಿಕೊಳ್ಳುತ್ತೇನೆ. ಆದರೆ ಕನಿಷ್ಟ ಪಕ್ಷ ಬಜೆಟ್ ಅಧಿವೇಶನದಲ್ಲಿ ಸಂಬಂಧಪಟ್ಟಂತಹ ಅಧಿಕಾರಿಗಳಾದರೂ ಎಲ್ಲರೂ ಇರಬೇಕಲ್ಲ. ಮುಖ್ಯ ಕಾರ್ಯದರ್ಶಿಗಳಿರಬಹುದು, ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳಿರಬಹುದು, ಅಗ್ರಿಕಲ್ಚರ್ ಮತ್ತು ರೂರಲ್ ಡೆವಲಪ್‌ಮೆಂಟ್ ಇಲಾಖೆಗಳ ಕಾರ್ಯದರ್ಶಿಗಳಿರಬಹುದು, ಇಲಾಖೆಗಳಿಗೆ ಸಂಬಂಧಪಟ್ಟಂತಹ ಎಲ್ಲಾ ಮಂತ್ರಿಗಳೂ ಕೂಡ ಇರಬೇಕು. ಯಾರು ಏನು ಮಾತನಾಡುತ್ತಾರೆ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಂತಹ ಮಾತುಗಳು ಅವರಿಗೆ ಬಹಳ ಪ್ರಿಯವಾಗಿದ್ದು, ಅವರು ಏನು ಹೇಳಿದ್ದರೂ, ಸಲಹೆ ಕೊಟ್ಟಿದ್ದರು ಅದನ್ನು ಹೇಳಿದ್ದಾರೆ. ಮತ್ತೆ ನಾವೇನು ಬೇರೆಯವರ ಮಾತು ಕೇಳಬೇಕಾಗಿಲ್ಲವೆಂದು ಹೇಳಿ ಅವರು ಆಬ್ಸೆಂಟ್ ಉಳಿಯಬಾರದು. ಬೇರೆಯವರ ಮಾತನ್ನೂ ಕೇಳಬೇಕು. ಅವರು ಏನು ಹೇಳಿದ್ದಾರೆನ್ನುವುದನ್ನು ನೋಡಿಕೊಂಡು ಅದಕ್ಕೆ ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಅವರಿಗೆ ಹೇಳತಕ್ಕಂಥದ್ದು ಆಗಬೇಕು. ಇಲ್ಲಿ ರೆಕಾರ್ಡ್ ಮಾಡಿಕೊಳ್ಳುತ್ತಾರೆ, ಅಲ್ಲಿ ಹೇಳಿಬಿಡುತ್ತಾರೆ, ಅದಕ್ಕಾಗಿ ನಾವ್ಯಾರೂ ಹೋಗಬಾರದು ಎಂದು ಹೇಳಿದರೆ, ಇದರ sanctity ಏನು ಉಳಿಯುತ್ತದೆ? ಇಲ್ಲ ಅವರವರ ಕಛೇರಿಗಳಲ್ಲಿ ಅಲ್ಲಿಯೇ ಕುಳಿತು ಅಲ್ಲಿಯೇ ಸ್ವಿಚ್ ಹಾಕಿಕೊಂಡು ಕೇಳಿಕೊಳ್ಳಬಹುದು. sanctity slowly erode ಆಗುತ್ತದೆ. ನಾನು ನೋಡಿದ್ದೇನೆ, 1972 ರಲ್ಲಿ ಅಧಿಕಾರಿಗಳು ಯಾವ ರೀತಿಯಾಗಿ ಬಿಹೇವ್ ಮಾಡುತ್ತಿದ್ದರು, 1978 ರಲ್ಲಿ ನೋಡಿದ್ದೇನೆ, 1983 ಮತ್ತು 1985 ರಲ್ಲಿ ನೋಡಿದ್ದೇನೆ. ಸತತವಾಗಿ ನಾನು ನಿಮ್ಮೆಲ್ಲರ ಸಹಕಾರದಿಂದ 9 ಸಲ ಆರಿಸಿ ಬರುತ್ತಿರುವ ಕಾರಣ ಎಲ್ಲಾ ವ್ಯವಸ್ಥೆಗಳನ್ನು ನೋಡತಕ್ಕಂತಹ ಒಂದು ಅವಕಾಶ ನನಗೆ ಸಿಕ್ಕಿದೆ. ಆದರೆ ದಿನೇ ದಿನೇ sanctity erode ಆಗುತ್ತಿದೆ. erode ಆಗತಕ್ಕಂತಹ systemಗೆ ನಾವೆಲ್ಲರೂ ಬೆಂಬಲ ಕೊಡುತ್ತಿದ್ದೇವೆ. ಅದು ನಿಮ್ಮ ಕಾಲದಲ್ಲಿ ಇತ್ತೇನು, ಅವರ ಕಾಲದಲ್ಲಿ ಇತ್ತೇನು? ಇವರು ಬರುತ್ತಿದ್ದರೇನು? ನಾವು ನೋಡಿಲ್ಲವೇನು? ಹೀಗೆ ಹೇಳಿ defend ಮಾಡಿಕೊಳ್ಳುತ್ತಿದ್ದೀರಿ. Instead of strengthening, improving and correcting, ಮಾಡುವುದು ಬಿಟ್ಟು, ನಾವು ಈ system erode ಆಗುವುದಕ್ಕೆ ಎಲ್ಲರೂ ಬೆಂಬಲ ಕೊಡುತ್ತಿದ್ದೇವೆ. ದಯವಿಟ್ಟು ಅದು ಸರಿ ಇಲ್ಲ. ಕನಿಷ್ಟ ಪಕ್ಷ ಅವರಿದ್ದರೆ ಬರೆದುಕೊಂಡು, ನೋಡಿಕೊಂಡು, ಕೇಳಿಕೊಂಡು ಎಲ್ಲಿ ತಪ್ಪಿದೆ ಅದನ್ನಾದರೂ ಸರಿಪಡಿಸುವುದಕ್ಕೆ ಅವರಿಗೆ ಒಂದು opportunity ಇದೆ. ಎಲ್ಲಾ ಅಧಿಕಾರಿಗಳೂ ತಿಳಿದುಕೊಂಡವರೇ ಇರುವುದಿಲ್ಲ. ಅವರು ಆರು ತಿಂಗಳು ಇಲ್ಲಿರುತ್ತಾರೆ, ಮೂರು ತಿಂಗಳು ಇನ್ನೊಂದು ಕಡೆ ಇರುತ್ತಾರೆ, ಇನ್ನೊಂದು ಇಲಾಖೆಗೆ ಹೋಗುತ್ತಾರೆ ಇನ್ನೊಂದು ಆರು ತಿಂಗಳು ಬೇರೆ ಕಡೆ ಇರುತ್ತಾರೆ. ಅದಕ್ಕಾಗಿ ಅಧ್ಯಕ್ಷರೆ, ಅವರು ಇಲ್ಲಿ ಕಂಪಲ್ಸರಿ ಇರಬೇಕೆಂದು ಒಂದು ಆದೇಶ ಕೊಡಬೇಕು. ಅಧಿವೇಶನ ನಡೆಯುವಾಗ ಅವರು ಬರಬೇಕು. ಕೇಳಬೇಕು.

ಮಾನ್ಯ ಮುಖ್ಯ ಮಂತ್ರಿಗಳು ಕೂಡ ಅವರಿಗೆ ಆದೇಶ ಕೊಡಬೇಕು. ಇಲ್ಲ ನನ್ನ ಮಾತು ಕೇಳುತ್ತಾರೆ ಸಾಕು, ಬೇರೆಯವರ ಮಾತುಗಳನ್ನು ಕೇಳುವುದರ ಬದಲು, ಸದನಕ್ಕೆ ಬಂದರೆ ಬಂದರು, ಹೋದರೆ ಹೋದರು ಎಂದರೆ ನಿಜವಾಗಿಯೂ ಈ ಪ್ರಜಾಪ್ರಭುತ್ವದಲ್ಲಿ ನಾವು ಏನು ಚರ್ಚೆಯಿಂದ ಸರ್ಕಾರ ನಡೆಸುತ್ತೇವೆ, debate is very important in Parliamentary democracy, ಎನ್ನತಕ್ಕಂತಹ ನಂಬಿಕೆ ಇದ್ದರೆ, ತಾವು ಆಹ್ವಾನ ಮಾಡಿ. ಇಲ್ಲದಿದ್ದರೆ, ಹೀಗೇ ನಡೆಯುತ್ತದೆ, ಚಲ್ತಾ ಹೈ, ಎಂದರೆ, ಚಲ್‌ನೇ ದೋ. ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ 2008-09ನೇ ಸಾಲಿನ ಬಜೆಟ್‌ನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸದನದಲ್ಲಿ ಮಂಡಿಸಿದ್ದಾರೆ. ಈ ಬಜೆಟ್ ಒಂದು ದೃಷ್ಟಿಯಿಂದ ಎಲ್ಲರನ್ನೂ ಖುಷಿ ಪಡಿಸತಕ್ಕಂತಹ ಒಂದು ಬಜೆಟ್. ಆದರೆ ನಿಜವಾಗಿಯೂ ಯಾವ ವರ್ಗದವರು ಖುಷಿ ಪಡಬೇಕು ಮತ್ತು ಯಾವ ವರ್ಗದವರಿಗೆ ಲಾಭವಾಗಬೇಕಿತ್ತು, ಆ ವರ್ಗದ ಜನರ ಬಗ್ಗೆ ಇದರಲ್ಲಿ ಏನೂ ಇಲ್ಲ. ಕೇವಲ ಬೇಕಾದಂತಹ ಸಂಘ ಸಂಸ್ಥೆಗಳ ಹೆಸರುಗಳನ್ನು ತೆಗೆದುಕೊಂಡು ಅವನ್ನು ನಮೂದು ಮಾಡಿ ವೈಯಕ್ತಿಕವಾಗಿ ಅವುಗಳ ಹೆಸರುಗಳನ್ನು ಇಲ್ಲಿ ಹೇಳಿ, ಅವರಿಗೆ ಖುಷಿಪಡಿಸತಕ್ಕಂತಹ ಕೆಲಸ ಈ ಬಜೆಟ್‌ನಲ್ಲಿ ಮಾಡಿದ್ದಾರೆ. ಆದಕ್ಕಾಗಿ ಇದು pleases all people ಎನ್ನುವ ಹಾಗೆ ಎಲ್ಲರಿಗೆ ಖುಷಿ ಪಡಿಸತಕ್ಕಂಥದ್ದಕ್ಕೆ ಅವರು ಹೋಗಿದ್ದಾರೆ. ಆದರೆ ನಿಜವಾಗಿಯೂ ಇದರಲ್ಲಿ ಏನಿದೆ ಎಂದು ಯಾರಿಗೂ ಇನ್ನೂ ಅರ್ಥವಾಗಿಲ್ಲ. ಏಕೆಂದರೆ ಯಾವಾಗ ನಾವು ಈ ಬಜೆಟನ್ನು ಅನುಷ್ಠಾನಕ್ಕೆ ತರುತ್ತೇವೆ, ಆಗ ಜನರಿಗೆ ನಿಜವಾಗಿಯೂ ಇದರಲ್ಲಿ ಏನಿದೆ ಎಂದು ಗೊತ್ತಾಗುತ್ತದೆ. ಎಷ್ಟರ ಮಟ್ಟಿಗೆ ಈ ರಾಜ್ಯದ ಜನತೆಗೆ ಮತ್ತು ರೈತರಿಗೆ ಉಪಯೋಗವಾಗಿದೆ, ಅಥವಾ ಈ ರಾಜ್ಯದ ಸಾಮಾನ್ಯ ವರ್ಗಕ್ಕೆ ಉಪಯೋಗವಾಗಿದೆ, ಈ ರಾಜ್ಯದ ಕಾರ್ಮಿಕ ವರ್ಗಕ್ಕೆ ಉಪಯೋಗವಾಗಿದೆ, ಈ ರಾಜ್ಯದ ಅಸ್ಪೃಷ್ಯರಿಗೆ ಇದರಿಂದ ಅನುಕೂಲವಾಗಿದೆ, ಅಥವಾ ಈ ರಾಜ್ಯದಲ್ಲಿರತಕ್ಕಂತಹ ಮಧ್ಯಮ ಮತ್ತು unemployed youthsಗೆ ಅನುಕೂಲವಾಗಿದೆ, ಎನ್ನತಕ್ಕಂಥದ್ದು ಆ ಮೇಲೆ ಗೊತ್ತಾಗುತ್ತದೆ. ಏಕೆಂದರೆ ಅವರು ಪ್ರತಿಯೊಂದು ಹೇಳಿಕೊಂಡು ಹೋದರು. ಹೇಗೆಂದರೆ, 30,000 ದಿಂದ 40,000ಕ್ಕೆ ಒಂದು ಮನೆಯನ್ನು ಕಟ್ಟಿಸುವುದು, ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆ, 10ಹೆಚ್. ಪಿ. ಪಂಪ್‌ಸೆಟ್ಸ್‌ಗಳಿಗೆ ನಾವು ರೈತರಿಗೆ ಉಚಿತವಾಗಿ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ. ಇದು ಹೇಳಿಕೊಂಡು ಹೋದಮೇಲೆ naturally ಬಹಳಷ್ಟು ಜನ ಖುಷಿ ಪಟ್ಟು ರೈತರ ಹೆಸರಿನಲ್ಲಿ ಇಷ್ಟೊಂದು ಕನಿಕರ ತೋರಿಸಿದ್ದಾರೆ, ಬಡವರ ಮೇಲೆ ಕನಿಕರ ತೋರಿಸಿದ್ದಾರೆ ಮತ್ತು ಅರ್ಬನ್ ಏರಿಯಾಗಳಿಗೂ ಹಣ ಕೊಡುತ್ತೇವೆಂದು ಹೇಳಿದ್ದಾರೆ. ಬಹಳ ಒಳ್ಳೆಯ ಕೆಲಸವನ್ನು ಅವರು ಮಾಡಿದ್ದಾರೆಂಬ ಅಭಿಪ್ರಾಯ ಮೇಲ್ನೋಟಕ್ಕೆ ಬರುವುದಲ್ಲದೆ, ನಾನು ಮಾಧ್ಯಮದಲ್ಲಿ ಕೂಡ ನೋಡಿದೆ. ಅನೇಕ ಮಾಧ್ಯಮಗಳವರು ಸಾಕಷ್ಟು ಹೊಗಳಿಕೆಯಿಂದ ಬರೆಗಿರುವುದನ್ನು ಕೂಡ ನೋಡಿದೆ. ಕೆಲವು ಕಡೆ Cautions ಮಾಡಿದ್ದು ಕೂಡ ನೋಡಿದೆ. ಮಾನ್ಯ ಮುಖ್ಯಮಂತ್ರಿಗಳಂತೂ ನಾನು ಯಾರೂ ಈ ಸದನದಲ್ಲಿ ಮಂಡಿಸದೇ ಇರುವಂತಹ ಬಜೆಟನ್ನು ಈ ಸದನದಲ್ಲಿ ಮಂಡಿಸಿದ್ದೇನೆ, ಬಹುಶಃ ಇದಕ್ಕೆ ಎಲ್ಲರೂ ಒಪ್ಪಿಗೆ ಕೊಡುತ್ತಾರೆ, ಅಂಥದೆ ಬಜೆಟನ್ನು ನಾನು ಮಂಡಿಸಿ ಜನರ ಮನಸ್ಸನ್ನು ಗೆದ್ದಿದ್ದೇನೆ ಎನ್ನತಕ್ಕಂತಹ ಭ್ರಮೆಯಲ್ಲಿ ಅವರಿದ್ದಾರೆ. ಈ ಬಜೆಟ್ ಪಾರ್ಲಿಮೆಂಟ್ ಚುನಾವಣೆ ದೃಷ್ಟಿಯಿಂದ ತಯಾರು ಮಾಡಿದಂತಹ ಬಜೆಟ್ ಒಂದು ಕಡೆ.

ಎರಡನೆಯದು ನೀವು ಅಧಿಕಾರವನ್ನು ಕೈಯಲ್ಲಿ ಇಟ್ಟುಕೊಳ್ಳಬೇಕೆನ್ನತಕ್ಕಂತಹ ದೃಷ್ಟಿಯಿಂದ ನಿಮ್ಮ ಮೆಜಾರಿಟಿಯನ್ನು ಮಾಡಿಕೊಳ್ಳಬೇಕೆಂದು ಕೇಳಿ ಕೆಲವು ಶಾಸಕರಿಗೆ ಆಸೆ ಆಕಾಂಕ್ಷೆಗಳನ್ನು ತೋರಿಸಿ ಅಧಿಕಾರವನ್ನು ಕೊಟ್ಟು, ಇವತ್ತು ಏನು ಒಳಗಡೆ ತೆಗೆದುಕೊಂಡಿದ್ದೀರಿ, ಅವರ ಬೈ ಎಲೆಕ್ಷನ್ ಬಂದರೂ ಕೂಡ, ಯಾವ ರೀತಿಯಾಗಿ ಅದನ್ನು ಬಗೆಹರಿಸಿಕೊಳ್ಳಬೇಕೆಂಬ ದೃಷ್ಟಿಯಿಂದ ಈ ಬಜೆಟನ್ನು ಕೂಡ ಅದರ ಮೇಲೆ ಕಣ್ಣಿಟ್ಟು ಮಾಡಿದ್ದೀರಿ. ಎರಡನೆಯದು ಬಹುಮತವನ್ನು ಪಡೆಯುವುದಕ್ಕೋಸ್ಕರ ಅನೇಕ ಶಾಸಕರಿಗೆ ಇವತ್ತು ಹಣದ ಆಸೆ, ಅಧಿಕಾರದ ಆಸೆ, ಮತ್ತು ಅನೇಕ ರೀತಿಯಿಂದ ಆಸೆಗಳನ್ನು ತೋರಿಸಿ, ತಾವು ಪ್ರಜಾಪ್ರಭುತ್ವಕ್ಕೆ ದ್ರೋಹವನ್ನು ಮಾಡತಕ್ಕಂತಹ ಕೆಲಸವನ್ನು ಮಾಡಿದಿರಿ ಅಥವಾ ಪ್ರಜಾಪ್ರಭುತ್ವವನ್ನು ಕೊಲೆ ಮಾಡತಕ್ಕಂತಹ ಕೆಲಸವನ್ನು ಮಾಡಿದಿರಿ, ಅದನ್ನೂ ಕೂಡ ದೃಷ್ಟಿಯಲ್ಲಿ ಇಟ್ಟುಕೊಂಡು ಮುಂದೆ ಉಪ ಚುನಾವಣೆ ಬಂದರೆ, ಏನೇನು ಉಪಯೋಗವಾಗುತ್ತದೆ, ಯಾವ ಯಾವ ಭಾಗದಲ್ಲಿ ಏನೇನು ಮಾಡಿದರೆ ಸಹಾಯವಾಗುತ್ತದೆ. ಯಾವ್ಯಾವ ಜಾತಿಗಳಿಗೆ ಬಜೆಟ್‌ನಲ್ಲಿ ಪ್ರಾಮುಖ್ಯತೆ ಕೊಟ್ಟರೆ ನಮಗೆ ಅನುಕೂಲವಾಗುತ್ತದೆ ಎನ್ನತಕ್ಕಂತಹ ದೃಷ್ಟಿಕೋನವನ್ನು ಅವರು ಇಟ್ಟುಕೊಂಡು ಮಾಡಿದ್ದಾರೆ ಹೊರತಾಗಿ, ಸಮಗ್ರ ಕರ್ನಾಟಕದ ಅಭಿವೃದ್ಧಿಗಾಗಿ, ಸಮಗ್ರ ರೈತರ ಅಭಿವೃದ್ಧಿಗಾಗಿ, ಸಮಗ್ರ ಶೋಷಿತ ವರ್ಗದ ಜನರಿಗಾಗಿ ಮಾಡಿದಂತಹ ಬಜೆಟ್ ಅಲ್ಲ ಎನ್ನತಕ್ಕಂಥದ್ದನ್ನು ನಾನು ಸಾಬೀತು ಪಡಿಸುತ್ತೇನೆ. ಏಕೆಂದರೆ, ಇವರು ತಮ್ಮ ಬಜೆಟ್‌ನಲ್ಲಿ ಸಾಕಷ್ಟು populist measures ಅನ್ನು ಪ್ರಸ್ತಾಪ ಮಾಡಿದ್ದಾರೆ. ನಮ್ಮ ಕಡೆ ಒಂದು ಗಾದೆ ಮಾತು ಇದೆ. ಮಂತ್ರ ಹೇಳುವುದಕ್ಕಿಂತಲೂ ಉಗುಳೇ ಜಾಸ್ತಿ ಎಂದು. ಮಂತ್ರ ಹೇಳುವುದು ಕಡಿಮೆ, ನಾವು ಎದುರು ನಿಂತವರ ಮೇಲೆ ಉಗುಳುವುದೇ ಜಾಸ್ತಿ. ಹಾಗೆ ಇವತ್ತು ಇವರ ಬಜೆಟ್‌ನಲ್ಲಿ ಪ್ರತಿಯೊಂದು repetition ಇದೆ. ಒಂದೊಂದು ಕೋಟಿ ರೂಪಾಯಿಗೂ ಇದರಲ್ಲಿ ಬಂದಿದೆ. ಯಾವುದೋ ಒಂದು ಸಂಸ್ಥೆಗೆ ಎರಡು ಕೋಟಿ ರೂ. ಕೊಟ್ಟರು ಅದನ್ನೂ ಬಜೆಟ್‌ನಲ್ಲಿ ಹೇಳಿದ್ದಾರೆ. ಇಂಥವನ್ನೆಲ್ಲಾ mentionಮಾಡಿ ಯಾರೂ ಬಜೆಟ್ ತಯಾರು ಮಾಡುವುದಿಲ್ಲ. ಈಗ ಉದಾಹರಣೆಗೆ Endowment Department ಇದೆ. Endowment Department head ನಲ್ಲಿ ನೀವು 10ಕೋಟಿ, 20 ಕೋಟಿ, 50 ಕೋಟಿ ಮತ್ತು 100 ಕೋಟಿ ರೂ. ಎಂದು mention ಮಾಡಿ ತದನಂತರ ಉಳಿದಂಥದ್ದು ಅವರ departmental budget ನಲ್ಲಿ ಅದನ್ನು ಸೇರಿಸಿ ಇಂಥದ್ದಕ್ಕೆ ಇಷ್ಟು, ಈ ಗುಡಿಗೆ ಇಷ್ಟು, ಈ ಮಠಕ್ಕೆ ಇಷ್ಟು ಇಂತಹ ಸಂಸ್ಥೆಗೆ ಇಷ್ಟು ಎಂದು ಬರುತ್ತದೆ ಹೊರತಾಗಿ, ಬಜೆಟ್‌ನಲ್ಲೇ ಪ್ರಿಂಟ್ ಮಾಡಿ ಇಲ್ಲಿಯೇ ಓದತಕ್ಕಂಥದ್ದು, ಮಾನ್ಯ ಯಡಿಯೂರಪ್ಪನವರು ಉಪ ಮುಖ್ಯ ಮಂತ್ರಿಗಳಾದ ಮೇಲೆ ಮತ್ತು ಇವತ್ತು ಮುಖ್ಯ ಮಂತ್ರಿ ಆದ ಮೇಲೆ ನಾನು ನೋಡಿದ್ದು.

ಹಿಂದೆಂದೂ ಕೂಡ ಈ ರೀತಿ ಇರಲಿಲ್ಲ. ನೀವು ಬೇಕಾದರೆ 1972 ರ ಬಜೆಟ್‌ನ್ನು ತೆಗೆದು ನೋಡಿ. ಘೋರ್ಪಡೆಯಂತವರು ಮಂಡಿಸಿರುವ ಬಜೆಟ್‌ನ್ನು ತೆಗೆದು ಬೇಕಾದರೆ ನೋಡಿ. ಮಾನ್ಯ ರಾಮಕೃಷ್ಣ ಹೆಗ್ಡೆಯವರು ಮಂಡಿಸಿದ್ದ ಬಜೆಟ್‌ನ್ನು ತೆಗೆದುಕೊಂಡು ನೋಡಿ. ಬೇರೆ ಯಾರ ಬಜೆಟನ್ನು ತೆಗೆದುಕೊಂಡು ನೋಡಿದರೂ ಸಹ ವೈಯಕ್ತಿಕವಾಗಿ ಸಂಸ್ಥೆಗಳ ಹೆಸರುಗಳನ್ನು ಹೇಳಿ, ಸಣ್ಣ ಪುಟ್ಟ ಸಂಸ್ಥೆಗಳ ಹೆಸರನ್ನು

mention ಮಾಡಿ ಇಲ್ಲಿ ಸದನದ ಸಮಯವನ್ನು ಯಾರೂ ಕಳೆದಿಲ್ಲ. ಆದರೆ ಇವೊತ್ತು ಆ ರೀತಿ ಇವರು ಮಾಡಿದ್ದು ಏಕೆಂದರೆ ಮೆಚ್ಚುಗೆಯನ್ನು ಪಡೆದುಕೊಳ್ಳಬೇಕಲ್ಲ, ಚಪ್ಪಾಳೆಯನ್ನು ಗಿಟ್ಟಿಸಿಕೊಳ್ಳಬೇಕಲ್ಲ, ಜನರಿಗೆ ಗೊತ್ತಾಗಬೇಕಲ್ಲ, ನೋಡಿ ನಾನು ಕೊಟ್ಟಿದ್ದೇನೆ, ಇಂಥ ಮಠಕ್ಕೆ ಇಷ್ಟು ದುಡ್ಡನ್ನು ಕೊಟ್ಟೆ, ಇಂಥ ಸಂಸ್ಥೆಗೆ ಇಷ್ಟು ದುಡ್ಡನ್ನು ಕೊಟ್ಟೆ, ಇಂಥ ಸಂಘಕ್ಕೆ ಇಷ್ಟು ಸಹಾಯ ಮಾಡಿದೆ ಎಂದು ಹೇಳಿಕೊಳ್ಳತಕ್ಕಂಥ ದೃಷ್ಟಿಯಿಂದ ಈ ರೀತಿಯ ಕೆಲಸವನ್ನು ಇವರು ಮಾಡಿದ್ದಾರೆ. ಇಲ್ಲಿ ಇದನ್ನು ನಾವು ನೋಡಿದರೆ ಖಂಡಿತವಾಗಿ ಇದರಿಂದ ಯಾವ ಒಂದು ಪ್ರಯೋಜನ ಕೂಡ ಆಗುವುದಿಲ್ಲ. ಆದಕ್ಕಾಗಿಯೇ ನಾನು ಹೇಳಿದ್ದು, ಮಂತ್ರಕ್ಕಿಂತ ಉಗುಳೇ ಜಾಸ್ತಿ ಇದರಲ್ಲಿ ಇದೆ ಎನ್ನತಕ್ಕಂಥ ಮಾತನ್ನು ನಾನು ಹೇಳಬಯಸುತ್ತೇನೆ. ಮಾನ್ಯ ಯಡಿಯೂರಪ್ಪನವರೇ ಈ ಹಿಂದೆ 2006 ರಲ್ಲಿ 2007ರಲ್ಲಿ ಒಂದೆರಡು ಬಜೆಟ್‌ಗಳನ್ನು ಏನು ಮಂಡಿಸಿದ್ದರೋ, ಅದಕ್ಕೂ ಮತ್ತು ಇದಕ್ಕೂ ಏನೂ ವ್ಯಾತ್ಯಾಸವಿಲ್ಲ. ಪಂಪ್‌ಸೆಟ್‌ಗೆ ಸಂಬಂಧಪಟ್ಟಂತೆ ಹೊಸ exemption ಕೊಟ್ಟಿರುವುದೊಂದನ್ನು ಬಿಟ್ಟರೆ ಬಾಕಿಯದೆಲ್ಲವೂ ಕೂಡ ಹಿಂದೆ ಇದ್ದ ಯೋಜನೆಯನ್ನೇ ಮುಂದುವರಿಸತಕ್ಕಂಥದ್ದು ಅಥವಾ improve ಮಾಡತಕ್ಕಂಥ ಯೋಜನೆಗಳು ಅಥವಾ ಇರುವ ಯೋಜನೆಗೆ ಹೊಸ ಹೆಸರುಗಳನ್ನು ಕೊಟ್ಟು ನಡೆಸತಕ್ಕಂಥದ್ದು. ಇಂಥವುಗಳನ್ನು ಬಿಟ್ಟರೆ ಬೇರೆ ಯಾವುದೇ ರೀತಿಯಿಂದ ಹೊಸ ಯೋಜನೆಗಳು ಇವೊತ್ತಿನ ದಿವಸ ಈ ಬಜೆಟ್‌ನಲ್ಲಿ ಹೇಳಿಲ್ಲ. ಇದರ ಜೊತೆ ಜೊತೆಯಲ್ಲಿ ಕಳೆದ ಎರಡು ಬಜೆಟ್‌ನಲ್ಲಿ ಸುಮಾರು ಮುನ್ನೂರು ಆಶ್ವಾಸನೆಗಳನ್ನು ಕೊಟ್ಟಿದ್ದರು. ಮಾನ್ಯ ಯಡಿಯೂರಪ್ಪನವರೆ ಹಿಂದೆ ಮಂಡಿಸಿರುವ ಬಜೆಟ್‌ನ ಎರಡು ಪುಸ್ತಕಗಳನ್ನು ತೆಗೆದು ನೋಡಿದರೆ ಮತ್ತು ಇಲ್ಲಿ ಈ ಸದನದಲ್ಲಿ ಹಿಂದೆ ಕೊಟ್ಟಂಥ ಆಶ್ವಾಸನೆಗಳನ್ನು ನೋಡಿದರೆ ಸುಮಾರು ಮುನ್ನೂರು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಆ ಮುನ್ನೂರು ಆಶ್ವಾಸನೆಗಳಲ್ಲಿ ಅವರು ಈಡೇರಿಸಿದ್ದೇ hardly ಸುಮಾರು ಎಪ್ಪತ್ತರಿಂದ ಎಪ್ಪತ್ತೈದು ಮಾತ್ರ. ಇಡೀ ವರ್ಷ ಅದು ಹೋಯಿತು. ಆದರೆ ಉಳಿದಂಥವುಗಳನ್ನು ಅವರಿಗೆ ಈಡೇರಿಸುವುದಕ್ಕೆ ಆಗಲಿಲ್ಲ. ಆದರೆ ಆ ಸಂದರ್ಭದಲ್ಲಿ ಅವರ ಮನಸ್ಸಿನಲ್ಲಿ ಏನಿತ್ತು? ಚುನಾವಣೆ ಯಾವ ಸಂದರ್ಭದಲ್ಲಾದರೂ ಬರಬಹುದು, ಸಮ್ಮಿಶ್ರ ಸರ್ಕಾರ ಯಾವಾಗಲಾದರೂ ಬೀಳಬಹುದು, ಆ ರೀತಿ ಸರ್ಕಾರ ಬಿದ್ದ ತಕ್ಷಣ ನಾವು election ಗೆ ಹೋದರೆ ಈಗಾಗಲೇ ನಾವು ಕೊಟ್ಟಿರುವಂಥ ಭರವಸೆಗಳ ಮೇಲೆ ಚುನಾವಣೆಗೆ ಹೋಗೋಣ ಎನ್ನತಕ್ಕಂಥ ದೃಷ್ಟಿಯಿಂದ ಮತ್ತು ಸಮ್ಮಿಶ್ರ ಸರ್ಕಾರದಲ್ಲಿ ಪೈಪೋಟಿ ಇದ್ದ ಕಾರಣ ಇವರು ಏನು ಮಾಡಿದರೆಂದರೆ, ಇವರು ಕೊಟ್ಟಿದ್ದೇ ಕೊಟ್ಟಿದ್ದು ಭರವಸೆಗಳನ್ನು. ಆದರೆ ಅದನ್ನು ಅನುಷ್ಠಾನದಲ್ಲಿ ತರಲಿಲ್ಲ. ಇಂಥದ್ದು ಅನೇಕ ವಿಚಾರಗಳಿವೆ. ತದನಂತರ, ಈ ಬಾರಿ ಕೂಡ ಅದೇ ರೀತಿಯಾಗಿ ಅನೇಕ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಈ ಆಶ್ವಾಸನೆಗಳನ್ನು ಇವರು ಕಾರ್ಯಗತಗೊಳಿಸಬೇಕೆಂದರೆ ನನಗನ್ನಿಸಿದ ಮಟ್ಟಿಗೆ ಇನ್ನೂ ಹತ್ತು ವರ್ಷವೋ, ಹದಿನೈದು ವರ್ಷಗಳವರೆಗೆ ಅಧಿಕಾರವನ್ನು ಇವರ ಕೈಗೆ ಕೊಡಬೇಕಾಗುತ್ತದೋ ಏನೋ ನನಗೆ ಗೊತ್ತಿಲ್ಲ, ಅಥವಾ ಅಷ್ಟು ವರ್ಷಗಳವರೆಗೆ ನಾನು ಇರುತ್ತೇನೆ ಎಂದು ತಿಳಿದುಕೊಂಡು ಇವರು ಈ ರೀತಿ ಮಾಡಿದ್ದಾರೋ ಏನೋ ನನಗೆ ಗೊತ್ತಿಲ್ಲ. ಇವೊತ್ತು ಇವರು ಕೊಟ್ಟಿರುವ ಎಲ್ಲಾ ಆಶ್ವಾಸನೆಗಳು ಮತ್ತು ಅದಕ್ಕೆ ಬೇಕಾದಂಥ ಹಣವನ್ನು ನಾವು ನೋಡಿದಾಗ ನಿಜವಾಗಿಯೂ ಕೂಡ ಇವೆಲ್ಲವುಗಳನ್ನು

ಅನುಷ್ಠಾನದಲ್ಲಿ ತರುವುದಕ್ಕೆ ಸಾಧ್ಯವಿಲ್ಲವೆನ್ನತಕ್ಕಂಥ ಬಜೆಟ್ ಇದಾಗಿದೆ. ಹೊಸ ಕಾರ್ಯಕ್ರಮಗಳು ಅಷ್ಟಾಗಿ ಇದರಲ್ಲಿ ಇಲ್ಲ. ನಾನು ಈಗಾಗಲೇ ಹೇಳಿದ ಹಾಗೆ ನಾಲ್ಕೈದು ಕಾರ್ಯಕ್ರಮಗಳನ್ನು ಬಿಟ್ಟರೆ ಬೇರೆ ಯಾವ ಹೊಸ ಕಾರ್ಯಕ್ರಮಗಳನ್ನು ಇದರಲ್ಲಿ ಅಳವಡಿಸಿಕೊಂಡಿಲ್ಲ. ಇದರ ಜೊತೆ ಇವರು ಯೋಜನೆಗಳನ್ನು ಅನುಷ್ಠಾನದಲ್ಲಿ ತರುವುದಕ್ಕೆ ಏನು ಇವೊತ್ತು ಹಣ ಬೇಕಾಗಿದೆ ಆ ಹಣದ ಕೊರತೆ ಕೂಡ ಇದೆ. ಏನು resource mobilize ಮಾಡುತ್ತೇವೆ ಎನ್ನತಕ್ಕಂಥ ವಾಗ್ದಾನವನ್ನು ಇವರು ಮಾಡಿದ್ದಾರೋ, ಆ ವಾಗ್ದಾನವನ್ನು ನಾವು ನೋಡಿದರೆ ಮತ್ತು ಇವರ resource mobilize ಮಾಡುವ ಪದ್ಧತಿಯನ್ನು ನಾವು ನೋಡಿದರೆ ಖಂಡಿತವಾಗಿ ಇವುಗಳಲ್ಲಿ ಒಂದಕ್ಕೊಂದಕ್ಕೆ ತಾಳಮೇಳಗಳಿಲ್ಲ ಮತ್ತು ಅಷ್ಟೊಂದು resource mobilize ಮಾಡುವುದಕ್ಕೆ ಸಾಧ್ಯವಿಲ್ಲವೆನ್ನತಕ್ಕಂಥ ಮಾತನ್ನೂ ಕೂಡ ನಾನು ಅವರಿಗೆ ಹೇಳುತ್ತಿದ್ದೇನೆ. ಏಕೆಂದರೆ ಈ ಹಿಂದೆ ಇದ್ದ ಬಜೆಟ್‌ಗಳೇನಿವೆ ಅಥವಾ ಈ ಹಿಂದ ಇದ್ದ ಅವರ ಮಾತನ್ನು ಏನು ಈ ಸದನದಲ್ಲಿ ಹೇಳಿದ್ದರೋ ಅದನ್ನೇ ಮೊನ್ನೆ ಅವರು ಹೇಳಿದ್ದಾರೆ. ಎಷ್ಟು deficit ಆಯಿತು ಎಂದು ಹೇಳಿದ್ದಾರೆ. ಕೊನೆಗೆ ಎಲ್ಲಾ ಹೋಗಿ 78 ಕೋಟಿ ರೂಪಾಯಿ deficit ಬರುತ್ತದೆ, ಈ ಸಾರಿ ನಾವು surplus ಮಾಡುತ್ತೇವೆಂದಿದ್ದಾರೆ. ಆದರೆ ನಿಜವಾಗಿ ಇವರ ಕಳೆದ ಸಲದ ಬಜೆಟ್‌ನಲ್ಲಿ ಇವರ resource mobilization ಗೆ ಮತ್ತು ಇವರ expenditure ಗೆ ಅವೆರಡಕ್ಕೂ ಹೋಲಿಸಿದರೆ ಎರಡಕ್ಕೂ ಹೆಚ್ಚು ಕಡಿಮೆ ಮುನ್ನೂರು ಕೋಟಿ ರೂಪಾಯಿ ಅಲ್ಲೇ ವ್ಯತ್ಯಾಸ ಬರುತ್ತದೆ. ಆದರೆ ಇವರು ಕೊನೆಗೆ ತನ್ನ expenditure ನಲ್ಲಿ ಕಡಿತ ಮಾಡಿ resource mobilization ಜೊತೆಯಲ್ಲಿ adjust ಮಾಡಿಕೊಳ್ಳಬೇಕೆಂದು ಹೇಳಿ ಕೊನೆಗೆ 78 ಕೋಟಿ ರೂಪಾಯಿಗಳಿಗೆ ತಂದು ನಿಲ್ಲಿಸಿದ್ದಾರೆ. ನಾನು ಏಕೆ ಈ ಮಾತುಗಳನ್ನು ಹೇಳುತ್ತಿದ್ದೇನೆಂದರೆ, ಜನರಿಗೆ ಖುಷಿ ಪಡಿಸುವ ದೃಷ್ಟಿಯಿಂದ ನಿಮ್ಮಲ್ಲಿ ಹಣವಿಲ್ಲದೇ ಸ್ಕೀಂಗಳನ್ನು announce ಮಾಡುವುದು, ಯೋಜನೆಗಳನ್ನು ನಾವು ಅನುಷ್ಠಾನದಲ್ಲಿ ತರುತ್ತೇವೆ ಎಂದು ಹೇಳತಕ್ಕಂಥದ್ದು, ಇಂಥ ಕೆಲಸವನ್ನು ನೀವು ಏಕೆ ಮಾಡುತ್ತೀರಿ? ನೀವು ಇನ್ನೂ ಅಧಿಕಾರದಲ್ಲಿ 5 ವರ್ಷ ಇರಬೇಕೆನ್ನುವ ಇಚ್ಛೆ ಇದೆಯೆಂದು ನೀವೇ ಹೇಳುತ್ತೀರಿ. ಇನ್ನೊಂದು ಕಡೆ ನಿಮ್ಮ ಅನುಷ್ಠಾನ ಮಾಡತಕ್ಕಂಥ ಪದ್ಧತಿಯನ್ನು ನೋಡಿದರೆ ಖಂಡಿತವಾಗಿ ಅದು ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಇವೊತ್ತಿನ ದಿವಸ ಇಲ್ಲಿ ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಇನ್ನೊಂದು ವಿಚಾರ ಪತ್ರಿಕೆಯಲ್ಲಿ ನಾನು ನೋಡಿದೆ. ಈ ಸದನದ ಸದಸ್ಯರಾದ ವರ್ತೂರು ಪ್ರಕಾಶ್‌ರವರು ಸಿ.ಎಂ. ಮನೆಗೆ ಹೋದಾಗ ಮಾನ್ಯ ಮುಖ್ಯಮಂತ್ರಿಗಳು.....

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಸದನದಲ್ಲಿ ಚರ್ಚೆ ನಡೆಯುತ್ತಿರುವಾಗ ಮಧ್ಯೆ ಮಧ್ಯೆ ಬೇರೆ ಸದಸ್ಯರುಗಳು ಕುಳಿತುಕೊಂಡೇ ಮಾತನಾಡಬಾರದು. ಡಾ. ಪಾಟೀಲರೆ, ರಾಮದಾಸ್‌ರವರೆ, ನಿಮ್ಮ ನಿಮ್ಮ ಸ್ಥಳದಲ್ಲಿ ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಪತ್ರಿಕೆಯಲ್ಲಿ ಬಂದಿದ್ದನ್ನು ಹೇಳುತ್ತಿದ್ದೇನೆ. ವರ್ತೂರು ಪ್ರಕಾಶ್‌ರವರು ಏನೋ ಒಂದು ವಿಷಯದ ಮೇಲೆ ಸಿ.ಎಂ. ಮನೆಗೆ ಹೋದಾಗ ಅವರು *Tiffin* ಮಾಡುತ್ತಿದ್ದರೋ ಅಥವಾ ಏನೋ ಮಾಡುತ್ತಿದ್ದರಂತೆ. ಆ ಸಂದರ್ಭದಲ್ಲಿ ವರ್ತೂರು ಪ್ರಕಾಶ್‌ರವರು

ಒಂದು ವಿಷಯದ ಬಗ್ಗೆ ಕೇಳಿದಾಗ ಸಿ. ಎಂ. ಸಿಟ್ಟಿಗೆದ್ದು ಹೇಳಿದರಂತೆ. ಏನೆಂದು, "ಏನ್ರೀ, ನಾನು ರಾತ್ರಿ ಹಗಲು ಬಜೆಟ್ ತಯಾರು ಮಾಡುವುದರಲ್ಲಿ ಇದ್ದೇನೆ, ಇಂಥ ಸದಂರ್ಭದಲ್ಲಿ ನೀವು ಬಂದು ನನ್ನನ್ನು ಸತಾಯಿಸುತ್ತೀರಲ್ಲ" ಎಂದು ಹೇಳಿದರಂತೆ. ಪಾಪ, ಊಟ ಇಲ್ಲದೆ ಬಜೆಟ್‌ನ್ನು ತಯಾರು ಮಾಡುತ್ತಿದ್ದರು ಎಂಬ ಸುದ್ದಿ ಪತ್ರಿಕೆಯಲ್ಲಿ ಬಂದದ್ದನ್ನು ನಾನು ಓದಿದೆ. ಅಂದರೆ ಊಟ ಇಲ್ಲದೆ, ನಿದ್ರೆ ಇಲ್ಲದೇ ಸತತವಾಗಿ ಇವರು ಬಜೆಟನ್ನು ತಯಾರು ಮಾಡಿಕೊಟ್ಟಿದ್ದಾರೆ. ಎಂಥ ಬಜೆಟನ್ನು ತಯಾರು ಮಾಡಿಕೊಟ್ಟಿದ್ದಾರೆಂದರೆ ಎಲ್ಲದಕ್ಕೂ ಕೂಡ ನಾನು ಸಾಲ ತಂದು ನಿಮಗೆ ಕೆಲಸವನ್ನು ಮಾಡಿಕೊಡುತ್ತೇನೆ ಎನ್ನತಕ್ಕಂಥದ್ದನ್ನು ಹೇಳಿದರು. ಏಕೆಂದರೆ ಈ ಬಜೆಟನ್ನು ನೀವು ತೆಗೆದು ನೋಡಿ.15% resource mobilization ನಾನು ಸಾಲದಿಂದ ಮಾಡುತ್ತೇನೆ ಎನ್ನತಕ್ಕಂಥದ್ದನ್ನು ಹೇಳಿದ್ದಾರೆ. ಸುಮಾರು ಹೆಚ್ಚು ಕಡಿಮೆ 15%. ಇವರ total mobilazation ನಲ್ಲಿ 15% ಸಾಲದ ಮುಖಾಂತರ ನಾನು ಮಾಡುತ್ತೇನೆ ಎನ್ನತಕ್ಕಂಥದ್ದನ್ನು ಹೇಳಿದ್ದಾರೆ. ಈಗಾಗಲೇ ಸಾಲದ ಬಗ್ಗೆ ನೀವೇ ಕಡಿವಾಣವನ್ನು ಹಾಕಿಕೊಂಡಿದ್ದೀರಿ. Finance fiscal bill ಅನ್ನು ಇಲ್ಲಿಯೇ ನೀವು introduce ಮಾಡಿ ನಾವು 3% ಗಿಂತಲೂ ಹೆಚ್ಚು ಸಾಲವನ್ನು ಮಾಡಬಾರದು, ಈಗಾಗಲೇ 6% ಇದೆ, ಅದಕ್ಕಾಗಿ ನಾವು ಇನ್ನೂ ಹೆಚ್ಚು ಸಾಲಕ್ಕೆ ಹೋಗಬಾರದು ಎನ್ನತಕ್ಕಂಥ ಮಾತನ್ನು ನೀವೇ ಹೇಳಿದಾಗ ಅದನ್ನು ನಾವು ಈ ಸದನದಲ್ಲಿ ಒಪ್ಪಿಕೊಂಡಿದ್ದೇವೆ. ಈ ಹಿಂದಿನ ಸರ್ಕಾರಗಳೆಲ್ಲವೂ ಕೂಡ ಹೆಚ್ಚಿನ ಸಾಲವನ್ನು ಮಾಡಬಾರದು, ಅದಕ್ಕಾಗಿ ಒಂದು financial discipline ಇರಬೇಕೆಂದು ಹೇಳಿ ಕಡಿವಾಣ ಹಾಕಿಕೊಂಡು ನಾವು ಆದಷ್ಟು borrowing ಅನ್ನು ಕಡಿಮೆ ಮಾಡಿಕೊಂಡು ಈಗಗಾಲೇ ಏನು ಸಾಲವನ್ನು ಮಾಡಿದ್ದೇವೆ ಆ ಸಾಲವನ್ನು ಮರುಪಾವತಿ ಮಾಡತಕ್ಕಂಥದ್ದು, ಅರವತ್ತು ಸಾವಿರ ಕೋಟಿ ರೂಪಾಯಿಗಳ ಸಾಲ ಈಗಾಗಲೇ ಏನಿದೆ ಅದನ್ನು ಹಂತ ಹಂತವಾಗಿ ತೀರಿಸತಕ್ಕಂಥದ್ದು, ಮುಂದೆ ಸಾಲವನ್ನು ಕಡಿಮೆ ಮಾಡಿಕೊಳ್ಳತಕ್ಕಂಥದ್ದನ್ನು ಮಾಡಿ 3% ಗೆ ತರಬೇಕೆಂದು ಹೇಳಿರುವುದಕ್ಕೆ ಒಪ್ಪಿಗೆಯನ್ನು ಕೊಟ್ಟದ್ದಾಗಿದೆ. 3% ಆಗದಿದ್ದರೆ 6% ಆಗಬಹುದಾಗಿತ್ತು. ಆದರೆ ಇವೊತ್ತು ನೀವು 15% ಸಾಲವನ್ನು ಒಂದೇ ವರ್ಷದಲ್ಲಿ ಪಡೆಯುತ್ತಿರತಕ್ಕಂಥದ್ದನ್ನು ನೋಡಿದರೆ ನಿಮಗೆ resource mobilization ಮಾಡುವುದಕ್ಕೆ Capacity ಇಲ್ಲ, ಆದಕ್ಕಾಗಿಯೇ ನೀವು ಇವೊತ್ತಿನ ದಿವಸ ಸಾಲವನ್ನು ತೆಗೆದುಕೊಂಡು ನಿಮ್ಮ popular schemes ಅನ್ನು unproductive scheme ಗಳನ್ನು ಜಾರಿಯಲ್ಲಿ ತರತಕ್ಕಂಥ ಕೆಲಸವನ್ನು ನೀವು ಮಾಡುತ್ತಿದ್ದೀರಿ. ಈಗ ರೈತರಿಗೆ ನೀವು ಸಹಾಯ ಮಾಡಬೇಕು. ರೈತರ ಆರ್ಥಿಕ ಅಭಿವೃದ್ಧಿ ಮಾಡಬೇಕಾದಾಗ ಅದನ್ನು ಹೇಗೆ ಮಾಡುವುದು? ಆರ್ಥಿಕಾಭಿವೃದ್ಧಿ ಆಗಬೇಕೆಂದರೆ ರೈತರು ಹೆಚ್ಚು ಹೆಚ್ಚಾಗಿ ನೀರಾವರಿ ಕಡೆ ಹೋಗಬೇಕು.

ನೀರಾವರಿ ಹೆಚ್ಚಾದಾಗ ಮಾತ್ರ ರೈತರ ಬಾಳು ಹಸನಾಗುತ್ತದೆ. ಈಗ ಸುಮಾರು ನಮ್ಮ ಕರ್ನಾಟಕದಲ್ಲಿ ಒಟ್ಟು Geographical Area 190.50 ಲಕ್ಷ ಹೆಕ್ಟೇರ್ ಇದೆ. ಇದರಲ್ಲಿ dry land rain fed Area ಎಷ್ಟಿದೆ ಎಂದರೆ 75,00,000 ಹೆಕ್ಟೇರ್ ಇದೆ. ಇದರಲ್ಲಿ major irrigation ಗೆ 24.38 ಲಕ್ಷ ಹೆಕ್ಟೇರ್ ಬರುತ್ತದೆ. Minor Irrigation ನಲ್ಲಿ 10,14,000 ಹೆಕ್ಟೇರ್ ಬರುತ್ತದೆ. ಅಂದರೆ

ಒಟ್ಟಾರೆ 34,00,000 ಹೆಕ್ಟೇರ್ ನೀರಾವರಿ ಅಡಿಯಲ್ಲಿ ಬರುತ್ತದೆ. ಎಂದರೆ ಅದು Minor Irrigation and Major Irrigation ಎರಡು ಆಯಿತು. Dry land rain fed area 75,00,000 ಹೆಕ್ಟೇರ್ ಬರುತ್ತದೆ. Area under Horticulture 2,18,000 ಹೆಕ್ಟೇರ್, Potential area to be brought under irrigation 45,00,000 ಹೆಕ್ಟೇರ್ ತರಬೇಕು. ಅಂದರೆ 45,00,000 ಹೆಕ್ಟೇರ್‌ಅನ್ನು ನೀವು ನೀರಾವರಿ ವ್ಯಾಪ್ತಿಗೆ ತರಬೇಕಾಗಿದ್ದರೆ, ಆ ರೈತರ ಹೊಲಕ್ಕೆ ನೀರು ಕೊಡಬೇಕಾಗಿದ್ದರೆ, ನೀವು ಅದಕ್ಕೆ ಹಣ ಎಷ್ಟು ಇಟ್ಟಿದ್ದೀರಿ? ಎಷ್ಟು ವರ್ಷದಲ್ಲಿ ಇದನ್ನು improvement ಮಾಡಬೇಕು ಎನ್ನುವ ಗುರಿ ಇಟ್ಟುಕೊಂಡಿದ್ದೀರಿ? ಕೇವಲ 13% ಬಜೆಟ್. ಈ ರಾಜ್ಯದಲ್ಲಿ ಯಾವ ಮುಖ್ಯಮಂತ್ರಿಗಳು, ಯಾವ Finance Minister ಗಳು ಕೂಡ ಇಷ್ಟೊಂದು ಕಡಿಮೆ ಹಣ ಇಟ್ಟಿಲ್ಲ. ಮಾನ್ಯ ಅಧ್ಯಕ್ಷರೆ, ಈಗ ನಿಮಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. 2001ರಲ್ಲಿ ಮಾನ್ಯ ಎಸ್. ಎಂ. ಕೃಷ್ಣ ಅವರ ಕಾಲದಲ್ಲಿ irrigation ಗೆ ಸುಮಾರು 39% ಹಣ Plan ನಲ್ಲಿ ಇಟ್ಟಿದ್ದರೆ, 2002 ರಲ್ಲಿ ಕೂಡ ಮಾನ್ಯ ಎಸ್. ಎಂ. ಕೃಷ್ಣ ಅವರ ಕಾಲದಲ್ಲಿ 31% ಇಟ್ಟಿದ್ದು, 2003 ರಲ್ಲಿ 32%, 2004 ರಲ್ಲಿ 31%, 2004 ರಲ್ಲಿ ಮಾನ್ಯ ಸಿದ್ಧರಾಮಯ್ಯನವರ ಕಾಲದಲ್ಲಿ 25%, ಪುನಃ 2005 ರಲ್ಲಿ 29% ಇಟ್ಟಿದ್ದರೆ, 2006 ರಲ್ಲಿ ಮಾನ್ಯ ಯಡಿಯೂರಪ್ಪನವರ ಕಾಲದಲ್ಲಿ 26% ಹಾಗೂ 2007 ತಾವು ಕೊಟ್ಟಂತಹ ಬಜೆಟ್‌ನಲ್ಲಿ 17%, 2008 ರಲ್ಲಿ 13% ಇಟ್ಟಿದ್ದೀರಿ. ಅಂದರೆ ನೀವು ರೈತರ ಪರ ಇದ್ದೀರಾ? ಇಷ್ಟೆಲ್ಲಾ ಹೇಳಿಕೊಳ್ಳುತ್ತೀರಲ್ಲ, ಯಾವ ರೈತರ ಹೊಲಕ್ಕೆ ನೀರುಣಿಸಬೇಕು ಅಲ್ಲಿ ಹಣವನ್ನು ಕಡಿಮೆ ಮಾಡಿ, ಅಲ್ಲಿನ ಕೋಟ್ಯಾಂತರ ರೂಪಾಯಿಯನ್ನು ಇನ್ನೊಂದು ಕಡೆ ಸರಿಸಿ ಜನರ ಕಣ್ಣಲ್ಲಿ ಮಣ್ಣನ್ನು ಹಾಕತಕ್ಕಂಥ ಕೆಲಸವನ್ನು ಮಾಡುತ್ತಿದ್ದೀರಲ್ಲ, ಇದು ನಿಮಗೆ ಶೋಭೆ ತರುತ್ತದೆಯೇ? ನೀವು ಹೇಳಿದಿರಿ, ನಿಮ್ಮ ಬಜೆಟ್‌ನಲ್ಲಿ ಎಲ್ಲಿದೆ ಎಂದು ತೋರಿಸಿ ನೋಡೋಣ. ಈಗ ಕೊಟ್ಟಂತಹ ಬಜೆಟ್‌ನಲ್ಲಿ ಕೇವಲ 13% ಹಣ ಇಟ್ಟಿದ್ದೀರಿ. ಹಿಂದಿನ ಎಲ್ಲಾ ಸರ್ಕಾರಗಳು 39% ನಿಂದ 27 ರಿಂದ 28% ವರೆಗೆ ಹಣ ಇಟ್ಟಿದ್ದಾರೆ. ನೀವು ರೈತರ ಹೆಸರು ಹೇಳಿಕೊಂಡು ಪದೇ ಪದೇ ಎದೆ ಬಡಿದುಕೊಡು, ಇವತ್ತಿನ ದಿವಸ ಹಣ ಇಟ್ಟಿದ್ದು ಎಷ್ಟು? 13%. ಇದು ನಿಮ್ಮ ಕೆಲಸ. ನೀವು ರೈತರ ಪರ ಇದ್ದೀರಿ? ಇದು ನಮ್ಮ ದುರ್ದೈವ. ಮೂರು ಬಜೆಟ್‌ನಲ್ಲಿ ಕೂಡ ಅತ್ಯಂತ ಕಡಿಮೆ ಹಣ ರೈತರಿಗಾಗಿ ನೀವು ಇಟ್ಟು, ನೀವು ರೈತರ ಪರವಾದಿರಿ. ನಾವು 39% ಹಣ ರೈತರ ಏಳಿಗೆಗಾಗಿ, ಅವರಿಗೆ ನೀರಾವರಿಗಾಗಿ ಇಟ್ಟು ರೈತರ ವಿರೋಧಿಗಳಾದೆವು. ನಾನು ಹೋದ ಬಾರಿ ಈ ಮಾತನ್ನು ಪ್ರಸ್ತಾಪ ಮಾಡಿದೆ. ಪುನಃ ಇವತ್ತು ಕೂಡ ಅದೇ ಆಗಿದೆ. ಇದು ಏನಾಗಿದೆ ಎಂದರೆ ಖುಷಿ ಪಡಿಸುವುದಕ್ಕೋಸ್ಕರ Popularistic Scheme ಇದೆ, Unproductive ಇದೆ, ಅದನ್ನು ಮಾಡುವುದು. ಬಾಕಿ ನೋಡೋಣ. ಇದರಿಂದ assets create ಮಾಡುವಂತಹ ಕೆಲಸವಾಗುವುದಿಲ್ಲ. ಇವತ್ತು ನೀವು ಸುಮಾರು 3,468 ಕೋಟಿ ರೂಪಾಯಿ ಇಡುವಂತಹ ಹಣ ಏನಿದೆ, ಅದು 13% of your total Budget. ಅಂದರೆ ಇವತ್ತು 13% ಹಣವನ್ನು ರೈತರಿಗಾಗಿ ಇಟ್ಟು, ಎಷ್ಟು ಮೋಸ ಮಾಡೋದು? ಎಷ್ಟು ಸುಳ್ಳು ಹೇಳುವುದು? ಸತ್ಯದಿಂದ ಎಷ್ಟು ದೂರ ಇದ್ದೀರಿ ಎನ್ನುವುದಕ್ಕೆ ನಿಮ್ಮ

ಹಿಂದಿನ ಪುಸ್ತಕಗಳನ್ನು ತೆಗೆದುಕೊಳ್ಳಿ ಅಥವಾ ಈ ಸದನದಲ್ಲಿ ಎಂಟು ವರ್ಷದ ಅವಧಿಯಲ್ಲಿ ಕೊಟ್ಟಂತಹ ಅನೇಕ ಬಜೆಟ್‌ಗಳನ್ನು ತೆಗೆದುಕೊಳ್ಳಿ, ಯಾವ ಸರ್ಕಾರ ಕೂಡ ರೈತರಿಗೆ ಮೋಸ ಮಾಡಿಲ್ಲ. ನೀವು ಮೊಸಳೆ ಕಣ್ಣೀರು ಸುರಿಸಿ ರೈತರ ಪರ ಎಂದು ಹೇಳಿಕೊಳ್ಳುವವರು, ಇವತ್ತು dam ಕಟ್ಟುವುದಕ್ಕೆ, ಕೆರೆ ಕಟ್ಟುವುದಕ್ಕೆ, ಕಾಲುವೆ ಕಟ್ಟುವುದಕ್ಕೆ ನಿಮ್ಮಲ್ಲಿ ಹಣ ಇದೆಯೇ? ಇದು ರೈತರ ವಿರೋಧಿ ಸರ್ಕಾರ. ಆದರೆ ಇದು ಏಕೆ ರೈತರ ಪರ ಎಂದರೆ 10 HP Pump set ಗೆ exemption ಕೊಟ್ಟಿರುವುದಕ್ಕೆ ರೈತರ ಪರ ಸರ್ಕಾರ ಎನ್ನಬೇಕು. ಆದರೆ ಇಲ್ಲಿ ನಿಜ ಏನೆಂದರೆ, ಎಲ್ಲಿ ಅವರಿಗೆ ಆರ್ಥಿಕವಾಗಿ ಉತ್ಪಾದನೆಯಾಗುತ್ತದೆ, ಅವರ economic status ಎಲ್ಲಿ ಹೆಚ್ಚಿಗೆ ಆಗುತ್ತದೋ, ಅಲ್ಲಿ ಹಣ ಕೊಡಲಿಲ್ಲ. ಬೇರೆ ಬೇರೆ ಯೋಜನೆಗಳಿಗೆಲ್ಲ ಹಣ ಕೊಟ್ಟುಕೊಂಡು ಬಂದಿರಿ. ಬೇರೆ ಬೇರೆ ಸಣ್ಣ ಪುಟ್ಟ ಕೆಲಸಗಳನ್ನೆಲ್ಲ ನೀವು ಮಾಡಿಕೊಂಡು ಬಂದಿರಿ. ಆದರೆ ಇವತ್ತಿನ steel rate, cement rate, ಜೆಲ್ಲಿ rate, ಯಾವುದೇ inflation rate ತೆಗೆದುಕೊಂಡರೆ ಇವತ್ತಿನ ಬಜೆಟ್‌ನಲ್ಲಿ ನೀವು ಕನಿಷ್ಟ 8,000ಕೋಟಿ ರೂಪಾಯಿ ನೀರಾವರಿಗೆ ಇಡಬೇಕಾಗಿತ್ತು, ಆದರೆ ಇಟ್ಟಿಲ್ಲ. ಅದರ ಬಗಗೆ ನಿಮಗೆ ಆಸಕ್ತಿ ಇಲ್ಲ. ನಿಮಗೆ ಆಸಕ್ತಿ ಎಲ್ಲಿ ಎಂದರೆ Parliment ಚುನಾವಣೆ ಗೆಲ್ಲುವುದಕ್ಕೆ ಏನು ಬೇಕು, ತಕ್ಷಣ vote ಹಾಕಿಸಿಕೊಳ್ಳುವುದಕ್ಕೆ ಏನು ಬೇಕು, ತಕ್ಷಣ ನಾಳೆ ಗೆದ್ದು ಬರುವುದಕ್ಕೆ ಏನು ಬೇಕು, ಅದರ ಕಡೆ ನೀವು ಲಕ್ಷ್ಯವನ್ನು ಕೊಟ್ಟಿರಿ. ಹಿಂದಿನ ಸರ್ಕಾರಗಳು ಇದ್ದಿದ್ದರೆ ಅವರೂ ಕೂಡ ಹೀಗೆ ಮಾಡುತ್ತಿದ್ದರು. ಆದರೆ ಹಿಂದಿನ ಜನ ಇಲ್ಲ. Infra-structure create ಮಾಡಬೇಕು, ವಿದ್ಯುಚ್ಛಕ್ತಿ ಉತ್ಪಾದನೆ ಮಾಡಬೇಕು, ನೀರಾವರಿ ಮಾಡಬೇಕು ಎನ್ನುವಂತಹ ಪ್ರಯತ್ನವನ್ನು ಅವರು ಮಾಡಿದರೆ, ನೀವು ನಿಮ್ಮ ಮೂರೂ ಬಜೆಟ್‌ನಲ್ಲಿ ನಿಮ್ಮ ಗುಣಗಳನ್ನು ತೋರಿಸಿದ್ದೀರಿ. ಅನೇಕ ಸಾರಿ, ಕೂಸಿನ ಗುಣ ತೊಟ್ಟಿಲಿನಲ್ಲಿಯೇ ಅದು ಹೇಗಿದೆ, ಒಳ್ಳೆಯದೋ, ಕೆಟ್ಟದ್ದೋ ಎಂದು ಅದನ್ನು ನೋಡಿದಾಗ ಗೊತ್ತಾಗುತ್ತದೆ, ಹಾಗೆ ಈ ಮೂರು ಬಜೆಟ್ ನೋಡಿದಾಗ ಗೊತ್ತಾಗುತ್ತದೆ. ನೀವು ರೈತರ ಪರ ಅಥವಾ ವಿರೋಧಿಗಳೋ ಎನ್ನುವುದು ರಾಜ್ಯದ ಜನತೆಯ ತೀರ್ಮಾನಕ್ಕೆ ಬಿಡುತ್ತೇನೆ. ಮಾನ್ಯ ಅಧ್ಯಕ್ಷರೆ, ನೀವು ಕೂಡ ಅವಕಾಶ ಸಿಕ್ಕರೆ ಸರ್ಕಾರ ಹೇಗೆ ಮಾಡಿದೆ ಎನ್ನುವ ಬಗ್ಗೆ ಪ್ರಸ್ತಾಪ ಮಾಡಿ. ಅದಕ್ಕಾಗಿ ಇವತ್ತು ಇವರು, ರೈತರ ಪರ, ಬಡವರ ಪರ ಮತ್ತು ನಾವು ರೈತರಿಗಾಗಿ ಹೋರಾಟ ಮಾಡಿಕೊಂಡು ಬಂದಿದ್ದೇವೆ ಹಾಗೂ ಇವತ್ತು ಸಮಾಧಾನವಾಗಿದೆ ಎಂದು ಹೇಳಿದ್ದಾರೆ. ಏನು ಸಮಾಧಾನವಾಗಿದೆ? ನೀರಾವರಿ ಯೋಜನೆಗೆ ಕಡಿಮೆ ಹಣ ಕೊಟ್ಟು, ಒಬ್ಬ ಆರ್ಥಿಕ ಸಚಿವರಾಗಿ, ಮಾನ್ಯ ಮುಖ್ಯಮಂತ್ರಿಗಳಾಗಿ, ಸಾರ್ವಭೌಮತ್ವ ನಿಮ್ಮಲ್ಲೆ ಇದೆ. ನೀವು ಎಲ್ಲಾ ಇಲಾಖೆಯ ಮಾಸ್ತರು. ಯಾರೂ ನಿಮ್ಮನ್ನು ಕೇಳುವವರಿಲ್ಲ, ಹೇಳುವವರಿಲ್ಲ. ನೀವೇನು ಮಾಡುತ್ತೀರೋ ಅದೇ ಸರಿ. ಹಾಗಿದ್ದಾಗ ಸಂಪೂರ್ಣ authority, ಈಗ dicator ಆಗುವುದು ಒಂದು ಮಾತ್ರ ಉಳಿದಿದೆ. ಸಂವಿಧಾನ ಇರುವವರೆಗೆ ಅದೊಂದು ಮಾತ್ರ ಸಾಧ್ಯವಿಲ್ಲ. ಆದರೆ ಎಲ್ಲಾ ಕೂಡ ನಿಮಗೆ ಅಧಿಕಾರ ಇದೆ. ಯಾರನ್ನು ಮಿನಿಸ್ಟರ್ ಅನ್ನು ಆಗಿ ಇಟ್ಟುಕೊಳ್ಳಬಹುದು, ಯಾರನ್ನು ತೆಗೆಯಬಹುದು, ಯಾರಿಗೆ ಖಾತೆ ಹಂಚಬಹುದು, ಯಾರಿಗೆ ಹಂಚದೇ ಇರಬಹುದು, ಯಾರಿಗೆ ಸುಮ್ಮನೆ ಕೂರಿಸಬಹುದು, ಯಾರನ್ನು ಮನೆಗೆ ಕಳುಹಿಸಬಹುದು, ಇದೆಲ್ಲ ಅಧಿಕಾರವನ್ನು ಕೂಡ ಇಟ್ಟುಕೊಂಡಿದ್ದೀರಿ.

ಆದರೆ ಇಲ್ಲಿ ಮಾತ್ರ ರೈತರಿಗೆ ನೀವು ಸರದಿ ಆತ್ಮಹತ್ಯೆ ಮಾಡಿಕೊಳ್ಳಿ, ನಿಮ್ಮ ಹೊಲಕ್ಕೆ ನೀರು ಏಕೆ ಎಂದೇಳಿ ಇದನ್ನು ಇವತ್ತಿನ ದಿವಸ ಪ್ರಸ್ತಾಪ ಮಾಡಿದ್ದೀರಿ. ಈ ರೀತಿಯಾಗಿ ನೀರಾವರಿ ವಿಚಾರದಲ್ಲಿ ರೈತರ ಬಗ್ಗೆ ಇರತಕ್ಕಂಥ ಆಸಕ್ತಿ. ಈಗ ಮನುಷ್ಯನಿಗೆ ಬೇಕಾಗಿರುವುದು ಕುಡಿಯುವ ನೀರು. ಕುಡಿಯುವ ನೀರಿಗೆ ಬಹಳ ಮಹತ್ವ ಇದೆ. ಅದಕ್ಕೆ ನೀವು importance ಕೊಡುತ್ತೇವೆಂದು ಹೇಳಿ, ಎಲ್ಲವನ್ನೂ ಕೂಡ ನಾವು ಮಾಡಿಯೇ ತೋರಿಸುತ್ತೇವೆ, ಇದು ನನ್ನ ಸಂಕಲ್ಪ.

ನಿಮ್ಮ ಸಂಕಲ್ಪ ಏನೆಂಬುದರ ಬಗ್ಗೆ ನಾನು ಹೇಳುತ್ತೇನೆ. ನೀವು ಏನೇನು ಹೇಳಿಕೊಂಡಿದ್ದೀರಿ, ಏನು ಮಾಡಿದ್ದೀರೆನ್ನತಕ್ಕಂಥಾದನ್ನು ನಾನು ಹೇಳುತ್ತೇನೆ. ಕುಡಿಯುವ ನೀರಿನ ಸಮಸ್ಯೆ ಇದೆ. ಎಲ್ಲಾ ಕಡೆಗಳಲ್ಲೂ ಈಗ ಭೀಕರವಾದಂಥ ಬರಗಾಲವಿದೆ, ಅದು ತಮಗೂ ಗೊತ್ತಿದೆ. ಉತ್ತರ ಕರ್ನಾಟಕದಲ್ಲಂತೂ ಎಲ್ಲಾ ಜಿಲ್ಲೆಗಳಲ್ಲಿ ಇವತ್ತಿನ ದಿವಸ ಭೀಕರವಾದಂಥ ಬರಗಾಲವಿದೆ. ಸುಮಾರು 179 ತಾಲ್ಲೂಕುಗಳ ಪೈಕಿ ಅರ್ಬನ್ ತಾಲ್ಲೂಕುಗಳನ್ನು ಬಿಡಿ, ನಾವು ನಿಜವಾದಂಥ 175 ತಾಲ್ಲೂಕುಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಅದರಲ್ಲಿ ಸುಮಾರು 124 ತಾಲ್ಲೂಕುಗಳಲ್ಲಿ ಇವತ್ತು ಬರಗಾಲದ ಭೀತಿ, ಛಾಯೆ ಹರಡಿದೆ. ಕುಡಿಯುವ ನೀರಿಗೆ ತೊಂದರೆ ಇದೆ, ದನಗಳಿಗೆ ಮೇವಿನ ತೊಂದರೆ ಇದೆ, ಕೆಲಸಕ್ಕೆ ತೊಂದರೆ ಇದೆ. ಈಗಾಗಲೇ ಕೆಲವು ಕಡೆ ಹೊಲಗಳಲ್ಲಿ ಹಾಕಿದ್ದ ಬಿತ್ತನೆ ಬೀಜವೂ ಹೋಯಿತು, ಗೊಬ್ಬರವೂ ಹೋಯಿತು. ಅವರಿಗೆ ಸಿಕ್ಕಿದ್ದು ಏನೆಂದರೆ, ನಿಮ್ಮ ಫಯರಿಂಗ್‌ನಲ್ಲಿ ಎರಡು ಗುಂಡುಗಳನ್ನು ಹಾಕಿ ಇಬ್ಬರನ್ನು ಕೊಂದಿದ್ದು, ಇದೇ ರೈತರಿಗೆ ನಿಮ್ಮ ಕೊಡುಗೆ. ಇವತ್ತು ತಾವು ಕುಡಿಯುವ ನೀರಿಗೆ ಇಟ್ಟಿರುವಂಥಾದ್ದು ಎಷ್ಟೆಂದರೆ, ಕಳೆದ ಬಾರಿ ತಾವು 1,042 ಕೋಟಿ ರೂಪಾಯಿಗಳನ್ನು ಇಟ್ಟಿದ್ದೀರಿ. ಈ ಸಾರೆ 1,267 ಕೋಟಿ ರೂಪಾಯಿಗಳು, ಕಳೆದ ಬಾರಿ ಹೋಟಲ್ 5.86%, ಈ ಸಾರಿ 4.88%, ಅಂದರೆ ಇದರಲ್ಲಿ ಹೆಚ್ಚು ಕಡಿಮೆ ಅದು 1% ಹಣ ಕಡಿಮೆ ಇದೆ. ಈ ಸಾರಿ ಅವರು ಅಂಕಿ-ಸಂಖ್ಯೆಯಲ್ಲಿ ಬುದ್ಧಿವಂತಿಕೆಯಿಂದ ಏನು ಮಾಡಿದ್ದಾರೆಂದರೆ, percentage ಹೇಳುವುದಕ್ಕೆ ಹೋಗಿಲ್ಲ. ಅದನ್ನು 100 ರೂಪಾಯಿಗಳು, 1000 ರೂಪಾಯಿಗಳು, 10ಸಾವಿರ ರೂಪಾಯಿಗಳು, ಒಂದು ಸಾವಿರ ಕೋಟಿ ರೂಪಾಯಿಗಳು, ಆ ಸಾವಿರ ಕೋಟಿಗಳಿಗೆ ಕಳೆದ ಬಾರಿಯ percentageಗೆ ಇವತ್ತು ಹೋಲಿಸಿದಾಗ ನಿಜವಾಗಿಯೂ percentage ಹೆಚ್ಚು ಇದೆಯೋ, ಕಡಿಮೆಯೋ ಎಂದು ನೋಡಿದಾಗ, ಅದು 1% ಕಡಿಮೆ ಇದೆಯೇ ಹೊರತು ಹೆಚ್ಚಾಗಿಲ್ಲ. ಇದು ಇವರಿಗೆ ಕುಡಿಯುವ ನೀರಿನ ಬಗ್ಗೆ ಇರುವ ಕಾಳಜಿ, ಏಕೆಂದರೆ ಇವರು ಹಳ್ಳಿಯ ಜನರ ಮತವನ್ನು ಗಳಿಸಿಕೊಂಡು ಅಧಿಕಾರಕ್ಕೆ ಬಂದರಲ್ಲಾ, ಅದಕ್ಕಾಗಿ ಕುಡಿಯುವ ನೀರಿಗೆ ಇವರ ಕೊಡುಗೆ. ಇದರ ಜೊತೆಯಲ್ಲಿ Rural Development ಇದರ ಬಗ್ಗೆ ಬಹಳ ಪ್ರೀತಿ, ಒಂದು ಕಡೆ ಸದಸ್ಯರಿಗೆ ಅವರ ಮಾಸಿಕ ಭತ್ಯೆಯನ್ನು ಏನು ಕೊಡುತ್ತಿದ್ದೀರಿ. ಇನ್ನೊಂದು ಕಡೆ ಡೆವಲಪ್‌ಮೆಂಟ್‌ಗೆ ಅರ್ಧ ಪರ್ಸೆಂಟ್ ಕಡಿತ. ಇದು ಕಳೆದ ಬಾರಿ 6.67ಇತ್ತು, ಈ ಸಾರಿ 6.14ಇದೆ. So ಇದು ರೈತರ ಬಗ್ಗೆ ಇರುವಂಥಾ ಮಾಹಿತಿ. ಇನ್ನು power generation ಬಗ್ಗೆ ತಮಗೆ ಗೊತ್ತಿದೆ. ಒಂದು ಕಡೆ load shedding, un scheduled ಯಾವಾಗ ವಿದ್ಯುತ್ ಹೋಗುತ್ತದೋ, ಯಾವಾಗ ಬರುತ್ತದೋ, ಅದನ್ನು ತಾವು ಒಂದು ಕಡೆ ಮಾಡುತ್ತಿದ್ದೀರಿ.

ಇನ್ನೊಂದು ಕಡೆ ಚಪ್ಪಾಳೆ ಗಿಟ್ಟಿಸಿ ಕೊಳ್ಳುವುದಕ್ಕೋಸ್ಕರ power availability ಇಲ್ಲದೇ ಅಥವಾ ವಿದ್ಯುತ್ ಖರೀದಿ ಮಾಡದೇ ಇವತ್ತಿನ ದಿವಸ 10 ಹೆಚ್.ಪಿ.ಯವರೆಗೆ ಉಚಿತವಾಗಿಕೊಡುತ್ತೇವೆಂದು ಹೇಳಿದ್ದೀರಿ. ಅದಕ್ಕೆ ನಮ್ಮ ಸ್ವಾಗತವಿದೆ, ಅದನ್ನು ನಾವು ನಮ್ಮ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ. 10 ಹೆಚ್. ಪಿ. ವರೆಗೆ ವಿದ್ಯುತ್ free ಯಾಗಿ ಕೊಡುತ್ತೇವೆಂದು ಹೇಳುವವರು, ಆ ರೈತರಿಗೆ ವ್ಯವಸ್ಥೆ ಮಾಡಬೇಕಲ್ಲಾ, ತಾವು ಎಲ್ಲಿಂದ ವಿದ್ಯುತ್ ತರುತ್ತಿದ್ದೀರಿ? ಯಾವ ಗ್ರಿಡ್‌ನಿಂದ ತರುತ್ತಿದ್ದೀರಿ. ಯಾರು ಕೊಡುತ್ತಿದ್ದಾರೆ? ಯಾರ ಜೊತೆಯಲ್ಲಿ agreement ಆಗಿದೆ? ನಿಮಗೆ ಈಗ ಸುಮಾರು 2,000 ಮೆಗಾವ್ಯಾಟ್‌ಗಿಂತಲೂ ಹೆಚ್ಚಿನ ಮೆಗಾವ್ಯಾಟ್ ವಿದ್ಯುತ್ ಕೊರತೆ ಇದೆ. ಈ ಕೊರತೆಯನ್ನು ನೀಗಿಸುವಂಥಾ ಕೆಲಸ ಹೇಗೆ ಮಾಡುತ್ತಾ ಇದ್ದೀರಿ? ಅಂದರೆ ಕರೆಂಟ್ ಇರುವುದಿಲ್ಲ, ಅಂದ ಮೇಲೆ ಕೊಡುವ ಪ್ರಶ್ನೆ ಎಲ್ಲಿಂದ ಬಂತು? ಅದಕ್ಕೆ free, ಕರೆಂಟ್ ಇಲ್ಲದೇ ಇರುವಾಗ, ಮತ್ತೆ ಅವರು ಬಿಲ್ ಕೊಡುವುದೆಲ್ಲಿಂದ ಬಂತು, ಇವರು ತೆಗೆದುಕೊಳ್ಳುವುದು, ಎಲ್ಲಿಂದ ಬಂತು? ಅದಕ್ಕೆ free ಅಂದರೆ ಸಾಕು, ಇಲ್ಲಿ ಕೊಡುವುದು ಇಲ್ಲ, ತೆಗೆದು ಕೊಳ್ಳುವುದೂ ಇಲ್ಲ. ಇದು ಹೇಗೆಂದರೆ, ಮನೆಗೆ ಊಟಕ್ಕೆ ಕರೆಸುವುದು, ಮನೆಯಲ್ಲಿ ಏನೂ ಇರುವುದಿಲ್ಲ ಖಾಲಿ ಮನೆ. ಅಲ್ಲಿ ಬಡಿಸುವವರು ಇಲ್ಲ, ಅಡಿಗೆ ಮಾಡುವವರು ಇಲ್ಲ, ಅಡಿಗೆ ಮಾಡುವುದಕ್ಕೆ ದವಸ ಧಾನ್ಯವೂ ಇಲ್ಲ. ಆ ರೀತಿಯಲ್ಲಿ ಇವತ್ತಿನ ದಿವಸ ಇವರ ವ್ಯವಸ್ಥೆ. ಇವರು ಹೇಳುವುದು, ಅಲ್ಲಿ ಏನು ವ್ಯವಸ್ಥೆ ಇಲ್ಲ. ಇವತ್ತು ಈ ಕೆಲಸ power ನಲ್ಲಿದೆ, ಜೊತೆ ಜೊತೆಯಲ್ಲೇ ವಿದ್ಯುತ್ ಉತ್ಪಾದನೆಗೆ ಏನಾದರೂ ಪ್ರಯತ್ನ ಮಾಡಿದ್ದೀರಾ? ಇವತ್ತು naturally irrigation and power ಇವೆರಡೂ ಇಂತಹ sector ಇವೆ. ಯಾವ sectorಗೆ ನೀವು ಹೆಚ್ಚಿನ ಬಲ ಕೊಟ್ಟರೆ, ಹೆಚ್ಚಿನ ಶಕ್ತಿಯನ್ನು ಕೊಟ್ಟರೆ, ಒಂದು ಕಡೆ industry ಬೆಳೆಯುತ್ತದೆ, ಒಂದು ಕಡೆ ಕೃಷಿ ಉತ್ಪಾದನೆಯಾಗುತ್ತದೆ. ಇನ್ನೊಂದು ಕಡೆ ಕೃಷಿಕರ ಪಂಪ್‌ಸೆಟ್‌ಗೆ ಅನುಕೂಲವಾಗುತ್ತದೆ. ಈ ರೀತಿ ಅನುಕೂಲವಾಗುತ್ತದೆಂದು ಹಿಂದಿನ ಎಲ್ಲಾ ಸರ್ಕಾರಗಳ ಬಗ್ಗೆ ತಾವು ನೋಡಿ, ಹಿಂದೆ power Sector ನಲ್ಲಿ allocation ಇರುವುದನ್ನು ನೋಡಿದರೆ, ಹಿಂದಿನ ಕಾಂಗ್ರೆಸ್ ಪಕ್ಷದ ಸರ್ಕಾರವಿದ್ದಾಗ 2001ರಲ್ಲಿ 10%, 2003 ರಲ್ಲಿ 10%, ಅದೇ ರೀತಿಯಾಗಿ 2004 ರಲ್ಲಿ 11%, ಮಾನ್ಯ ಸಿದ್ಧರಾಮಯ್ಯನವರು ಇದ್ದಾಗ 2004ರಲ್ಲಿ 22%, ತದನಂತರ ಪುನಃ ಇನ್ನೊಂದು ಬಜೆಟ್ ಮಂಡನೆಯಾದಾಗ 13%, ಆನಂತರ ಮಾನ್ಯ ಯಡಿಯೂರಪ್ಪನವರು ಬಂದಾಗ 10% allocation ಮಾಡಿದರು. ಕಳೆದ ಬಾರಿ 11% ಮಾಡಿದರು, ಈ ಸಾರಿ 9% ಮಾಡಿದರು. ಅಂದರೆ ಈ ಕಾಳಜಿ irrigation production ಗೆ energize ಮಾಡುವುದಕ್ಕೆ ಅಥವಾ ರೈತರಿಗೆ ವಿದ್ಯುಚ್ಛಕ್ತಿ ಕೊಡುವುದಕ್ಕೆ ಮತ್ತು industries ಗೆ ವಿದ್ಯುತ್ ಕೊಡುವುದಕ್ಕೆ ಇದು ಅವರ ಕಸರತ್ತು. ಅಂದರೆ ಯಾವ sectorಗಳು ಇವೆ, ಮೂಲಭೂತ ಸೌಕರ್ಯವನ್ನು ಒದಗಿಸುವಂಥಾ sectorಗಳು ಇವೆ. ಯಾವ infrastructure ಅನ್ನು create ಮಾಡಿ, ನಿಮ್ಮ ಆರ್ಥಿಕ ಅಭಿವೃದ್ಧಿಯಾಗುತ್ತದೊ, ಆ sector ಗಳಿಗೆ ಕೊಡಲಿ ಪೆಟ್ಟನ್ನು ಹಾಕಿದ್ದಾರೆ. ಏಕೆ? ಅಂದರೆ ತಮ್ಮ ವೈಯಕ್ತಿಕ ಪ್ರತಿಷ್ಠೆಗೋಸ್ಕರ, ವೈಯಕ್ತಿಕ popularity ಗೋಸ್ಕರ, ನಾನು ಹೇಳಿದ್ದೆ ಸರಿಯೆಂದು ಆದರೆ ಇಲ್ಲಿ ಮಾಡಿದ್ದು ಏನು? ರೈತರ ಸಮಾಧಿ ಮಾಡಿ, ಆ ಸಮಾಧಿ ಮೇಲೆ ಅವರು ನಗುತ್ತಾ ಕುಳಿತುಕೊಂಡಿದ್ದಾರೆ. ಅವರು ಇವರ ಬಳಿ ಬಂದರೆ, 10ಹೆಚ್.ಪಿ.

ವಿದ್ಯುತ್ ಕೊಟ್ಟಿಲ್ಲವೇ, ಒಂದು ಕುಟುಂಬಕ್ಕೆ ಬಿತ್ತನೆ ಬೀಜಕ್ಕೆ 1000 ರೂಪಾಯಿಗಳನ್ನು ಕೊಟ್ಟಿಲ್ಲವೇ, ಅದು ಸುಮಾರು ಐವತ್ತು ಲಕ್ಷ ಕುಟುಂಬವೆಂದು ಹೇಳಿದ್ದಾರೆ.

ಅಧ್ಯಕ್ಷರು : ಶ್ರೀ ವೆಂಕಟಶಿವಾರೆಡ್ಡಿಯವರೇ ತಾವು ತಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ 72 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆಯಾಗಬೇಕಾಗಿತ್ತು. ಅದರಲ್ಲಿ 24 ಲಕ್ಷ ಹೆಕ್ಟೇರ್‌ನಲ್ಲಿ ಬಿತ್ತನೆಯಾಗಿರುವಂಥಾದ್ದು, ಇನ್ನು ಉಳಿದಂಥಾ ಎಲ್ಲಾ ಏರಿಯಾಗಳನ್ನು ತೆಗೆದುಕೊಂಡರೆ 72 ಲಕ್ಷ ಹೆಕ್ಟೇರ್ ಅಂದರೆ, ಕನಿಷ್ಟ ಹೆಚ್ಚು ಕಡಿಮೆ ಒಂದು ಕೋಟಿ ಐವತ್ತು ಸಾವಿರ ಎಕರೆಗಳು ಅಂದರೆ, ಒಂದು ಎಕರೆಗೆ ಇವರು ಕೊಟ್ಟಂಥಾ allocation ಎಷ್ಟು ಬರುತ್ತದೆಂದರೆ 200 ರೂಪಾಯಿಗಳು ಕೂಡ ಬರುವುದಿಲ್ಲ. ಒಂದು ಎಕರೆಗೆ 200 ರೂಪಾಯಿಗಳಂತೆ ಅವನು ತಹಶೀಲ್ದಾರ್ ಆಫೀಸ್‌ಗೆ ಹೋಗಿ ತರುವುದರಲ್ಲಿ ಅದರ ಕತೆ ಮುಗಿಯಿತು. ಅವರು ಎಷ್ಟು ಬುದ್ಧಿವಂತಿಕೆಯಿಂದ ಮಾಡಿದ್ದಾರೆಂದರೆ, 1000 ರೂಪಾಯಿಗಳನ್ನು ಕೊಟ್ಟು ಬಿಡಿ, ಐವತ್ತು ಲಕ್ಷ ಕುಟುಂಬಗಳಿಗೆ 50,000 ಅಂದರೆ 150 ಕೋಟಿ ರೂಪಾಯಿಗಳು ಆಗಲಿ ಬಿಡಿ. ಆದರೆ ನಿಜವಾಗಿಯೂ 200 ರೂಪಾಯಿಗಳು, 150 ರೂಪಾಯಿಗಳು ಒಂದು ಎಕರೆಗೆ ಎಂದರೆ ಸಾಧ್ಯವೇ? ಅದರಲ್ಲಿ ಬಿತ್ತನೆ ಬೀಜ, ಗೊಬ್ಬರ, ಎಲ್ಲವೂ ಬರುತ್ತದಾ? ಅದನ್ನು ಕೇಳಿದರೆ, ನನ್ನ ಕಾಲದಲ್ಲಿ ಇದನ್ನಾದರೂ ಕೊಟ್ಟಿದ್ದೇವೆಂದು ಹೇಳುತ್ತಾರೆ. ಹೌದು, ಕೊಟ್ಟರಿ, ಏನು ಕೊಟ್ಟಿದ್ದೀರಿ, irrigation ನಲ್ಲಿ ಹೊಡೆದಿರಿ, ಇಲ್ಲಿ ಕೊಟ್ಟಿದ್ದೀರಿ, power ನಲ್ಲಿ ಹೊಡೆದಿರಿ ಇಲ್ಲಿ ಕೊಟ್ಟಿದ್ದೀರಿ. ಅಂದರೆ basic infrastructure ಮೇಲೆ ಕೊಡಲಿ ಪೆಟ್ಟು, popularity scheme ಗೆ ಎಲ್ಲಿ ಹೊಗಳುತ್ತಾರೊ, ಅಲ್ಲಿ ನಾನು ಕೊಟ್ಟೆ, ಇಲ್ಲಿ ಕೊಟ್ಟೆ, ಎಂದು ಹೇಳುವುದು. ನೀವು ಕೊಡಬೇಕೆಂಬುದನ್ನು ಕೊಡಿ, per hector ಗೆ 2,500ರೂಪಾಯಿಗಳನ್ನು ಕೊಡಿ, ಅಂದರೆ ಒಂದು ಎಕರೆಗೆ 1000 ರೂಪಾಯಿಗಳನ್ನಾದರೂ ಕೊಡಿ. ಅದು ಏನೂ ಇಲ್ಲ, ಅದರ ಬಗ್ಗೆ ಚಿಂತೆ ಇಲ್ಲ. ಇದು ಸಾರಾಸಗಟಾಗಿ ದಾನ ಕೊಟ್ಟಹಾಗೆ, ಇದನ್ನು ಏನು ತಿಳಿದುಕೊಡಿದ್ದಾರೆಂದರೆ ಇಚ್ಛೆ ಬಂದಂತೆ ಹಂಚುವುದು.

"ಹುಚ್ಚಿ ಲಗ್ನದಲ್ಲಿ ಉಂಡವನೇ ಜಾಣ" ಎನ್ನು ಹಾಗೆ ಯಾರು ಏನು ಕೇಳುತ್ತಾರೋ ಅಲ್ಲಿ ಅದನ್ನು ಕೊಟ್ಟುಬಿಡುವುದು ಆಗುತ್ತಿದೆ. ಇದನ್ನು scientifically ಯೋಚನೆ ಮಾಡಿರುವಿರಾ? ಇದರ ಬಗ್ಗೆ ಚಿಂತನೆ ಮಾಡಿರುವಿರಾ? ಆಳವಾಗಿ ಅಭ್ಯಾಸ ಮಾಡಿ ಕೊಟ್ಟಿರುವಿರಾ? ಅವರು ಹೇಳಿರುವುದನ್ನು ಅವರ ಭಾಷಣದಲ್ಲೂ ಕೇಳಿದ್ದೇನೆ ಮತ್ತು ಅವರು ಭಾಷಣದ ಮೊದಲನೇ ಪುಟ ಮತ್ತು ಎರಡನೇ ಪುಟಗಳಲ್ಲಿ ಏನು ಹೇಳಿದ್ದಾರೆ ಎಂದರೆ, ನಾನು ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ತಿರುಗಾಡಿ ಅಲ್ಲಿರತಕ್ಕಂಥ experts ಜೊತೆಯಲ್ಲಿ ಚರ್ಚೆ ಮಾಡಿ, ಅನೇಕ ತಜ್ಞರ ಜೊತೆಯಲ್ಲಿ ಚರ್ಚೆ ಮಾಡಿ, ಬಜೆಟ್‌ಗೆ ಅಂತಿಮವಾಗಿ ಈ ರೂಪವನ್ನು ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ಆ ಎಲ್ಲ ತಜ್ಞರು ಇದನ್ನೇ ಹೇಳಿದರೇ? ಇರಿಗೇಷನ್‌ಗೆ ಕಡಿಮೆ ದುಡ್ಡು ಇಡಿ, ಪವರ್‌ಗೆ ಕಡಿಮೆ ದುಡ್ಡು ಇಡಿ, ರೂರಲ್ ಡೆವಲಪ್‌ಮೆಂಟ್‌ಗೆ ದುಡ್ಡು ಕಡಿಮೆ

ಮಾಡಿ ಎನ್ನುವ ಮಾತುಗಳನ್ನು ಹೇಳಿದರೇ? ಹಳ್ಳಿಯ ಜನರಿಗೆ ಅನುಕೂಲ ಆಗತಕ್ಕಂಥ ಎಲ್ಲಾ ಯೋಜನೆಗಳಿಗೆ ಟೋಪಿ ಹಾಕಿ ಎಂದು ತಜ್ಞರು ಹೇಳಿದರೇ? ಅಲ್ಲಿನ ಜನರು ಹೇಳಿದರೇ? ಇಂಥ ಒಂದು ಬಜೆಟ್ ಅನ್ನು ಇವರು ಕೊಟ್ಟಿದ್ದಾರೆ.

ಇನ್ನು, ಇಂಡಸ್ಟ್ರೀ ಮೇಲೆ ಇವರಿಗೆ ಬಹಳ ಪ್ರೀತಿ. ಕನಿಷ್ಠವೆಂದರೆ, ಇಲ್ಲಿ cut ಮಾಡಿ, ಅಲ್ಲೇನಾದರೂ ಲಾಭವಾಗಿದೆಯೇ ಎಂದರೆ ಅದೂ ಇಲ್ಲ. ಅಲ್ಲಿಯೂ ಕೂಡ 1.07% ಕಡಿಮೆಯಾಗಿದೆ. ಅಂದರೆ, industrial growth ಗೆ ಇಲ್ಲ, agricultural growthಗೆ ಇಲ್ಲ, power growth ಗೆ ಇಲ್ಲ, irrigation facility ಗೆ ಇಲ್ಲ. ಹಾಗಾದರೆ ಈ ನಿಮ್ಮ ಬಜೆಟ್ ಯಾವುದಕ್ಕೆ ಇದೆ? ಹೇಗೆ ನೀವು ಇದನ್ನು economically growth oriented budget ಎಂದು ಹೇಳುತ್ತೀರಿ? ಹೇಗೆ, ಈ ರಾಜ್ಯ ಆರ್ಥಿಕವಾಗಿ ಮುಂದೆ ಬರುತ್ತದೆ? ಬೇರೆ ಕಡೆಗಳ ಹಾಗೆ ಈ ರಾಜ್ಯವನ್ನು ಮಾದರಿ ಮಾಡುತ್ತೇವೆ, ಗುಜರಾತ್ ಹಾಗೆ ಮಾಡುತ್ತೇವೆ ಎಂದು ಏನೇನೋ ಹೆಸರನ್ನು ಹೇಳುತ್ತಾರೆ. ಅದನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತಿಲ್ಲ. ನೀವು ಗುಜರಾತ್‌ಗೆ ಹೋಗಬೇಡಿ. ಕರ್ನಾಟಕ ರಾಜ್ಯದಲ್ಲಿ ಹಿಂದಿನ ಸರ್ಕಾರಗಳು ಹತ್ತಾರು ವರ್ಷಗಳಿಂದ ಏನು ಮಾಡಿವೆ, ಆ ಉದಾಹರಣೆಯನ್ನು ತೆಗೆದುಕೊಂಡು ನೀವು ನೀರಾವರಿ, agriculture, power, rural development sector ಗಳಿಗೆ ಕೆಲಸ ಮಾಡಿದರೆ ಅನುಕೂಲವಾಗುತ್ತದೆ. ಕುಡಿಯುವ ನೀರಿಗೆ ದುಡ್ಡು ಇಲ್ಲ, ಕಟ್ಟಡಗಳಿಗೆ ದುಡ್ಡು ಇಲ್ಲ. ಆಗಾದರೆ ನಿಮ್ಮ ಹಣ ಎಲ್ಲಿಗೆ ಹೋಗುತ್ತದೆ ಎನ್ನತಕ್ಕಂಥಾದ್ದನ್ನು ಇವತ್ತು ನಾನು ಕೇಳುತ್ತಿದ್ದೇನೆ. ಸುಮಾರು 15% ಸಾಲವನ್ನು ತೆಗೆದುಕೊಂಡು ಇಂಥ sector ಗಳನ್ನು ಬಿಟ್ಟು ಬೇರೆ ಯಾವ sector ಗೆ ಹಣ ಕೊಡುತ್ತಿದ್ದೀರಿ? ಬೇರೆಯವರನ್ನು ಖುಷಿ ಪಡಿಸುವುದಕ್ಕೋಸ್ಕರ ಕೊಡುತ್ತಿರುವಿರಾ?

ವಿಶೇಷವಾಗಿ, ಶಿಕ್ಷಣ ಕ್ಷೇತ್ರದಲ್ಲೂ ಕೂಡ ಕಡಿಮೆಯಾಗಿದೆ. ಅಲ್ಲಿ ಹೋದ ಸಲಕ್ಕಿಂತಲೂ 0.53%ನಷ್ಟು ಕಡಿಮೆಯಾಗಿದೆ. ಅಂದರೆ ಇವತ್ತು ಯಾವುದೇ ಒಂದು ಸೆಕ್ಟಾರ್‌ನಲ್ಲಿ ಬಡವರಿಗೆ ಸಹಾಯ ಆಗತಕ್ಕಂಥಾದ್ದನ್ನು, ರೈತರಿಗೆ ಸಹಾಯ ಆಗತಕ್ಕಂಥಾದ್ದನ್ನು ಮಾಡಿಲ್ಲ. ಆದರೆ ಹೇಳತಕ್ಕಂಥಾದ್ದು ಮಾತ್ರ ಸಾಕಷ್ಟು ಆಗಿದೆ. ನಾನು ಒಳ್ಳೆಯ ಬಜೆಟ್ ಕೊಟ್ಟಿದ್ದೇನೆ ಅನ್ನತಕ್ಕಂಥಾದ್ದನ್ನು ಹೇಳಿದ್ದೀರಿ. Need based budget ಮಾಡುವುದನ್ನು ಬಿಟ್ಟು, ಇವರು ತಮಗೆ ಏನು ಬೇಕೋ ಅದನ್ನು ಮಾಡಿದ್ದಾರೆ. ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಅದರ ಮೇಲೆ ಕಣ್ಣಿಟ್ಟು ಮಾಡಿರುವಂಥ ಬಜೆಟ್ ಇದು ಎನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇವತ್ತಿನ ದಿವಸ ನಾನು ಇಚ್ಛೆಪಡುತ್ತಿದ್ದೇನೆ. ಆಮೇಲೆ ವಿಶೇಷವಾಗಿ ರೈತರಿಗೆ ಇವರು ಕೊಡತಕ್ಕಂಥ ಕೆಲವು ಸಬ್ಸಿಡಿಗಳು, ಕನ್ಸಿಷನ್ಸ್ ಇವುಗಳ ಬಗ್ಗೆ ಹೇಳುವುದಾದರೆ, ಎಲ್ಲೆಲ್ಲಿ ರೈತರಿಗೆ ಅನುಕೂಲವಾಗುತ್ತದೋ ಖಂಡಿತವಾಗಿ ನಮ್ಮ ಪಕ್ಷ ಅದಕ್ಕೆ ಬೆಂಬಲ ಕೊಡುತ್ತದೆ. ಆದರೆ ನೀವು ಹೇಳಿರುವ ಹಣವನ್ನು ಎಲ್ಲಿಂದ ಒದಗಿಸುತ್ತೀರಿ ಎನ್ನತಕ್ಕಂಥದ್ದನ್ನು ನೀವು ಹೇಳಬೇಕು. ಉಚಿತ ವಿದ್ಯುತ್ತಿಗೆ 2,050 ಕೋಟಿ ರೂಪಾಯಿ, ಗೊಬ್ಬರ, ಸೀಡ್ಸ್ ಇವುಗಳಿಗಾಗಿ ಒಂದು ರೈತ ಕುಟುಂಬಕ್ಕೆ ಒಂದು ಸಾವಿರ ರೂಪಾಯಿ ಸಹಾಯಧನದಂತೆ 500 ಕೋಟಿ ರೂಪಾಯಿ, ಹಾಲಿಗೆ ಎರಡು ರೂಪಾಯಿ ಸಬ್ಸಿಡಿಯಂತೆ 255 ಕೋಟಿ,

Agricultural Revolvig Fund 500 ಕೋಟಿ, ಇತರೇ ಮೊತ್ತ 3,305 ಕೋಟಿ ರೂಪಾಯಿಗಳನ್ನೂ ಮೀರುತ್ತದೆ.

ಬೆಂಗಳೂರು ಅಭಿವೃದ್ಧಿಗೆ 1,800 ಕೋಟಿ ರೂಪಾಯಿ ಕೊಡುವುದಾಗಿ ಹೇಳಿದ್ದೀರಿ. ಅದರಲ್ಲಿ 300 ಕೋಟಿ ರೂಪಾಯಿಗಳನ್ನು C.M.C.ಗಳಿಗೆ ಕೊಡುವುದನ್ನು ಬಿಟ್ಟರೆ ಬಾಕಿ ಎಲ್ಲವೂ ಕೂಡ on going schemes. ಇದನ್ನು ಸುರೇಶ್ ಕುಮಾರ್‌ರವರು ಒಪ್ಪುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಅವರು Law and Parliamentary Affairs Minister ಆಗಿ ಸರ್ಕಾರವನ್ನು defend ಮಾಡತಕ್ಕಂಥಾದ್ದು ಅವರ ಕೆಲಸ, ಅದನ್ನು ಅವರು ಮಾಡುತ್ತಾರೆ. ಆದರೆ ಅದರಲ್ಲಿ ಇರತಕ್ಕಂಥಾದ್ದು ಬಹುತೇಕ on going schemes. ಅದು ಮೆಟ್ರೋನೇ ಇರಬಹುದು, International Airportಗೆ ರಸ್ತೆ ಮಾಡುವುದೇ ಇರಬಹುದು, I.T.Park ಗಳಿಗೆ ಹೋಗತಕ್ಕಂಥ ರಸ್ತೆಗಳೇ ಇರಬಹುದು ಅಥವಾ ಅವುಗಳ Improvement ಇರಬಹುದು ಅಥವಾ Jawaharlal Nehru National Urban Renewal Mission ಇರಬಹುದು, ಇವೆಲ್ಲಗಳನ್ನೂ ಸೇರಿಸಿಕೊಂಡು, on going project ಗಳನ್ನು ಸೇರಿಸಿಕೊಂಡು ಇದನ್ನು ಹೇಳಲಾಗಿದೆ. ಆದರೆ, ನೀವು ಹೊಸದಾಗಿ ಹಣ ಕೊಡುತ್ತಿರುವುದು ಯಾವುದಕ್ಕೆಂದರೆ, ಯಾವ ಏಳು ಮುನಿಸಿಪಾಲಿಟಿಗಳು ಮಹಾನಗರ ಪಾಲಿಕೆಗೆ merge ಆಗಿವೆ, ಆ ಮುನಿಸಿಪಾಲಿಟಿಗಳಿಗೆ ಚರಂಡಿ, ರೋಡುಗಳನ್ನು ಕೊಡಬೇಕಲ್ಲವೇ? ಅವುಗಳು ಹೊಸದಾಗಿ ಸೇರಿವೆ, ಪಾರ್ಲಿಮೆಂಟ್ ಚುನಾವಣೆ ಬರುತ್ತಿದೆ, ಅದಕ್ಕೆ ಅನುಕೂಲವಾಗಬೇಕು, ಅನಂತ ಕುಮಾರ್‌ರವರಿಗೆ ಅನುಕೂಲವಾಗಬೇಕು, ಬೇರೆಯವರಿಗೆ ಅನುಕೂಲವಾಗಬೇಕು, ಅದಕ್ಕಾಗಿ 300 ಕೋಟಿ ರೂಪಾಯಿಗಳನ್ನು ಅಲ್ಲಿಗೆ ಹೊಸದಾಗಿ ಕೊಟ್ಟಿದ್ದೀರಿ. ಅದನ್ನು ಬಿಟ್ಟರೆ, ಬೆಂಗಳೂರಿನಲ್ಲಿ ಹೊಸ ಯೋಜನೆಗಳು ಯಾವಿವೆ ಸ್ವಾಮಿ? ಸ್ಲಂ ಏರಿಯಾಗಳಿಗೆ ಏನಾದರೂ ಕೊಟ್ಟಿರುವಿರಾ? ಎಲ್ಲದಕ್ಕೂ Government of India ಕಡೆ ತೋರಿಸತಕ್ಕಂಥಾದ್ದು ಆಗುತ್ತಿದೆ. ವಾಲ್ಮೀ ಎನ್ನತಕ್ಕಂಥ ಮನೆಗಳನ್ನು ಕಟ್ಟಿಸತಕ್ಕಂಥ ಯೋಜನೆ ಇರಬಹುದು ಅಥವಾ urban poor sector ನಲ್ಲಿ ಬರತಕ್ಕಂಥ ಮನೆಗಳು ಇರಬಹುದು, ಇಂದಿರಾ ಆವಾಸ್ ಯೋಜನೆ ಇರಬಹುದು, ಇವೆಲ್ಲವೂ ಕೂಡ ಕೇಂದ್ರ ಸರ್ಕಾರದ ಯೋಜನೆಗಳಿಂದ ಬರತಕ್ಕಂಥ ಮನೆಗಳು. ಇವುಗಳಿಗೆ ಕೇಂದ್ರ ಸರ್ಕಾರವು ಹಣವನ್ನು ಕೊಡುತ್ತದೆ. ಇವುಗಳೆಲ್ಲವುಗಳಿಗೂ ಕೇಂದ್ರ ಸರ್ಕಾರದಿಂದ ಹಣ ಸಂಗ್ರಹಣೆಯಾಗಿ ಅದರಿಂದ ಅಭಿವೃದ್ಧಿ ಆಗತಕ್ಕಂಥಾದ್ದು. ಇದರಲ್ಲಿ ಇವರದ್ದು ಮಾತ್ರ ಏನೂ ಇಲ್ಲ.

ಆಮೇಲೆ, ಕೆರೆಗಳ ದುರಸ್ತಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಎಷ್ಟು ಕೋಟಿ ರೂಪಾಯಿಗಳನ್ನು ಆ ಕೆರೆಗಳಿಗೆ ಇಡುತ್ತೇವೆ ಎಂದು ಹೇಳಿಲ್ಲ. ಇಡೀ ಕರ್ನಾಟಕ ರಾಜ್ಯದಲ್ಲಿರತಕ್ಕಂಥ 36,000 ಕೆರೆಗಳ ದುರಸ್ತಿಗಾಗಿ ಎಷ್ಟು ಹಣವನ್ನು specific ಆಗಿ ಇಟ್ಟಿದ್ದೀರಿ ಎನ್ನತಕ್ಕಂಥಾದ್ದು ಇಲ್ಲ. ಒಂದು ಮುಗುಂ ಆಗಿ ಅವರು ಓದಿದರು. ಏನೆಂದರೆ, ಕೆರೆಗಳ ದುರಸ್ತಿಯನ್ನು ಮಾಡುತ್ತೇವೆ ಎಂದು ಓದಿದರು. ಏಕೆ ಹೀಗೆ? ಬೇರೆಯದಕ್ಕೆ ಇಷ್ಟೇ ಎಂದು ಹೇಳುವುದಕ್ಕೆ ಆಗುತ್ತದೆ. ಇಂಥ ಒಂದು ಪೀಠಕ್ಕೆ ಇಷ್ಟು ರೂಪಾಯಿ, ಇಂಥ ಒಂದು ಮಠಕ್ಕೆ ಇಷ್ಟು ರೂಪಾಯಿ, ಇಂಥ ಒಂದು ಸಂಸ್ಥೆಗೆ ಇಷ್ಟು ರೂಪಾಯಿ, ಇಂಥ ಒಂದು

Develpment Board ಗೆ ಇಷ್ಟು ಕೋಟಿ ರೂಪಾಯಿ ಎಂದು ಹೇಳುವುದಕ್ಕೆ ಆಗುತ್ತದೆ. ಅದೇ ರೀತಿ ಇದಕದ್ಕೆ ಇಷ್ಟು ಎಂದು ಏಕೆ ಹೇಳಬಾರದು? ಅದು ನೀರಾವರಿಗೆ ಸಂಬಂಧಿಸಿದಂಥಾದ್ದು, ರೈತರಿಗೆ ಅನುಕೂಲವಾಗತಕ್ಕಂಥಾದ್ದು. ಅದಕ್ಕೆ specification ಇಲ್ಲ. ಆದರೆ ಬೇರೆಯದಕ್ಕೆ, ಅವರಿಗೆ ಯಾವುದು ಬೇಕೋ ಅದಕ್ಕೆ ಒತ್ತಿ ಹೇಳಿ, ಅದು ಪೇಪರ್‌ಗಳಲ್ಲಿ ಬಂದು, ರೇಡಿಯೋದಲ್ಲಿ, ಟೀವಿಯಲ್ಲಿ ಬಂದು, ಯಾರು ಹಣ ಕೇಳಿರುತ್ತಾರೋ ಅವರಿಗೆ ಅದು ಹೋದ ಮೇಲೆ, ಶಹಬಾಸ್, ನೋಡಿ, ನೋಡಿ, ಇದುವರೆಗೆ ಯಾರೂ ಮಾಡಿಲ್ಲ, ಯಡಿಯೂರಪ್ಪನವರು ಕೊಟ್ಟಿದ್ದು ಎಂದು ಹೇಳಬೇಕೆಂದು ಮಾಡಿದ್ದಾರೆ. ಬೇರೆಯವರು ಸಾವಿರಾರು ಕೋಟಿ ರೂಪಾಯಿ ನೀರಾವರಿಗೆ ಮಾಡಿದ್ದು ಹೋಯಿತು, ಪವರ್‌ಗೆ ಮಾಡಿದ್ದು ಹೋಯಿತು, ಶಿಕ್ಷಣ ಇಲಾಖೆಗೆ ಮಾಡಿದ್ದು ಹೋಯಿತು, ಆಶ್ರಯ ಮನೆಗಳಿಗೆ ಕೋಟ್ಯಾಂತರ ರೂಪಾಯಿ ಕೊಟ್ಟಿದ್ದು ಹೋಯಿತು. ಇವರು ಬೇರೆಯದಕ್ಕೆ ಕೋಟಿ, ಲಕ್ಷ ರೂಪಾಯಿಗಳನ್ನು ಕೊಟ್ಟು ತಮ್ಮ ಪ್ರತಿಷ್ಠೆಯನ್ನು ಹೆಚ್ಚು ಮಾಡಿಕೊಳ್ಳತಕ್ಕಂಥ ಕೆಲಸವನ್ನು ಇವತ್ತು ಮಾಡುತ್ತಿದ್ದಾರೆ. Layout formationಗೆ ಎಷ್ಟು ಹಣ ಬೇಕು? Speed rail ರಚನೆಗೆ ಎಷ್ಟು ದುಡ್ಡು ಬೇಕು ಅನ್ನತಕ್ಕಂಥಾದ್ದು ಅದರಲ್ಲಿಯೂ ಕೂಡ ಇದೆ. ಇದೆಲ್ಲವನ್ನೂ ಮಾಡುತ್ತೇವೆ ಎಂದು ನೀವು ಯಾವುದರ ಆಧಾರದ ಮೇಲೆ ಹೇಳಿದ್ದೀರಿ ಎಂದರೆ, ಭಾರತ ಸರ್ಕಾರದಿಂದ ಸಾಲ, ಬಹಿರಂಗ ಮಾರುಕಟ್ಟೆ ಸಾಲ, L.I.C., R.B.I., ಇವೆಲ್ಲವನ್ನೂ ಸೇರಿಸಿ ಸುಮಾರು 3,199 ಕೋಟಿ ರೂಪಾಯಿ ಆಗುತ್ತದೆ. ಆಮೇಲೆ, N.C.D.C. ಯಿಂದ 2,048 ಕೋಟಿ ರೂಪಾಯಿ. ಹೀಗೆ ಈ ಸಾಲವನ್ನು ಪಡೆದುಕೊಳ್ಳುತ್ತಿದ್ದೀರಿ. ಯಡಿಯೂರಪ್ಪನವರೇ, ಹೋದ ವರ್ಷ ಅಂದರೆ 2007-08 ರಲ್ಲಿ 1,200ಕೋಟಿ ರೂಪಾಯಿಗಳ ಸಾಲವನ್ನು ಪಡೆದುಕೊಂಡಿದ್ದರೆ, ತಾವು ಈ ಸಾರಿ 2,048 ಕೋಟಿ ರೂಪಾಯಿ ಮತ್ತು ಇನ್ನೊಂದು ಬಾಬತ್ತಿನಲ್ಲಿ 3,199 ಕೋಟಿ ರೂಪಾಯಿ, ಇದೆಲ್ಲಾ ಸೇರಿದರೆ ಸುಮಾರು ಐದು ಸಾವಿರ ಕೋಟಿ ರೂಪಾಯಿ ಆಗುತ್ತದೆ.

ಈ ಐದು ಸಾವಿರ ಕೋಟಿ ರೂಪಾಯಿಗಳು ಹಾಗೂ ಬೆಂಗಳೂರಿನಲ್ಲಿ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಜಮೀನುಗಳನ್ನು ಮಾರಾಟ ಮಾಡಿ 3ಸಾವಿರ ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡಿ ಅಂದರೆ ಈ ಐದು ಸಾವಿರ ಕೋಟಿ ರೂಪಾಯಿಗಳು ಸಾಲ ಮತ್ತು ಜಮೀನು ಮಾರಾಟದಿಂದ ಬಂದ ಹಣ 3 ಸಾವಿರ ಕೋಟಿ ರೂಪಾಯಿಗಳು, ಹೀಗೆ ಒಟ್ಟು 8 ಸಾವಿರ ಕೋಟಿ ರೂಪಾಯಿಗಳೆಂದು ತೋರಿಸಿ, ಆ 8ಸಾವಿರ ಕೋಟಿ ರೂಪಾಯಿಗಳಲ್ಲಿ ನೀವು ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತೇವೆಂದು ಇದರಲ್ಲಿ ಹೇಳಿದ್ದೀರಿ. ನಾಳೆ ಆ ಜಮೀನು ಮಾರಾಟದಿಂದ ಬರುವ ಹಣ ಬರಲಿಲ್ಲವೆಂದರೆ, ಯಾವುದೋ ಒಂದು ಕಾರಣಕ್ಕೆ litigation ಇದ್ದರೆ, ನೀವು ಹೊಸ resources mobilization ಮಾಡುವುದು ಬಿಟ್ಟು, ಅಥವಾ ಇರತಕ್ಕ ಯಾವುದೇ ಹೊಸ sources ಹುಡುಕುವುದು ಬಿಟ್ಟು, ಸರ್ಕಾರಿ ಆಸ್ತಿಗಳನ್ನು ಮಾರಾಟ ಮಾಡಿ ಆ ಹಣದಿಂದ ನೀರು ಕುಡಿಸುತ್ತೇವೆ, ಆ ಹಣದಿಂದ ಸೈಕಲ್ ಕೊಡಿಸುತ್ತೇವೆ, ಆ ಹಣದಿಂದ ನಾವು ಬಿಸಿಯೂಟ ಹಾಕಿಸುತ್ತೇವೆ, ಆಶ್ರಯ ಯೋಜನೆ ಹಮ್ಮಿಕೊಳ್ಳುತ್ತೇವೆಂದು ಹೇಳುತ್ತಿದ್ದೀರಲ್ಲ ಇದನ್ನು ಹಿಂದೆ ಯಾರಾದರೂ ಮಾಡಿದ್ದಾರೆಯೇ? 3ಸಾವಿರ ಕೋಟಿ ರೂಪಾಯಿ ಬರುತ್ತದೆಂದು ನೆಚ್ಚಿಕೊಂಡಿರುವುದರಲ್ಲಿ

ಒಂದು ವೇಳೆ ಅವೆಲ್ಲ ಕೂಡ litigationಗೆ ಬಂದು ಎಲ್ಲದಕ್ಕೂ stay order ಬಂದರೆ, ಇದರಿಂದ ಆ ಹಣ ಬರದಿದ್ದರೆ, ನಿಮ್ಮ ಯೋಜನೆಗಳ ಗತಿ ಏನು? ಇದು ನಂಬದೇ ಇರತಕ್ಕಂಥ resources. ಇದನ್ನು ನಂಬಿ ಏನೋ 10%, 20%, 30% ಬರಬಹುದು. ಆದರೆ, ಇದರಿಂದ 3 ಸಾವಿರ ಕೋಟಿ ರೂಪಾಯಿ ಬಂದು ರಾಜ್ಯದ ಖಜಾನೆಯೆ ತುಂಬುತ್ತದೆಂದು ನೀವು ತಿಳಿದುಕೊಂಡಿದ್ದರೆ ಇದು ಆಗುವ ಮಾತಲ್ಲ. ಅದೂ ಸರ್ಕಾರಿ ಆಸ್ತಿಗಳನ್ನು, ಜಮೀನುಗಳನ್ನು ಮಾರಾಟ ಮಾಡಿ ನೀವು ಯೋಜನೆಗಳನ್ನು ಮಾಡುತ್ತೇವೆಂದರೆ ಸಾಧ್ಯವಾಗದ ಮಾತು. ನನಗೆ ಆಶ್ಚರ್ಯವೆನಿಸುತ್ತದೆ, ಒಂದು ವೇಳೆ ನೀವು ಅಂದುಕೊಂಡಿದ್ದಕ್ಕಿಂತ ನಾಳೆ ಕಡಿಮೆ ಬಂದರೆ ದಯವಿಟ್ಟು ವಿಕಾಸ ಸೌಧ, ವಿಧಾನಸೌಧವನ್ನು ಗಿರವಿ ಇಡಬೇಡಿ. ಏಕೆಂದರೆ, ಯೋಜನೆಗಳಿಗೆ ನಾಳೆ ಕಡಿಮೆ ಬಿದ್ದರೆ, ಸರ್ಕಾರಿ ಜಮೀನು ಮಾರಾಟ ಮಾಡುವಾಗ ನಾಳೆ ಕಡಿಮೆಯಾದರೆ 'ನಾವೇನು ಮಾಡೋಣ ರೀ, ರೈತರಿಗೋಸ್ಕರ ಮಾಡಿದ್ದೇವೆ' ಎಂದು ಇವೆರಡನ್ನೂ ಗಿರವಿ ಇಟ್ಟರೆ, ಮಾನ್ಯ ಅಧ್ಯಕ್ಷರೆ, ಇದರಿಂದ ನಿಮಗೆ, ನಮಗೆ ಮತ್ತು ನಾಳಿನ ಪೀಳಿಗೆಗೂ ತೊಂದರೆಯಾಗುತ್ತದೆ. ಅದಕ್ಕೋಸ್ಕರ, ದಯವಿಟ್ಟು, ಆ ಕೆಲಸ ಮಾಡಲು ಹೋಗಬೇಡಿ. 8ಸಾವಿರ ಕೋಟಿ ರೂಪಾಯಿ resources ಬರುತ್ತದೆಂದು ನೀವು ಏನು ನಂಬಿದ್ದೀರಿ, ಅದು ಸಂಪೂರ್ಣವಾಗಿ ಸಿಗತ್ತದೆಂದು ಹೇಳುವುದಕ್ಕಾಗುವುದಿಲ್ಲ. ಅನೇಕ ಸಲ ಸಾಲ ಕೂಡ ಕಾರಣಾಂತರದಿಂದ ಪಡೆಯುವುದಕ್ಕಾಗದೆ ಮುಂದೆ ಹೋಗುವುದು ನಿಮಗೆ ಗೊತ್ತಿದೆ. ಬರತಕ್ಕಂಥ, ಪಡೆಯುವಂಥ ಸಾಲಗು NABARD ನಿಂದ ಇರಬಹುದು, ಬೇರೆ ಬೇರೆ Life Insurance ಸಂಸ್ಥೆಯಿಂದಿರಬಹುದು, ಅವುಗಳು ಸಹ ತಡವಾಗಿ ಬರುತ್ತವೆ. ಹಾಗಾಗಿ ನೀವು ಅದರ ಮೇಲ ನಂಬಿಕೆ ಇಡಬೇಡಿ. ನಾನು ಈಗಾಗಲೇ ಹೇಳಿದ ಹಾಗೆ, ಇಡೀ ರಾಜ್ಯದಲ್ಲಿ ಕುಡಿಯುವ ನೀರಿನ ಕೊರತೆ ಬಹಳ ಇದೆ. ಅದಕ್ಕೆ ಹೆಚ್ಚಿನ ಹಣವಿಟ್ಟು war footing ನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕಾಗುತ್ತದೆ. ಆದರೆ, ಅದನ್ನು ಮಾಡಲಿಲ್ಲ. ಒಳ್ಳೆಯ ಕೆಲಸವೇನು ಮಾಡಿದ್ದಾರೆಂದರೆ, ಜನ ನೀರು ಕೇಳುತ್ತಾರೆಂದು ಅವರು ಬಿಯರ್ ಕೊಡುವುದಕ್ಕೆ ಶುರು ಮಾಡಿದ್ದಾರೆ. ಏಕೆಂದರೆ, 1000 CL-2 ಅಂಗಡಿಗಳು, 500 CL-9 Bar and Restaurant ಕೊಡುತ್ತೇವೆಂದು ಹೇಳಿದ್ದೀರಿ. ಹಿಂದೆ ಜೆ. ಹೆಚ್. ಪಟೇಲ್‌ರವರ ಸರ್ಕಾರವಿದ್ದಾಗ, ಮಾನ್ಯ ಯಡಿಯೂರಪ್ಪನವರಾದಿಯಾಗಿ ನಾವು opposition ನಲ್ಲಿದ್ದೆವು. ಆಗ ಜೆ. ಹೆಚ್. ಪಟೇಲ್‌ರವರನ್ನು ನಾವು ಕೇಳಿದೆವು. ಅವರು ಬಿಜಾಪುರಕ್ಕೆ ಹೋಗಿದ್ದರು. ಆಗ ಅಲ್ಲಿ ಜನ ಬಂದು ಅಡ್ಡ ಬಿದ್ದು 'ಸ್ವಾಮಿ, ರಸ್ತೆಗಳು ನೋಡಿ ತಗ್ಗು ಬಿದ್ದಿವೆ, ಅಲ್ಲಿ ರಸ್ತೆ ತಗ್ಗು ಬಿದ್ದು ಕಾರು, ಬಸ್ಸು ಹೋಗುವುದಿಲ್ಲ' ಎಂದರು. ಅದಕ್ಕೆ ಅವರು- 'ಕಾರು, ಬಸ್ಸು ಹೋಗುವುದಿಲ್ಲವೇ? ಹಿಂದೆ ಹೇಗೆ ಹೋಗುತ್ತಿದ್ದೀರಿ? ಬಂಡಿ ಮೇಲೆ ಹೋಗುತ್ತಿದ್ದಿರಲ್ಲ, ಅದೇ ರೀತಿ ಬಂಡಿಯ ಮೆಲೆ ಹೋಗಿ' ಎಂದರು. ಆಮೇಲೆ, 'ಏನ್ ಸಾರ್ ಹೀಗೆ ಮಾತನಾಡಿದರೆ ಹೇಗೆ?' ಎಂದು ಕೇಳಿದರೆ, 'ಇಲ್ಲಪ್ಪ, ಸಾಹುಕಾರರಿದ್ದವರು ಕುದುರೆ ಮೇಲೆ ಹೋಗುತ್ತಾರೆ, ಬಡವರು ಎತ್ತಿನ ಬಂಡಿಯಲ್ಲಿ ಹೋಗುತ್ತಾರೆ, ಏಕೆ ಕಾಳಜಿ ಮಾಡುತ್ತೀರಿ, ಇರಿ' ಎಂದರು. 'ಏನ್ ಸಾರ್, ಕುಡಿಯುವುದಕ್ಕೆ ನೀರಿಲ್ಲ' ಎಂದು ಕೇಳಿದಾಗ, 'ನೀರಿಲ್ಲವೇ? ಇಲ್ಲಿ ಬಿಯರ್ ಅಂಗಡಿಗಳಿಲ್ಲವೇನು?' ಎಂದು ಹೇಳಿದರು. ಈ ವಿಷಯ ಅವರು ಹೇಳಿದ್ದು ಪತ್ರಿಕೆಯಲ್ಲಿ ಬಂದಿದೆ. ಇದಕ್ಕೆ

ನೀವು ಸಾಕ್ಷಿಯಾಗಿದ್ದೀರಿ. ಪುನಃ ನೀವು ಅದನ್ನೇ repeat ಮಾಡುತ್ತಿದ್ದೀರಲ್ಲ ಸ್ವಾಮಿ. ಅವರೇನೋ ಬಾಯಿಮಾತಿನಲ್ಲಿ ಹೇಳಿದರು. ಆದರೆ, ನೀವು ಅದನ್ನು ಬಜೆಟ್‌ನಲ್ಲಿಯೇ include ಮಾಡಿ, ನೀರಿಲ್ಲವೇ, ತೆಗೆದುಕೊಳ್ಳಿ ಎಂದು ಪ್ರತಿ ಹಳ್ಳಿಯಲ್ಲೂ ಬಿಯರ್ ಅಂಗಡಿ, ಪ್ರತಿ ಊರಿನಲ್ಲಿಯೂ CL-2, CL-9 ತೆರೆಯುತ್ತೇವೆಂದು ಹೇಳಿದ್ದೀರಿ, ಅದಕ್ಕೂ ಕಡಿಮೆಯಾದರೆ ಬೆಂಗಳೂರಿನಿಂದ transfer ಮಾಡಿ. ಏಕೆಂದರೆ, ಸ್ಥಳಾಂತರ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇಲ್ಲಿಯತನಕ ಸ್ವಾಮಿಗಳು ಪಾಪ ನಿಮ್ಮನ್ನು ಎಷ್ಟೋ ಹೊಗಳಿದರು. ಇವರೇನೋ ಬಂದ ಮೇಲೆ ಪುಣ್ಯಾತ್ಮ, prohibition ತಂದು ಸ್ವಲ್ಪ ಮಟ್ಟಿಗೆ ನಿಲ್ಲಿಸಿದರು ಅಂದುಕೊಂಡರು. ಅಂದು ಅನೇಕ ಕಡೆ ತೊಂದರೆಯಾದರೂ ಕೂಡ ನಿಮ್ಮನ್ನು ಬಹಳಷ್ಟು ಜನ defend ಮಾಡಿಕೊಂಡರು. ಅವರು ಹೊಗಳಿದರೆಂದು ನೀವೇ ಹೇಳಿಕೊಂಡಿರಿ. ಅನೇಕ ಹೆಣ್ಣು ಮಕ್ಕಳು ನನಗೆ ಆಶೀರ್ವಾದ ಮಾಡಿದರೆಂದು ಹೇಳಿದಿರಿ. ಆ ಆಶೀರ್ವಾದದಿಂದ ನಿಮಗೆ ಶಕ್ತಿ ಬಂತಲ್ಲ, ಬಲ ಬಂತಲ್ಲ, ಆ ಮಠ-ಮಂದಿರಗಳ ಬಲ, ಆ ಹೆಣ್ಣು ಮಕ್ಕಳ ಬಲ ನಿಮಗೆ ಸಿಕ್ಕಮೇಲೆ ನೀವು ಮಾಡಿದ್ದೇನೆಂದರೆ, ಸಾವಿರ ಅಂಗಡಿಗಳನ್ನು ತೆರೆದು, ಯಥೇಚ್ಛವಾಗಿ ಕುಡಿಯಿರಿ ಎಂದು ಹೇಳುತ್ತಿದ್ದೀರಿ. ಅದರ ಜೊತೆಗೆ, 500 Bar and Restaurant ಗೆ ಅನುಮತಿ ಕೊಡುತ್ತಿದ್ದೀರಿ. ಹಿಂದೆ Cheap ಎಂದು ಅವರು plastic sachet ನಲ್ಲಿ ಸಾರಾಯಿ ಕುಡಿಯುತ್ತಿದ್ದರು. ಅದು ಸರ್ಕಾರದ supply ಆಗಿತ್ತು. ಇವರೇನು ಮಾಡಿದರೆಂದರೆ, 'ಆ sachet ಅನ್ನು ತೆಗೆದು ಹಾಕಿದ್ದೇನೆ, ನೀವು ಕುಡಿಯಬೇಕೆ? bottle ನಲ್ಲಿ ಕುಡಿಯಿರಿ, ದೊಡ್ಡ ದೊಡ್ಡವರೆಲ್ಲ bottle ನಲ್ಲಿಯೇ ಕುಡಿಯುತ್ತಾರೆ, ನೀವೇಕೆ sachetನಲ್ಲಿ ಕುಡಿಯಬೇಕು?' Bottle ನಲ್ಲಿ Cheap liquor ಎಂದು CL-2ನ 1000 ಅಂಗಡಿಗಳು ಮತ್ತು 500 Bar and Restaurant ಗಳನ್ನು ತೆರೆಯುತ್ತಿದ್ದೀರಲ್ಲ' ಇದರಿಂದ ನಿಮ್ಮ ಮನಸ್ಸಿಗೆ ಏನನಿಸುತ್ತದೆ? ಇದು ನ್ಯಾಯವೇ? ನೀವು ಮಾಡುವುದು ತತ್ವನೀತಿಯ ಮೇಲೆ. ಅಂದರೆ, vote ಬೇಕಾದಾಗ ಹೇಳುವುದು ಒಂದು, popularity ಗಳಿಸುವುದಕ್ಕೆ ಹೇಳುವುದು ಇನ್ನೊಂದು. ಮತ್ತು popularity ಗಳಿಸಿದ ಮೇಲೆ ಅದನ್ನು ಉಳಿಸುವುದಕ್ಕೆ ಮತ್ತೊಂದು ಮಾತು ಹೇಳುವುದು. ಅಧಿಕಾರ ಗಳಿಸುವವರೆಗೂ ಒಂದು ಮಾತು, ಅಧಿಕಾರ ಗಳಿಸಿದ ಮೇಲೆ ಅದನ್ನು ಉಳಿಸಿಕೊಳ್ಳುವುದಕ್ಕೆ ಇನ್ನೊಂದು ಮಾತು, ಇದು ಇವರ ನೀತಿ, ಇವರ ತತ್ವ. ಇವರದು ಇಷ್ಟಕ್ಕೇ ನಿಲ್ಲಲಿಲ್ಲ. ಎಲ್ಲಿಯವರೆಗೆ ಹೋದರೆಂದರೆ, ಕಡಿಮೆಯಾದರೆ ಇನ್ನು ನಾನು Public Undertaking ಮುಖಾಂತರ ಕೊಡುತ್ತೇನೆಂದು ಹೇಳಿದ್ದಾರೆ. ಅಂದರೆ, KSRTC Bus Stand ನಲ್ಲಿ ತೆರೆಯಬಹುದು, ನಾಳೆ KSSIDC ನಲ್ಲಿ ತೆರೆಯಬಹುದು. ಸರ್ಕಾರದ public undertakings ಅನೇಕ ಇರುವುದರಿಂದ ಅಲ್ಲಿ ತೆರೆಯಬಹುದು. ಏಕೆಂದರೆ, ನೀವೇ ಹೇಳಿದ್ದೀರಿ. ಇದೆಲ್ಲವನ್ನೂ ಸ್ಥಳಾಂತರಿಸುವುದರ ಬಗ್ಗೆ ನಿಮ್ಮ ಬಜೆಟ್‌ನಲ್ಲಿಯೇ ಹೇಳಿದ್ದೀರಿ. ಸ್ಥಳಾಂತರಿಸಿದ ನಂತರವೂ ಕಡಿಮೆಯಾದರೆ, "ಸಾರಾಯಿ ಮಾರಾಟ ನಿಷೇಧವನ್ನು ಜಾರಿಗೆ ತಂದ ನಂತರ ಗ್ರಾಮಾಂತರ ಪ್ರದೇಶಗಳಲ್ಲಿ ಮದ್ಯದ ಬೇಡಿಕೆ ಪೂರೈಸಿಕೊಳ್ಳಲು ಬಹಳ ದೂರದವರೆಗೆ ಹೋಗಬೇಕಾದ ಪರಿಸ್ಥಿತಿ ಉಂಟಾಗಿದೆ" ಅಂದರೆ, "ದೂರವೇಕೆ ಹೋಗುತ್ತೀರಿ? ನಿಮ್ಮ ಸಮೀಪಕ್ಕೇ ತಂದುಕೊಡುತ್ತೇವೆ, ಬನ್ನಿ" ಎಂದು ಹೇಳುತ್ತಾರೆ. ಇದು ಇವರ pro-

hibition. ಆಮೇಲೆ, "ಕೆಲವರು ಈ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಂಡು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ಕಂಡು ಬಂದಿದೆ. ಈ ಸಮಸ್ಯೆ ನಿವಾರಣೆಗಾಗಿ 1000 ಚಿಲ್ಲರೆ (ಸಿಲ್2) ಎಂದು ಇಲ್ಲಿ ಹೇಳಿದ್ದಾರೆ. ಅದು 2000 ಆಗಬಹುದು, 3000 ಆಗಬಹುದು, ಆಮೇಲೆ "ಮದ್ಯದಂಗಡಿ ಸನ್ನದುಗಳು ಹಾಗೂ 500 ಬಾರ್ ಅಂಡ್ ರೆಸ್ಟೋರೆಂಟ್ (ಸಿಎಲ್9) ಸನ್ನದುಗಳನ್ನು ಹೊಸದಾಗಿ ನೀಡಲು ಉದ್ದೇಶಿಸಿದ್ದೇನೆ". ಏನು ಒಳ್ಳೆಯ ಉದ್ದೇಶ? ಪಾಪ! ಅವರೆಲ್ಲ ಈಗ ಬಾಯಿ ಬಡಿದುಕೊಳ್ಳುತ್ತಿರಬೇಕು. ಅನೇಕ ಸ್ವಾಮಿಗಳು ನಿಮ್ಮನ್ನು ಕರೆದು ಶಾಲು ಹೊದಿಸಿ, ನಿಮಗೆ ಒಳ್ಳೆಯದಾಗಲೆಂದು ಹರಸಿದ್ದಾರೆಂದು ಹೇಳಿದಿರಲ್ಲ, ಇದು ಓದಿದ ಮೇಲೆ ಯಡಿಯೂರಪ್ಪನವರು ಏನೋ ಮಾಡಿದರೆಂದು ಶಾಪ ಹಾಕುತ್ತಿರಬಹುದು? ಇದೊಂದು ಕಡೆ. ಹೆಣ್ಣು ಮಕ್ಕಳೂ ಅದೇ ರೀತಿ ಹೇಳುತ್ತಾರೆ. ಮುಂದೆ ನೀವು ಹೇಳಿದ್ದೇನೆಂದರೆ, "ಜನಸಂಖ್ಯೆ ನಿರ್ಭಂಧವನ್ನು ಪರಿಗಣಿಸಲಾಗುವುದು. ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ಮೂಲಕವೂ ಕೆಲವು ಚಿಲ್ಲರೆ ಮದ್ಯದ ಅಂಗಡಿಗಳನ್ನು ತೆರೆಯಲಾಗುವುದು". ಅಂದರೆ, ನೀವು licence ಕೊಡುವುದಲ್ಲದೆ, transfer ಮಾಡುವುದಲ್ಲದೆ ಪುನಃ Public Sector ಮುಖಾಂತರ, ಸರ್ಕಾರಿ ಉದ್ದಿಮೆಗಳ ಮುಖಾಂತರ ಕೊಡುತ್ತೇನೆಂದರೆ, ನಿಮಗೇನಾದರೂ ಮರ್ಯಾದೆ ಬರುತ್ತದೆಯೇ? ನಿಮಗೆ ಸ್ವಲ್ಪವಾದರೂ ಇದರ ಪರಿಕಲ್ಪನೆ ಇದೆಯೇ? ಅಂದರೆ, ಈ system ಅನ್ನು ಒಂದು ಕಡೆ close ಮಾಡಿದಿರಿ, ಇನ್ನೊಂದು ಕಡೆ open ಮಾಡಿದಿರಿ. ಎದುರಿನ ಬಾಗಿಲನ್ನು Close ಮಾಡಿದ ಹಾಗೆ ಮಾಡಿದಿರಿ, ಹಿಂದಿನ ಬಾಗಿಲಿನಿಂದ ಇವೆಲ್ಲವನ್ನೂ ನಡೆಸುತ್ತಿದ್ದೀರಿ. ಇನ್ನು ಮೇಲೆ ನಿಧಾನವಾಗಿ ಯಾದರೂ ಈ ವರ್ಷ ಸಾವಿರ, ಮುಂದಿನ ವರ್ಷ ಬೇಡಿಕೆ ಬಂದರೆ ಇನ್ನೊಂದು ಸಾವಿರ, ಹೀಗಾಗಿ ಅಂತಿಮವಾಗಿ ಹಳ್ಳಿ ಹಳ್ಳಿಯಲ್ಲಿ ಏನು ಶರಾಬು ಅಂಗಡಿಗಳಿದ್ದವು, ಅದೇ ಪ್ರಮಾಣದಲ್ಲಿ ಇದೂ ಕೂಡ ಬರುತ್ತದೆ. ಏಕೆಂದರೆ, ಇದು ನಿಮ್ಮ ನೀತಿಯ ಪ್ರಶ್ನೆ. ಇದನ್ನು ನೀವು ಹೇಳಿದ್ದು, ನಾವೇನೂ ಹೇಳಲಿಲ್ಲ. ನೀವು ಹೇಳಿ ಅಧಿಕಾರಕ್ಕೆ ಬಂದವರು. ಇದರ ಬಗ್ಗೆ ನೀವು ಎಲ್ಲಾ ಕಡೆಗಳಲ್ಲೂ ಪ್ರಚಾರ ಗಿಟ್ಟಿಸಿಕೊಂಡವರು. "ನಾವು ಅಧಿಕಾರಕ್ಕೆ ಬಂದರೆ, ಇವೆಲ್ಲವನ್ನೂ ಕೂಡ ಮಾಡುತ್ತೇವೆ" ಎಂದು ಹೇಳೀದವರಿಗೆ ನಿಮಗೆ ಈಗ ಏನನಿಸುತ್ತದೆ ಸ್ವಾಮಿ? ಶ್ರೀ ಜೆ. ಹೆಚ್. ಪಟೇಲ್‌ರವರು frank ಆಗಿ ಹೇಳಿದ್ದರು. ನೀರಿಲ್ಲವೆಂದರೆ beer ಕುಡಿಯಿರಿ, ರಸ್ತೆ ಇಲ್ಲವೆಂದರೆ ಕುದುರೆ ಮೇಲೆ ಹೋಗಿ ಎಂದು ಹೇಳಿದ್ದರು. ಹಾಗೇನಾದರೂ ಅವರ ಮಾತನ್ನು ಅನುಕರಣೆ ಮಾಡಿ ಬಹುಶಃ ನನಗೆ ಅನ್ನಿಸಿದ ಮಟ್ಟಿಗೆ ನೀವು ಸಹ ಬಜೆಟ್‌ನಲ್ಲಿ ಅದನ್ನು ಅನುಷ್ಠಾನಕ್ಕೆ ತಂದಿದ್ದೀರಿ. ಪಾಪ ಅವರು ಮಾತಿನಲ್ಲಿ joke ಆಗಿ ಹೇಳಿ ಅಲ್ಲಿಗೇ ಮುಗಿಸಿದರು. ಆದರೆ, ಇವರು ಮಾತ್ರ ಅದನ್ನು 2008-09ನೇ ಸಾಲಿನ ಆಯವ್ಯಯದಲ್ಲಿ ತಂದು ಒತ್ತಿ ಒತ್ತಿ ಹೇಳಿ ಜನರಿಗೆ ಇವತ್ತಿನ ದಿವಸ ಆ ಒಂದು ವ್ಯವಸ್ಥೆ ಮುಖಾಂತರ ಹೆಚ್ಚಿನ ಹೆಂಡವನ್ನು ಕುಡಿಸುವ ಪ್ರಯತ್ನ ಮಾಡಿದ್ದಾರೆ. ಅದಕ್ಕಾಗಿ ಇವರು ನುಡದಂತೆ ನೆಡಯುತ್ತಾರೆ ಎನ್ನುವ ಬಿರುದನ್ನು ತಾವೇ ತೆಗೆದುಕೊಂಡಿದ್ದಾರೆ. ಅವರೇ declare ಮಾಡುವುದು ಅವರೇ ಬಿರುದು ತೆಗೆದುಕೊಳ್ಳುವುದು. ಇವತ್ತು ಏನಾಗಿದೆ, ಅವರ ಕಾರ್ಯಕ್ರಮ ಅವರ ನೀತಿಗೆ ಮತ್ತು ಅವರ ಹೇಳಿಕೆಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಇದರ ಜೊತೆ ಜೊತೆಯಲ್ಲಿ ಈಗಾಗಲೇ ನಾನು ಎಲ್ಲಾ

ಪ್ರಮುಖವಾದ ಅಂಶಗಳನ್ನು ಈ ಸದನದ ಮುಂದಿಟ್ಟಿದ್ದೇನೆ. ಸಾಕಷ್ಟು ಭರವಸೆಗಳನ್ನು election manifesto ಮುಖಾಂತರ ಕೊಟ್ಟಿದ್ದಿರಿ. ಈಗ ಅವರೇ ಹೊರಗೆ ಹೋದರಲ್ಲಾ, ಏನು ಮಾಡುವುದು. ಅವರು ಬರುವವರೆಗೆ ನಾನು ಸ್ವಲ್ಪ rest ತೆಗೆದುಕೊಳ್ಳಲೇ? ಅವರ ಜೊತೆಗೆ ಬೇರೆ ಎಲ್ಲರೂ ಹೋದರು. ಅವರು ಬಂದ ಮೇಲೆ ನಾನು ಮಾತನಾಡುತ್ತೇನೆ. ಅಲ್ಲಿಯ ವರೆಗೆ ನೀವು ಸದನವನ್ನು ಮುಂದೂಡಿ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಅವರು ಒಂದು ಕಾರ್ಯಕ್ರಮವಿದೆಯೆಂದು ಹೋಗಿದ್ದಾರೆ. ಮತ್ತೆ ಅವರು ಸದನಕ್ಕೆ ಬರುತ್ತಾರೆ. He will come back. ಅವರು ಸಭಾಧ್ಯಕ್ಷರಿಗೆ ಪತ್ರ ಕೊಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ವಿರೋಧ ಪಕ್ಷದ ನಾಯಕನಾಗಿ ಬಜೆಟ್ in charge ಯಾರಿದ್ದಾರೋ ಅವರಿಗೆ ಹೇಳುತ್ತೇನೆ. ಅದರ ಪರಿಣಾಮ ಇಲ್ಲಿ ಆಗುತ್ತದೆ, ನನ್ನ ಮಾತನ್ನು ಒಪ್ಪುತ್ತಾರೆನ್ನುವ ದೃಷ್ಟಿಯಿಂದ ಅವರಿಗೆ ಹೇಳುತ್ತೇನೆ. ಆದ್ದರಿಂದ, ನಿಮಗೆ ಸಮಯವಿಲ್ಲವೆಂದರೆ ಸದನವನ್ನು adjourn ಮಾಡಿ, ಅವರು ಬಂದ ಮೇಲೆ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ನನಗೆ ಮುಖ್ಯಮಂತ್ರಿಗಳು ಪತ್ರ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಆರ್. ರೋಷನ್ ಬೇಗ್ : ಸದನದಲ್ಲಿ ಕೃಷಿ ಮಂತ್ರಿ ಇಲ್ಲ, Home Minister ಇಲ್ಲ, ಪಂಚಾಯತ್ ರಾಜ್ ಮಿನಿಸ್ಟರ್ ಇಲ್ಲ ..... (ಗೊಂದಲ)

ಅಧ್ಯಕ್ಷರು : ಅನುಮತಿ ಕೇಳಿ ಮುಖ್ಯಮಂತ್ರಿಗಳು ನನಗೆ ಪತ್ರ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ರಮಾನಾಥ ರೈ : ವಿರೋಧ ಪಕ್ಷದ ನಾಯಕರು ಗಂಭೀರವಾಗಿ ಮಾತನಾಡುತ್ತಿರುವಾಗ ಸಭಾನಾಯಕರಾದವರು ಅದನ್ನು ಕೇಳುವ ಸ್ಥಿತಿಯಲ್ಲಿರಬೇಕೇ ಹೊರತು ಮಧ್ಯದಲ್ಲಿ ಎದ್ದು ಹೋಗುವುದಲ್ಲ.

ಅಧ್ಯಕ್ಷರು : ಮುಖ್ಯಮಂತ್ರಿಗಳು ನನಗೆ ಪತ್ರ ಕೊಟ್ಟಿದ್ದಾರೆ, ಅನುಮತಿ ಕೇಳಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್ : ನಿನ್ನೆಯೇ ಮಾನ್ಯ ಸಭಾಧ್ಯಕ್ಷರಿಗೆ ಪತ್ರ ಬರೆದು ಅನುಮತಿಯನ್ನು ಕೇಳಿದ್ದಾರೆ. ಅವರು ಇಷ್ಟು ಹೊತ್ತು ಇಲ್ಲಿ ಕುಳಿತು ವಿರೋಧ ಪದ ನಾಯಕರ ಮಾತನ್ನು ಕೇಳಿದ್ದಾರೆ. ಇಲ್ಲಿ ಕುಳಿತು ತಮ್ಮ ಮಾತಿನ ಸಾರಾಂಶವನ್ನು ಅವರಿಗೆ ತಿಳಿಸಲು ನನಗೆ ಜವಾಬ್ದಾರಿ ಕೊಟ್ಟು ಹೋಗಿದ್ದಾರೆ. ಒಂದು ಪೂರ್ವ ನಿಗದಿತ ಕಾರ್ಯಕ್ರಮದ ಸಲುವಾಗಿ ತಮಗೆ ಈಗಾಗಲೇ ಪತ್ರ ಬರೆದಿದ್ದಾರೆ.

ಶ್ರೀ ಆರ್. ರೋಷನ್ ಬೇಗ್ : ಅವರು ತಮ್ಮ ಅನುಮತಿಯನ್ನು ಕೇಳಿದ್ದಾರೆಯೆ?

ಅಧ್ಯಕ್ಷರು : ಅನುಮತಿ ಕೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಪುರುಸೊತ್ತು ಇದ್ದಾಗ ನಾನು ಮಾತನಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ತಾವು ದಯವಿಟ್ಟು ತಮ್ಮ ಮಾತನ್ನು ಮುಂದುವರೆಸಿ.

ಡಾ|| ಹೆಚ್. ಸಿ. ಮಹದೇವಪ್ಪ : ಮುಖ್ಯಮಂತ್ರಿಗಳಿಗೆ ಕಾರ್ಯಕ್ರಮವಿರಬಹುದು. ನಿನ್ನೆ ಇಲ್ಲಿ ಬಜೆಟ್ ಮಂಡನೆ ಮಾಡಿದ್ದಾರೆ. ಇವತ್ತು ವಿರೋಧ ಪಕ್ಷದ ನಾಯಕರು ಬಜೆಟ್ ಕುರಿತು ಭಾಷಣ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಇದ್ದು ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೆಂದು ಕೇಳಬೇಕಾಗಿತ್ತು. ಜೊತೆಗೆ ಎಲ್ಲಾ ಅಧಿಕಾರಿಗಳು ಇರಬೇಕಾಗಿತ್ತು. ಹಾಗಾಗಿ, ಸರ್ಕಾರಕ್ಕೆ seriousness ಇಲ್ಲವೆಂದು ಇದರಿಂದ ಸ್ಪಷ್ಟವಾಗುತ್ತದೆ. ಅವರಿಗೆ ಕಾರ್ಯಕ್ರಮವಿದ್ದು ಅವರು ತಮ್ಮ ಅನುಮತಿ ಕೋರಿದ್ದರೆ, ಈಗ ಸದನವನ್ನು adjourn ಮಾಡಿ ಅವರು ಬಂದಮೇಲೆ ವಿರೋಧ ಪಕ್ಷದ ನಾಯಕರು ತಮ್ಮ ಮಾತನ್ನು ಮುಂದುವರಿಸುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ : ವಿರೋಧ ಪಕ್ಷದ ನಾಯಕರು ಮಾತನಾಡುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಇರಬೇಕು. ಇವತ್ತು ಆಗದಿದ್ದರೆ ಸದನವನ್ನು ಸೋಮವಾರಕ್ಕೆ ಮುಂದಕ್ಕೆ ಹಾಕಿ.

ಶ್ರೀ ಎಸ್. ಸುರೇಶ್ ಕುಮಾರ್ : ಮುಖ್ಯಮಂತ್ರಿಗಳು ನಿನ್ನೆಯೇ ಸಭಾಧ್ಯಕ್ಷರಿಗೆ ಪತ್ರ ನೀಡಿ ಅನುಮತಿ ಪಡೆದಿದ್ದರು. ಇಷ್ಟು ಹೊತ್ತು ಇಲ್ಲಿ ಕುಳಿತು ತಮ್ಮ ಮಾತನ್ನೆಲ್ಲ ಕೇಳಿದ್ದಾರೆ. ಅವರು ಮತ್ತೆ ಬರುತ್ತಾರೆ. ತಾವು ದಯವಿಟ್ಟು ಮುಂದುವರಿಸಿ. ಅವರು 15-20 ನಿಮಿಷಗಳಲ್ಲಿ ಬರುತ್ತಾರೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಯಾವುದೂ ಕೂಡ ಹೊಸದಲ್ಲ. ದಯವಿಟ್ಟು ತಾವು ತಮ್ಮ ಮಾತನ್ನು ಮುಂದುವರಿಸಿ. ನಿಮ್ಮ ಮಾತನ್ನು ಆಲಿಸಲಿಕ್ಕೆ ಇಡೀ ಸದನ ಇದೆ. ಇಷ್ಟು ಅಸಹನೆ ಇದ್ದರೆ ಹೇಗೆ? ನಿಮ್ಮ ಮಾತನ್ನು ಕೇಳಿಸಿಕೊಂಡು ಯಾವುದಕ್ಕೂ ಅಡ್ಡಿಪಡಿಸದೆ ನಾವು ಕುಳಿತಿದ್ದೇವೆ. ಅಸಹನೆ ಇದ್ದರೆ ಹೇಗೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಅಡ್ಡಿಪಡಿಸಿ. ನಾನು ಉತ್ತರ ಕೊಡುತ್ತೇನೆ.

ಶ್ರೀ ಎಸ್. ಸುರೇಶ ಕುಮಾರ್ : ನಾನು ಆ ರೀತಿ ಹೇಳಲಿಲ್ಲ. ದಯವಿಟ್ಟು ಮುಂದುವರಿಸಿ. ನಿಮ್ಮ ಮಾತನ್ನೆಲ್ಲ ಕೇಳಿಸಿಕೊಂಡು ನಾವು ಉತ್ತರ ಕೊಡುತ್ತೇವೆ.

ಡಾ|| ಹೆಚ್. ಸಿ. ಮಹದೇವಪ್ಪ : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ...... (ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಮುಖ್ಯಮಂತ್ರಿಗಳು ತಮ್ಮ ಅನುಮತಿ ತೆಗೆದುಕೊಂಡು ಹೋಗಿದ್ದಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಬಜೆಟ್ ಮೇಲಿನ ಭಾಷಣವನ್ನು ಹೆಚ್ಚು ಕಡಿಮೆ ಒಂದು ತಾಸು ಮಾತನಾಡಬಹುದು, 15 ನಿಮಿಷ ಮಾತನಾಡಬಹುದು, ಅರ್ಧ ತಾಸು ಮಾತನಾಡಬಹುದು ಅಥವಾ 10 ನಿಮಿಷ ಮಾತನಾಡಬಹುದು. ಮುಂದುವರಿಸಿ ಎಂದರೆ ಇದೇನು ಪುರಾಣವೇ? ಹಳ್ಳಿಯಲ್ಲಿ ಹೇಳುವ ಹಾಗೆ

ಇನ್ನು ಸ್ವಲ್ಪ ಮುಂದುವರಿಸಿ ಎಂದು ಹೇಳುವುದಕ್ಕೆ ಇದೇನು ಹರಿಕಥೆಯೇ? ಏನರ್ಥ? There is sanctity. ನಾವೆಂದೂ ಕೂಡ ಹೀಗೆ ನೋಡಿಲ್ಲ.

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು) : ಈಗಾಗಲೇ ಮುಖ್ಯಮಂತ್ರಿಗಳು ತಮ್ಮ ಅನುಮತಿ ತೆಗೆದುಕೊಂಡು ಹೋಗಿದ್ದಾರೆ. ಅವರು ಬರುತ್ತಾರೆ. ಅಲ್ಲಿಯ ತನಕ ಅವರು ಮಾತನಾಡಲಿ. ಅವರ ಮಾತನ್ನು ಇಡೀ ಸದನ ಕೇಳಲಿಕ್ಕೆ ತಯಾರಿದೆ. ನಾವೂ note ಮಾಡಿಕೊಳ್ಳುತ್ತೇವೆ. ಮುಖ್ಯಮಂತ್ರಿಗಳು ಬಂದಮೇಲೆ ತಿಳಿಸುತ್ತೇವೆ. ದಯವಿಟ್ಟು ವಿರೋಧ ಪಕ್ಷದ ನಾಯಕರು ತಮ್ಮ ಮಾತನ್ನು ಮುಂದುವರಿಸಬೇಕು.

ಶ್ರೀ ರಮಾನಾಥ ರೈ : ಸನದಲ್ಲಿ ನಾಯಕರಿಗೆ ಎಷ್ಟು ಮಹತ್ವವಿದೆಯೋ ಅಷ್ಟೇ ಮಹತ್ವ ವಿರೋಧ ಪಕ್ಷದ ನಾಯಕರ ಮಾತಿಗೂ ಇದೆ. ನಿನ್ನೆ ಅವರು ಮಾತನಾಡುವಾಗ ನಾವು ಗಂಭೀರವಾಗಿ ಕೇಳಿದ್ದೇವೆ. ಇವತ್ತು ವಿರೋಧ ಪಕ್ಷದ ನಾಯಕರು ಮಾತನಾಡುವುದನ್ನು ಕೇಳುವ ಸ್ಥಿತಿಯಲ್ಲಿ ಸಭಾನಾಯಕರಿರಬೇಕು. ದಿಢೀರನೆ ಎದ್ದು ಹೋಗುವುದು ಒಂದು ದೃಷ್ಟಿಯಲ್ಲಿ ಸದನಕ್ಕೆ ಅಗೌರವ ತರುವ ವಿಚಾರ.

ಶ್ರೀ ಆರ್. ರೋಷನ್ ಬೇಗ್ : ಸಭಾನಾಯಕರ ಜೊತೆಗೆ ಪಂಚಾಯತ್ ರಾಜ್ ಮಂತ್ರಿಗಳು, ಕೃಷಿ ಮಂತ್ರಿಗಳು, ವಿದ್ಯುತ್ ಮಂತ್ರಿಗಳು ಸದನದಲ್ಲಿ ಇಲ್ಲ.

ಶ್ರೀ ಎಸಂ. ಸುರೇಶ್ ಕುಮಾರ್ : ಅವರು ಆ ಸದನದಲ್ಲಿ ಉತ್ತರ ಕೊಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ತಮ್ಮ ಮಾತನ್ನು ಮುಂದುವರಿಸಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕ್ಷಮಿಸಬೇಕು, ನಿಮಗೆ ಬೇರೆ ಕಾರ್ಯಕ್ರಮವಿದ್ದ ಕಾರಣ ನೀವು ಹೋಗಿರಬಹುದು. At least ನಾವು ಮಾತನಾಡುವುದು ಮುಗಿದ ಮೇಲೆ ನೀವು ಹೋಗಿದ್ದರೆ ನಮ್ಮದೇನೂ ಅಭ್ಯಂತರವಿರಲಿಲ್ಲ. ಕೆಲಸವಿದ್ದಾಗ ಹೋಗಿರುವುದನ್ನು ನಾವು ಅನೇಕ ಸಲ ನೋಡಿದ್ದೇವೆ. ಆದರೆ, ನೀವು ಮುಖ್ಯಮಂತ್ರಿಯಾಗಿ ಮೊದಲನೇ ಸಲ ಬಜೆಟ್ ಮಂಡಿಸಿದ್ದೀರಿ. ಆ ಬಜೆಟ್‌ನಲ್ಲಿ ಅಲ್ಪ ಸ್ವಲ್ಪ ನನಗೆ ತಿಳಿದದ್ದನ್ನು ಹೇಳುತ್ತಿದ್ದೇನೆ. ನೀವು ಅದನ್ನು ಸಂಪೂರ್ಣವಾಗಿ ಅರಗಿಸಿಕೊಂಡಿರಬಹುದು, ಜೀರ್ಣಿಸಿಕೊಂಡಿರಬಹುದು. ಆದರೆ, ನಮಗೆ ತಿಳಿದಂಥ ಯೋಜನೆಗಳು, ಮಹತ್ವದ sectors ಇವೆ ಅದನ್ನು ನಿಮಗೆ ಹೇಳಬೇಕು. ಏಕೆಂದರೆ, ಬೇರೆ ಯಾರಿಗೆ ಹೇಳಿದರೂ ಕೂಡ ಮತ್ತೆ revise ಮಾಡುವ ಶಕ್ತಿಯನ್ನು ನೀವು ಅವರಿಗೆ ಕೊಟ್ಟಿಲ್ಲ. Ultimately ಇದು ಏನೇ ಆಗಬೇಕಾದರೂ ನಿಮ್ಮಿಂದಲೇ ಆಗಬೇಕು. ಅದಕ್ಕೆ ಅಧ್ಯಕ್ಷರ ಮುಖಾಂತರ ಅವರಿಗೆ ನಾವು ಹೇಳಬೇಕಾಗುತ್ತದೆ. ಅವರೇನಾದರೂ, ಶ್ರೀ ಸುರೇಶ್ ಕುಮಾರ್, ಅಶೋಕ್‌ರವರಿಗೆ, ಇನ್ನು ಬೇರೆಯವರಿಗೆ ಅಧಿಕಾರವನ್ನು ಹಂಚಿದ್ದರೆ ಖಂಡಿತವಾಗಿ ನಾವು ಒಪ್ಪಿಕೊಳ್ಳುತ್ತಿದ್ದೆವು. ನಂಬರ್ 1 ಹೋದರೆ ನಂಬರ್ 2 ಗಾದರೂ ಸಂಪೂರ್ಣ ಅಧಿಕಾರವಿರುತ್ತದೆ. ಆದರೆ, ತಾವು ಎಲ್ಲರಿಗೂ ಸಣ್ಣಪುಟ್ಟ ಖಾತೆಗಳನ್ನು ಕೊಟ್ಟಿದ್ದೀರಿ. ಇನ್ನು ಕೆಲವರಿಗೆ ಒಂದು ಖಾತೆಯನ್ನು ಒಡೆದು ಅಂದರೆ ಕೈ, ಕಾಲು, ಕಟ್ ಮಾಡಿ ಸ್ವಲ್ಪ ಸ್ವಲ್ಪ ಕೊಟ್ಟಿದ್ದಾರೆ. ಅವರಿಗೆ ನಾವು ಹೇಳಿದರೆ ಪಾಪ ತೊಂದರೆಯಾಗುತ್ತದೆ. ಅದಕ್ಕೆ ನಿಮಗೆ ಹೇಳೋಣವೆಂದು ನಾವು ನಮ್ಮನ್ನು ವಾಪಸ್ಸು ಕರೆಸಿದೆವು. ಅದಕ್ಕೆ

ನಿಮಗೆ ತೊಂದರೆಯಾಗಿರಬಹುದು. ಮಾನ್ಯ ಅಧ್ಯಕ್ಷರೇ, ಎರಡನೆಯದಾಗಿ, ಈಗಾಗಲೇ ನಾನು ನೀರಾವರಿ ಬಗ್ಗೆ ಎಷ್ಟು ಆಸಕ್ತಿ ವಹಿಸಿದ್ದಾರೆಂಬ ಬಗ್ಗೆ ಹೇಳಿದ್ದೇನೆ. ಆದರೆ, ಕೃಷ್ಣ, ಕಾವೇರಿ ಈ ವ್ಯಾಪ್ತಿಯಲ್ಲಿ ಬರುವ ಅನೇಕ ಯೋಜನೆಗಳನ್ನು ಪೂರ್ತಿ ಮಾಡುತ್ತೇವೆಂದು ಇದರಲ್ಲಿ ಹೇಳಿದ್ದಾರೆ. ಕಳಸಾ ಬಂಡೂರಿ ನಾಲೆಯನ್ನು ಮುಂದುವರೆಸುತ್ತೇವೆಂದು ಹೇಳಿದ್ದೀರಿ. ಆದರೆ, ಇದಕ್ಕೆಲ್ಲ ಹಣ ಎಲ್ಲಿ ಇಟ್ಟಿದ್ದೀರಿ? 13% ಹಣ ಇಟ್ಟು ಇವೆಲ್ಲವನ್ನೂ ಮುಗಿಸುತ್ತೇವೆಂದು ಒಂದೇ sentence ನಲ್ಲಿ ಹೇಳಿದರೆ ಮುಗಿದ ಹಾಗೆ ಆಯಿತೇ? ಅಥವಾ ಆ ಕೆಲಸ ನಿಮ್ಮ ಭೌತಿಕ ಗುರಿಯನ್ನು ಮುಟ್ಟಿದ ಹಾಗೆ ಆಯಿತೇ? ಭೌತಿಕ ಗುರಿಯೇ ಇಲ್ಲ. Particularly irrigation and power ನಲ್ಲಿ ನಿಮ್ಮ ಆರ್ಥಿಕ ಗುರಿಯೂ ಸರಿಯಾಗಿಲ್ಲ. ಭೌತಿಕ ಗುರಿ ಇಲ್ಲವೇ ಇಲ್ಲ. Physical target ಅಂತೂ ಇಲ್ಲವೇ ಇಲ್ಲ. ಅಂಥ ಬಜೆಟ್ ಕೊಟ್ಟಿದ್ದೀರಿ. ಅದರ ಜೊತೆಯಲ್ಲಿ ಈ ಬಜೆಟ್‌ನಲ್ಲಿ ನಿಮ್ಮ election manifesto ನಲ್ಲಿ ಹೇಳಿದ್ದೀರಿ. ಏನು ಹೇಳಿದ್ದೀರಿ. "ರಾಜ್ಯದಲ್ಲಿ ವಾರ್ಷಿಕ ರೂ.11,800ಗಿಂತ ಕಡಿಮೆ ಆದಾಯವಿರುವ ಕುಟುಂಬಗಳನ್ನು ಮಾತ್ರ ಬಡವರೆಂದು ಗುರುತಿಸಲಾಗುತ್ತಿದೆ. ಇದನ್ನು ಅನೇಕ ವರ್ಷಗಳಿಂದ ಪುನರ್ ವಿಮರ್ಶೆ ಮಾಡಿಯೇ ಇಲ್ಲ. ಬಿಜೆಪಿಯು ರಾಜ್ಯದಲ್ಲಿ ವಾರ್ಷಿಕ 30,000 ರೂಪಾಯಿ ವರೆಗಿನ ಆದಾಯ ವಿರುವ ಕುಟುಂಬಗಳನ್ನು ಕಡುಬಡವರೆಂದು, 30,000 ರೂಪಾಯಿಗಿಂತ ಮೇಲ್ಪಟ್ಟು 60,000 ರೂಪಾಯಿ ವರೆಗಿನ ಆದಾಯವಿರುವ ಕುಟುಂಬಗಳನ್ನು ಬಡವರೆಂದು ಗುರುತಿಸಿದೆ."ಅಂದರೆ, ಅವರ ಆದಾಯ ಲಿಮಿಟ್ ಅನ್ನು ಹೆಚ್ಚು ಮಾಡಿ, ಆ ರೀತಿ ಹೆಚ್ಚು ಮಾಡಿದ ಆದಾಯ ಲಿಮಿಟ್‌ನೊಳಗಡೆ ಬರುವವರಿಗೆ BPL Card ಕೊಟ್ಟು ನಾವು ಅವರಿಗೆ 2 ರೂಪಾಯಿಗೆ ಒಂದು ಕೆ. ಜಿ. ಅಕ್ಕಿ ಕೊಡುತ್ತೇವೆಂದು ಹೇಳಿದ್ದೀರಿ. ರಿಯಾಯಿತಿ ದರದಲ್ಲಿ ಆಹಾರಧಾನ್ಯಗಳ ಪೂರೈಕೆ ಕಡುಬಡವರಿಗೆ ಕೆ.ಜಿ. ಅಕ್ಕಿಗೆ ಎರಡು ರೂಪಾಯಿ ಎಂದು ಇದೆ. ಎಲ್ಲಿದೆ ಸ್ವಾಮಿ? ಎಲ್ಲಿ ಗುರುತಿಸಿದ್ದೀರಿ? ಏಕೆ ಗುರುತಿಸಿಲ್ಲ? ಅದನ್ನು ಮಾಡುತ್ತೇನೆಂದು ಏಕೆ ಹೇಳಿಲ್ಲವೆಂದರೆ, ಎರಡು ರೂಪಾಯಿಗೆ ಕೆ. ಜಿ. ಅಕ್ಕಿ ಕೊಟ್ಟರೆ entire budget ಅದಕ್ಕಾಗಿ ಹೋಗುತ್ತದೆ. ಹೀಗಿರುವಾಗ ಘೋಷಣೆ ಏಕೆ ಆಯಿತು? ಘೋಷಣೆ ಏಕೆಂದರೆ ಓಟಿಗಾಗಿ ಎರಡು ರೂಪಾಯಿಗೆ ಕೆ.ಜಿ. ಅಕ್ಕಿ ಕೊಡುತ್ತೇವೆಂದು ಹೇಳಿದಿರಿ. ಇದಲ್ಲದೆ ಇನ್‌ಕಂ ಲಿಮಿಟ್ ಬಿಪಿಎಲ್ ಕಾರ್ಡುದಾರರಿಗೆ ಹೆಚ್ಚಿಗೆ ಮಾಡುತ್ತೇವೆಂದು ಹೇಳಿದಿರಿ. ಅದನ್ನು ಮಾಡಲಿಲ್ಲ, ಇದರಲ್ಲಿ ಏನಿದೆ? ಈ ಬಜೆಟ್‌ನಲ್ಲಿ ಇಲ್ಲ, ಅದು ನಿಮ್ಮ ಪ್ರಣಾಳಿಕೆಯ ಫಸ್ಟ್ ಪೇಜ್‌ನಲ್ಲಿರತಕ್ಕಂಥ ವಾಗ್ದಾನವನ್ನೇ ನೀವು ನೆರವೇರಿಸಿಲ್ಲ. ಇದರಲ್ಲಿ ನೀವು ಒಬ್ಬನ ಬಾಯಿಗೆ ಮಣ್ಣು ಹಾಕಿ ಇನ್ನೊಬ್ಬರಿಗೆ ಖುಷಿ ಪಡಿಸುವುದಕ್ಕೆ ಮಾಡಿದ್ದೀರಿ. ನೀರಾವರಿಯಲ್ಲಿ ರೈತರಿಗಾಗತಕ್ಕಂಥ ಲಾಭವನ್ನು ಕಡಿತಗೊಳಿಸಿ ಅಲ್ಲಿ ಮೂರು-ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿ ಅದನ್ನು ಹರಿದು ಹಂಚಿ ಎಲ್ಲರಿಗೂ ಕೊಟ್ಟರು. ಪವರ್ ನಲ್ಲಿ ಕಡಿಮೆ ಮಾಡಿ ಸೈಕಲ್ ಎಂದು ಹಂಚಿಕೊಂಡು ಹೊರಟರು. ಅದು ಬಿಟ್ಟು ನೀವು ಏನು ಮಾಡಿದಿರಿ? ನಿಮ್ಮ ಪ್ರಣಾಳಿಕೆಯಲ್ಲಿ ಈ ಎರಡು ಅಂಶಗಳು ಇದ್ದವಲ್ಲ ಸ್ವಾಮಿ, ಪೇಜ್ ನಂಬರ್ 1 ಅಂಡ್ 2 ನಲ್ಲಿ ಇರುವಂಥದ್ದು ಬರಲಿಲ್ಲ. ಇದರ ಜೊತೆಯಲ್ಲಿ ಇನ್ನೊಂದು, ಬಡಜನರಿಗೆ ಹಿಂದೆ ನೀಡಿರತಕ್ಕಂಥ ಆಶ್ರಯ, ಇಂದಿರಾ ಅವಾಸ್, ವಸತಿ ಯೋಜನೆ ಸಾಲ ಮನ್ನಾ ಹಾಗೂ

ಪ್ರತಿ ಮನೆ ನಿರ್ಮಾಣಕ್ಕೂ 40 ಸಾವಿರ ರೂಪಾಯಿ ಎಂದು ಹೇಳಿದ್ದೀರಿ. ಗುರಿ ಎಷ್ಟು ಇದೆ? ಇದನ್ನು ಹೇಳಲಿಲ್ಲ. ಎಷ್ಟು ಕೋಟಿ ರೂಪಾಯಿಗಳನ್ನು ಮನ್ನಾ ಮಾಡುತ್ತೇವೆಂದು ಹೇಳಲಿಲ್ಲ. ಇದು ಕೂಡ ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಇದೆ. ಬಹುಶಃ ನೀವು ಬಜೆಟ್ ಮಾಡುವಾಗ ಇದನ್ನು ಮರೆತು ಹೋಗಿದ್ದೀರೆಂದು ಕಾಣುತ್ತದೆ. ಈ ಪುಸ್ತಕ ನಿಮಗೆ ಸಿಗಲಿಲ್ಲವೇನು? ಬಹುಶಃ ನೀವು ಫೈನಾನ್ಸ್ ಮಿನಿಸ್ಟರ್ ಇದ್ದಾಗ ಇದ್ದಂಥ ಮನೆಯಲ್ಲಿ ಇರಬಹುದು, ಮುಖ್ಯಮಂತ್ರಿಯಾದ ಮೇಲೆ ಅನುಗ್ರಹದಲ್ಲಿ ಇದು ಸಿಕ್ಕಿಲ್ಲ. ಅದಕ್ಕಾಗಿ ನಾನು ಕೇಳುತ್ತೇನೆ, ಇದು ಏಕೆ ಬರಲಿಲ್ಲ? ಜನರಿಗೆ ಏಕೆ ಮೋಸ ಮಾಡಿದಿರಿ? 65 ಲಕ್ಷ ಕುಟುಂಬಗಳಿಗೆ ಅನ್ಯಾಯವಾಗಿದೆ, ಎರಡು ರೂಪಾಯಿಗೆ ಕೆ.ಜಿ. ಅಕ್ಕಿ ಕೊಡುತ್ತೇವೆಂದು ಮೋಸ ಮಾಡಿ ಅವರ ಓಟುಗಳನ್ನು ತೆಗೆದುಕೊಂಡು ಇವತ್ತು ಅವರಿಗೆ ಯಾವುದೇ ರೀತಿಯ ಸಹಾಯವನ್ನು ನೀವು ಮಾಡಿಲ್ಲ ಎನ್ನುವುದು ನಿಮ್ಮ ಪುಸ್ತಕದಿಂದ, ನಿಮ್ಮ ಮಾತಿನಿಂದ, ನಿಮ್ಮ ಪ್ರಣಾಳಿಕೆಯಿಂದ ಗೊತ್ತಾಗುತ್ತದೆ. ಜೊತೆಗೆ ಆರನೇ ಪುಟದಲ್ಲಿ ಮಹಿಳಾ ಸ್ವಯಂ ಸಹಾಯ ಗುಂಪುಗಳಿಗೆ ಮೂಲಧನ ರೂಪಾಯಿ ಐದು ಸಾವಿರದಿಂದ ಹತ್ತು ಸಾವಿರಕ್ಕೆ ಏರಿಕೆ. ಆರು ರೂಪಾಯಿ ಬಡ್ಡಿ, ಆದರೆ, ಒಂದು ಲಕ್ಷ ಮೂವತ್ತು ಸಾವಿರ ಸ್ತ್ರೀ ಶಕ್ತಿ ಗುಂಪುಗಳಿವೆ. ಇದರಲ್ಲಿ ಹೊಸದಾಗಿ ರಚಿತಗೊಂಡಿರುವ ಗುಂಪುಗಳು ಕೂಡ ಸೇರಿವೆ. ಅದಕ್ಕೆ ನೀವು ಹತ್ತು ಸಾವಿರ ರೂಪಾಯಿಗಳ ಸಹಾಯಧನ ಕೊಡಬೇಕಾಗಿದ್ದರೆ ನಿಮ್ಮ ಬಜೆಟ್‌ನಲ್ಲಿದ್ದಂಥ ಹಣ ಅಥವಾ 6% ಬಡ್ಡಿಗಿಟ್ಟಂಥ ಹಣ ಅವರಿಗೆ ಸಹಾಯ ಮಾಡತಕ್ಕಂಥ ಹಣ ಇದನ್ನು ಹೋಲಿಸಿದರೆ, ಕೇವಲ 10% ನಷ್ಟು ಸ್ತ್ರೀ ಶಕ್ತಿ ಗುಂಪುಗಳಿಗೂ ಕೂಡ ಲಾಭವಾಗುವುದಿಲ್ಲ. ಏಕೆಂದರೆ ನಿಮ್ಮ ಬಜೆಟ್‌ನಲ್ಲಿ ಅಷ್ಟು ಹಣವೇ ಇಲ್ಲ. ಹೇಳುವುದು ಮಾತ್ರ ಇನ್ನೊಂದು ಪೇಜ್ ಆರರಲ್ಲಿ ನಿರುದ್ಯೋಗ ಯುವಕರಿಗೆ ಭತ್ಯೆ, ಭರವಸೆ, ತರಬೇತಿ, ಯುವಕರಿಗೆ ರಾಜ್ಯದಲ್ಲಿ ಯುವ ಕೌನ್ಸಿಲ್ ರಚನೆ, ಯುವ ನೀತಿ ನಿರೂಪಣೆ, ಸ್ವಾಮಿ ನಿರುದ್ಯೋಗ ಯುವಕರಿಗೆ ಭತ್ಯೆ ಎಲ್ಲಿದೆ? ನಾನು ಕೂಡ ಹುಡುಕಾಡಿದೆ. ಏಕೆಂದರೆ, ಎರಡು ರೂಪಾಯಿಗೆ ಕೆ.ಜಿ. ಅಕ್ಕಿ ಕೊಡುತ್ತೇನೆಂದು ಹೇಳಿದಿರಿ, B.P.L. Card ಕೊಡುವುದಕ್ಕೆ ಬಡತನ ರೇಖೆಗಿಂತ ಕೆಳಗಿನ ಇನ್‌ಕಂ ಲಿಮಿಟ್ ಹೆಚ್ಚಿಗೆ ಮಾಡುತ್ತೇನೆಂದು ಹೇಳಿದಿರಿ, ನಿರುದ್ಯೋಗ ಯುವಕರಿಗೆ ಭತ್ಯೆ ಕೊಡುತತೇನೆಂದು ಹೇಳಿದಿರಿ, ಎಲ್ಲಾ ಕಡೆ ಹುಡುಕುತ್ತಿದ್ದೆ, ಎಲ್ಲೂ ಸಿಗಲಿಲ್ಲ, ನನಗೇನಾದರೂ ಕಣ್ಣು ತೊಂದರೆಯಾಗಿದೆ ಎಂದು ಕನ್ನಡಕ ತರಿಸಿಕೊಂಡು ನೋಡಿದೆ ಆದರೂ ಸಿಗುತ್ತಿಲ್ಲ. ಬಹುಶಃ ಮಾನ್ಯ ಯಡಿಯೂರಪ್ಪನವರು ಹುಡುಕಿ ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ವಸತಿ ನಿಲಯಗಳಲ್ಲಿನ ವಿದ್ಯಾರ್ಥಿಗಳ ಊಟದ ವ್ಯವಸ್ಥೆಗೆ ಪ್ರತಿ ವಿದ್ಯಾರ್ಥಿಗೆ ಅನುದಾನವನ್ನು 500 ರೂಪಾಯಿನಿಂದ 750 ರೂಪಾಯಿ ಮಾಡುತ್ತೇವೆಂದು ಹೇಳಿದಿರಿ, ಆದರೆ ಅದು 650ಕ್ಕೆ ಈ ಬಜೆಟ್‌ನಲ್ಲಿ ನಮೂದಿಸಿದ್ದೀರಿ, ಅಂದರೆ ನೂರು ರೂಪಾಯಿ ಮಾತ್ರ ಕೊಟ್ಟಿದ್ದೀರಿ. ಇದನ್ನು ನೀವೇ ಹೇಳಿದ್ದು ನಾವೇನು ಕೇಳಿಲ್ಲ. ನಂತರ ಪುಟ -7ರಲ್ಲಿ ಮುಂದಿನ 5 ವರ್ಷಗಳಲ್ಲಿ ವಿದ್ಯುತ್ ಉತ್ಪಾದನೆಯನ್ನು ಇಮ್ಮಡಿ ಗೊಳಿಸಿ ಹತ್ತು ಸಾವಿರ ಮೆಗಾವ್ಯಾಟ್‌ಗೆ ಏರಿಸುವುದು, ಖಾಸಗಿ ಹೂಡಿಕೆದಾರರಿಗೆ ಸೂಕ್ತ ಉತ್ತೇಜನ ನೀಡುವುದು ಎಂದು ಇದೆಲ್ಲಾ ಹೇಳಿದ್ದೀರಿ. ಐದು ವರ್ಷದಲ್ಲಿ ಇಮ್ಮಡಿ ಮಾಡತಕ್ಕಂಥವರು ಈ ವರ್ಷದಲ್ಲಿ 25% ಆದರೂ ಮಾಡಬೇಕಲ್ಲವೆ? 100% ನೀವು ಮಾಡುವುದಾದರೆ

ಉದಾಹರಣೆಗೆ, ನಾಲ್ಕು ಸಾವಿರ ಮೆ.ವ್ಯಾ. ಉತ್ಪಾದನೆ ಇವತ್ತು ಇದ್ದರೆ ಅದರ ಡಬ್ಬಲ್ ಎಂಟು ಸಾವಿರ ಮೆ. ವ್ಯಾ. ಮಾಡುತ್ತೇನೆಂದು ಹೇಳಿದರೆ ಈ ಸಾರಿ ಕನಿಷ್ಟಪಕ್ಷ 500 ಮೆ. ವ್ಯಾ. ನಷ್ಟಾದರೂ ಪ್ರಾವಿಷನ್ ಬೇಕಲ್ಲವೆ? ಈ ಹಿಂದೆ ನಮ್ಮ ಕಾಂಗ್ರೆಸ್ ಪಕ್ಷದ ಸರ್ಕಾರಗಳು ಅಥವಾ ಹಣಕಾಸಿನ ಸಚಿವರುಗಳು ಏನು ಹಣ ನೀಡಿದ್ದರೋ ಅದಕ್ಕಿಂತಲೂ ನೀವು ಕಡಿಮೆ ಹಣ ನೀಡಿದ್ದು ಹೆಚ್ಚಿನ ಉತ್ಪಾದನೆ ಮಾಡುತ್ತೇವೆಂದರೆ ಇದು ನನಗೇನು ಗೊತ್ತಾಗುತ್ತಿಲ್ಲ. ಖಾಸಗಿಯವರೇನು ನೀವು ಹೇಳಿದ ತಕ್ಷಣ ಬರುತ್ತಾರೆಯೆ? ನೀವು ಸೀಟಿ ಹೊಡೆದಾಕ್ಷಣ ಅವರು ಲೈನ್ ಅಪ್ ಆಗುತ್ತಾರೆಯೇ? ಈ ರೀತಿಯಾಗಿ ವಿದ್ಯುತ್‌ನ್ನು ಇಮ್ಮಡಿ ಮಾಡುವುದಕ್ಕೆ ಇವರಿಗೆ ಗೊತ್ತು ಗುರಿಯಿಲ್ಲ, ಯಾವಾಗಲೂ ಕೂಡ ಈ ಬಾಬ್ತಿಗೆ 11%, 12%, 13%,ಇರುತ್ತಿತ್ತು. ಈಗ 9% ಇದಕ್ಕೆ ಇಟ್ಟಿದ್ದಾರೆ. ಇದು ಇವರ ಸಾಧನೆ. ನಂತರ ಎಲ್ಲಾ ಗ್ರಾಮೀಣ ನಗರ ಪ್ರದೇಶಗಳಲ್ಲಿ ಉತ್ತಮ ಗುಣಮಟ್ಟದ ಮತ್ತು ತಕ್ಕ ಪ್ರಮಾಣದ ನೀರು ಪೂರೈಕೆ ಎಂದು ಹೇಳಿದಿರಿ. ಕುಡಿಯುವ ನೀರಿಗೂ ಕೂಡ ಇವರು ಅನುದಾನದಲ್ಲಿ ಒಂದು ಪರ್ಸೆಂಟು ಕಡಿಮೆ ಮಾಡಿದ್ದಾರೆ. ಇದನ್ನೆಲ್ಲಾ ನೋಡಿದರೆ ಎಷ್ಟರಮಟ್ಟಿಗೆ ನಿಮಗೆ ಬಡವರ ಬಗ್ಗೆ, ವಿದ್ಯಾರ್ಥಿಗಳ ಬಗ್ಗೆ, ನಿರುದ್ಯೋಗಿ ಪದವೀಧರರ ಬಗ್ಗೆ, ರೈತರ ಬಗ್ಗೆ, ಕಾಳಜಿ ಇದೆ ಎನ್ನುವುದು ಈ ಬಜೆಟ್‌ನಿಂದಲೇ ಗೊತ್ತಾಗುತ್ತದೆ. ಆದರೆ, ಆನೆಯ ಹಲ್ಲು ತೋರಿಸುವುದಕ್ಕೆ ಒಂದು ತಿನ್ನುವುದಕ್ಕೆ ಬೇರೆ ಇರುತ್ತದೆ. ಆ ರೀತಿ ಆಗಿದೆ. ತೋರಿಸುವುದೇ ಒಂದು ಮಾಡವುದೇ ಒಂದು. ಆ ರೀತಿಯಲ್ಲಿ ಈ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾಡಿದ್ದಾರೆ. ಮತ್ತೊಂದು ಕಡೆ ಹೇಳಿದ್ದಾರೆ. ಕೃಷ್ಣಾ ಮತ್ತು ಕಾವೇರಿ ಕಣಿವೆಗಳಲ್ಲಿ ಕರ್ನಾಟಕದ ನೀರಿನ ಪಾಲನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತೇವೆಂದು ಹೇಳಿದ್ದಾರೆ. ದುಡ್ಡು ಇಲ್ಲದೆ ಹೇಗೆ ಬಳಸಿಕೊಳ್ಳುತ್ತಾರೋ ನನಗಂತೂ ಗೊತ್ತಾಗುತ್ತಿಲ್ಲ. ಅದಷ್ಟು ಕಡಿಮೆ ಮಾಡಿಕೊಂಡು, ಬಂದು, 2001 ರಲ್ಲಿ 39% ಇದ್ದರೆ ಇವತ್ತು 13%ಗೆ ತಂದು ನಿಲ್ಲಿಸಿದ್ದಾರೆ. ಇದರ ಲೆಕ್ಕವನ್ನು ನಾವು ಹಾಕಿದರೆ, ಎಷ್ಟರ ಮಟ್ಟಿಗೆ ಕಾವೇರಿ ಮತ್ತು ಕೃಷ್ಣಾ ಕಣಿವೆಗಳ ವ್ಯಾಪ್ತಿಯಲ್ಲಿ ಬರುವ ನೀರಾವರಿ ಕಾಮಗಾರಿಗಳನ್ನು ಮುಗಿಸುತ್ತಾರೆನ್ನುವುದಕ್ಕೆ ಇದು ಸಾಕ್ಷಿ. ಅದೇ ರೀತಿಯಾಗಿ ಸರ್ಕಾರಿ ನೌಕರರ ನಿವೃತ್ತಿಯ ವಯೋಮಿತಿಯನ್ನು ಏರಿಕೆ ಮಾಡಿದ್ದಾರೆ.

ಶ್ರೀ ಆರ್. ರೋಷನ್ ಬೇಗ್ : ಸದನ ನಡೆಯುತ್ತದೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಸನ್ಮಾನ್ಯ ಈಶ್ವರಪ್ಪನವರು, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದನ್ನು ಕೇಳುವುದು ಬಿಟ್ಟು, ಹೊರಗಡೆ ಪ್ರೆಸ್ ಕಾನ್‌ಫರೆನ್ಸ್ ನಡೆಸುತ್ತಿದ್ದಾರೆ. ಇದೇನು ಪಿತೂರಿಯೇ? ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದು ಪ್ರೆಸ್‌ನಲ್ಲಿ ಕವರ್ ಆಗಬಾರದೆಂದು ಪ್ರೆಸ್‌ನವರೆಲ್ಲರನ್ನು ಹೊರಗಡೆ ಕರೆದು ಅಲ್ಲಿ ಪ್ರೆಸ್ ಕಾನ್ಫರೆನ್ಸ್ ಏಕೆ ಮಾಡುತ್ತಾರೆ? ತಾವು ನೋಡಿ ಸಾರ್, ನಾನು ಕೂಡ ಇಷ್ಟು ವರ್ಷಗಳ ಕಾಲ ಈ ಸದನದಲ್ಲಿ ಇದ್ದೇನೆ. ಈ ತರಹ ನಾನು ನೋಡಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಂಥ ಸಂದರ್ಭದಲ್ಲಿ ಬೇಕಾಗಿಯೇ ಮಾನ್ಯ ಈಶ್ವರಪ್ಪನವರು ಪ್ರೆಸ್‌ನವರೆಲ್ಲರನ್ನು ಹೊರಗಡೆ ಕರೆದುಕೊಂಡು ಹೋಗಿದ್ದಾರೆ. ಸದನ ಮುಗಿದ ಮೇಲೆ ಪ್ರೆಸ್ ಕಾನ್ಫರೆನ್ಸ್ ಮಾಡಲಿಕ್ಕೆ ಆಗುತ್ತಿರಲಿಲ್ಲವೇ? ಈಗಲೇ ಪ್ರೆಸ್ ಮೀಟಿಂಗ್ ಮಾಡಬೇಕೆ? ಇದೆಂಥ ನ್ಯಾಯ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏಕೆ ಹೀಗೆ ಮಾಡುತ್ತಾರೋ ನನಗೆ ಗೊತ್ತಾಗುತ್ತಿಲ್ಲ. ಪ್ರೆಸ್ ಕಾನ್ಫರೆನ್ಸ್ ನಾಲ್ಕು ಗಂಟೆಗೆ ಮಾಡಲಿ, ಮುಂಜಾನೆ ಮಾಡಲಿ, ಅದು ಬಿಟ್ಟು ಇಲ್ಲಿದ್ದವರಿಗೆಲ್ಲ ಎಬ್ಬಿಸಿಕೊಂಡು ಹೊರಗಡೆ ಹೋಗಿ ಪ್ರೆಸ್ ಕಾನ್ಫರೆನ್ಸ್ ಮಾಡುವುದು, What is this? ಈ ರೀತಿಯಾಗಿ ಅವರು ಮಾಡಿದರೆ ಹೇಗೆ? ಅವರ ನೀರಾವರಿ subject ಇದೆ, ಅದರ ಮೇಲೆ ನಾವು ಮಾತನಾಡುತ್ತಿದ್ದೇವೆ. ಹೇಳುತ್ತಿದ್ದೇವೆ, all cheap popularity and how they want to scuttle down and they want ಏನೆಂದರೆ publicity, they want everything and they don't want to take criticism and ನಾವು ಏನಾದರೂ ಇಲ್ಲಿ ಇರತಕ್ಕಂಥದ್ದನ್ನು ಹೇಳಬೇಕೆಂದರೆ ಅವರು ಸುಧಾರಣೆ ಮಾಡಿಕೊಳ್ಳುತ್ತಾರೆಯೆ? ಅವರಿಗೆ ಏನು ಕೆಲಸ ಇದೆ? ಜನ ಏಕೆ ಆರಿಸಿ ಕಳುಹಿಸಿದ್ದಾರೆ? ನಾವು ಎಲ್ಲಾ ಸದಸ್ಯರು ಹೇಳುವ ಮಾತನ್ನು ಕೇಳಬೇಕೆನ್ನುವ ದೃಷ್ಟಿಯಿಂದ ಕಳುಹಿಸಿದ್ದಾರೋ ಎನೋ ಇವರಿಗೆ ಸದನ ಇದ್ದಾಗ ಪ್ರೆಸ್ ಕಾನ್ಫರೆನ್ಸ್ ಮಾಡುವುದಕ್ಕೆ ಕಳುಹಿಸಿದ್ದಾರೋ?

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿರುವಾಗ ಈ ರೀತಿಯಾಗಿ press conference ಮಾಡತಕ್ಕಂಥದು ಸರಿಯಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಬಜೆಟ್‌ನಲ್ಲಿ ಮಂಡನೆ ಮಾಡಿರತಕಕಂಥ ವಿಷಯಗಳನ್ನು ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ advertisement ಕೊಟ್ಟಿದ್ದಾರೆ. ಆದ್ದರಿಂದ, press conference ಮಾಡುವುದಕ್ಕೆ ಮತ್ತೇನು ಇದೆ? ಇಡೀ ಬಜೆಟ್ ಪುಸ್ತಕವನ್ನೆ ಪ್ರಿಂಟ್ ಮಾಡಿಸಿದ್ದಾರೆ. ಬೇಕಾದರೆ, ಇನ್ನೂ advertisement ಕೊಡಲಿ ನಮಗೇನು ತೊಂದರೆ ಇಲ್ಲ. 5 ವರ್ಷ ಕೂಡಾ advertisement ಕೊಡುತ್ತಾ ಹೋಗಲಿ ನಾವೇನು ತಲೆಕೆಡಿಸಿಕೊಳ್ಳುವುದಕ್ಕೆ ಹೋಗುವುದಿಲ್ಲ. ಆದರೆ, ವಿರೋಧಪಕ್ಷದ ನಾಯಕರು ಮಾತನಾಡುವಾಗ ಯಾವ ರೀತಿಯಾಗಿ ಅವರು press conference ಮಾಡುತ್ತಿದ್ದಾರೆ ಎನ್ನತಕ್ಕಂಥದರ ಬಗ್ಗೆ ಮಾನ್ಯ ರೋಷನ್‌ಬೇಗ್ ಸಾಹೇಬರು ಸದನದ ಗಮನಕ್ಕೆ ತಂದಿದ್ದಾರೆ. ಇದಕ್ಕೆಲ್ಲಾ ತಾವು ಅವಕಾಶ ಕೊಡಬಾರದು.

ಶ್ರೀ ಆರ್. ರೋಷನ್ ಬೇಗ್ : ಇದು media advisor idea ಎಂದು ಕಾಣುತ್ತದೆ.

ಡಾ|| ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಸಭಾಧ್ಯಕ್ಷರೆ, ಇದರ ಬಗ್ಗೆ ತಾವು ಏನಾದರು ಕ್ರಮವನ್ನು ತೆಗೆದುಕೊಳ್ಳಬೇಕು. you have to respond to this.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾವು ಬರೆದು ಕಳುಹಿಸುತ್ತೇವಷ್ಟೆ. ಅದನ್ನು ಬೇಕಾದರೆ ರೆಕಾರ್ಡ್ ಮಾಡಿಸಿಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) : ಮಾನ್ಯ ಅಧ್ಯಕ್ಷರೆ, ಇಂಧನ ಸಚಿವರಾದ ಮಾನ್ಯ ಈಶ್ವರಪ್ಪನವರಿಗೆ ವಿಧಾನ ಪರಿಷತ್‌ನಲ್ಲಿ ಇವತ್ತು Question hour ಇದೆ. ಆದ್ದರಿಂದ, ಅವರು question hourಅನ್ನು attend ಮಾಡುವುದಕ್ಕೆ ಅಲ್ಲಿಗೆ

ಹೋಗಿದ್ದಾರೆ. ಅದು ಆದಮೇಲೆ ಏನಾಗಿದೆ ಎಂಬುದರ ಮಾಹಿತಿ ತರಿಸಿಕೊಂಡು ಸದನದ ಗಮನಕ್ಕೆ ತರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅವರು ಎಲ್ಲಿಯೇ ಇರಲಿ ಅದು ಬೇರೆ. ಈ ಮನೆಯಲ್ಲಿ ಬಜೆಟ್ ಬಹಳ ಮುಖ್ಯವಾದದ್ದು. ಬಜೆಟ್ ಮೇಲೆ ಮಾತನಾಡುತ್ತಿರುವಾಗ ನೀರಾವರಿ ಮೇಲೆ ಏನು ಸಲಹೆಗಳು ಬರುತ್ತವೆ ಮತ್ತು ಪವರ್ ಸೆಕ್ಟರ್ ಮೇಲೆ ಕೆಲವು ಸಲಹೆಗಳು ಬರುತ್ತಿರುತ್ತವೆ. ಮತ್ತೆ ಬಹಳ ಮುಖ್ಯವಾಗಿ ಮಾನ್ಯ ಮುಖ್ಯ ಮಂತ್ರಿಗಳು ಮಾನ್ಯ ಈಶ್ವರಪ್ಪನವರ ಮೇಲೆ ಅನುಕಂಪ ತೋರಿಸಿದ್ದಾರೆ. ಏಕೆಂದರೆ, ಕೊಡಲಿಲ್ಲವೆಂದರೆ ನಾನು ಒಂದು ಕೈ ನೋಡುತ್ತೇನೆಂದು ಅವರು ಹೇಳಿದ ಮೇಲೆ ಅದನ್ನು ಮಾಡಿ ಕೊಟ್ಟಿದ್ದಾರೆಂಬ ಸುದ್ದಿ ಬಂತು. ಮೊದಲು ಆಗುವುದಿಲ್ಲವೆಂದು ಹೇಳಿದ್ದರು ಮತ್ತೆ ಆನಂತರ ನೋಡೋಣವೆಂದು ಹೇಳಿದ್ದರು. ಕೊನೆಗೆ ಮಾಡಿಕೊಟ್ಟರು. ಕನಿಷ್ಠ ಮಾಡಿಕೊಟ್ಟ ಮೇಲೆ, ಬೇರೆಯವರ ಸಲಹೆ ಏನಿದೆ ಎಂಬುದನ್ನು ಮತ್ತು ಯಾವ ರೀತಿಯಾಗಿ ಅವರು ವಿದ್ಯುತ್‌ನ್ನು ಉತ್ಪನ್ನ ಮಾಡುತ್ತಾರೆಂದು, ಅವರು ವಿದ್ಯುತ್ ಉತ್ಪನ್ನವನ್ನು ಯಾವ ರೀತಿಯಾಗಿ ಇಮ್ಮಡಿ ಮಾಡುತ್ತಾರೆಂಬುದನ್ನು, ಅದಕ್ಕೆ resource mobilization ಅನ್ನು ಯಾವ ರೀತಿಯಾಗಿ ಮಾಡುತ್ತಾರೆಂಬುದನ್ನು ಮತ್ತು ಎಷ್ಟು ಜನ private sector ನವರು ಅವರಿಗೆ ಸಪೋರ್ಟ್ ಮಾಡುತ್ತಿದ್ದಾರೆಂಬುದನ್ನು ಮತ್ತೆ ಎಷ್ಟು ಮೆಗಾ ವಾಟ್ಸ್ ವಿದ್ಯುತ್‌ನನ್ನು ಉತ್ಪಾದನೆ ಆಡುತ್ತಾರೆಂಬುದು ಮತ್ತೆ ಈಗ ಎಷ್ಟು ಶಾರ್ಟೇಜ್ ಇದೆ ಎಂಬುದರ ಬಗ್ಗೆ ಇಲ್ಲಿರತಕ್ಕಂಥವರು ಒಬ್ಬೊಬ್ಬರು ತಮಗೆ ತಿಳಿದಷ್ಟು ಸಲಹೆಗಳನ್ನು ಕೊಡುತ್ತಾರೆ. ಎಲ್ಲವನ್ನು ನಾವೇ ಹೇಳುತ್ತೇವೆಂದು ನಿಮ್ಮ ಮುಂದೆ ನಿಂತುಕೊಳ್ಳುವಷ್ಟು ಬೃಹಸ್ಪತಿಗಳೇನು ನಾವಲ್ಲ. ಆದರೆ, ನಮಗೆ ತಿಳಿದಿರತಕ್ಕಂಥದನ್ನು ನಾವು ಹೇಳುವಾಗ ಅದನ್ನು ಕೇಳುವ ಸೌಜನ್ಯ ಇಲ್ಲವೆಂದರೆ ಹೇಗೆ? ನಾವು ಮತ್ತೇನು ಹೇಳಬೇಕು? ಆದ್ದರಿಂದ, ಇದು ನಿಮಗೆ ಬಿಟ್ಟ ವಿಚಾರ.

ಮಾನ್ಯ ಯಡಿಯೂರಪ್ಪನವರು ಬಜೆಟ್ ಪುಸ್ತಕದಲ್ಲಿ 1 ರಿಂದ 9ನೇ ಪುಟದವರೆಗೆ ಅನೇಕ ವಾಗ್ದಾನಗಳನ್ನು ಮಾಡಿದ್ದಾರೆ. ಮತ್ತೆ ಎರಡನೇ ಭಾಗದಲ್ಲಿ ಇವೆಲ್ಲವಕ್ಕೂ ಕೂಡ explanation ಕೊಟ್ಟಿದ್ದಾರೆ. ಅದಂರೆ, ಜಲ ಸಂಪನ್ಮೂಲವನ್ನು ಹೇಗೆ ಮಾಡುತ್ತೇವೆಂದು ಮತ್ತು ಆರೋಗ್ಯ, ಶಿಕ್ಷಣಕ್ಕೆ ಏನು ಮಾಡುತ್ತೇವೆಂಬುದನೆಲ್ಲಾ ಹೇಳಿಕೊಂಡು ಹೋಗಿದ್ದಾರೆ. ಮತ್ತೆ ಕೊನೆಗೆ ಒಂದು ಜಿಸ್ಟ್‌ನ್ನು ತಯಾರು ಮಾಡಿಕೊಂಡಿದದಾರೆ. ಅದೇನೆಂದರೆ, ರಾಜ್ಯದಲ್ಲಿ ಮುಂದಿನ 5 ವರ್ಷಗಳಲ್ಲಿ ನೀರು ಎಂದು ಹೇಳಿದ್ದೀರಿ. ಅಂದರೆ, ಈ ಬಜೆಟ್‌ನಲ್ಲಿಯೇ ನಿಮ್ಮ ನೀರು ಹೋಯಿತು. ಇನ್ನು ಕೇವಲ ನಾಲ್ಕು ವರ್ಷ ಮಾತ್ರ ಉಳಿಯಿತು. ನೀರಾವರಿ, ರಸ್ತೆ, ವಿದ್ಯುಚ್ಛಕ್ತಿ ಮತ್ತು ಉದ್ದಿಮೆ ಅಭಿವೃದ್ಧಿಗಾಗಿ ಸ್ವಚ್ಛ ಸೌಕರ್ಯಭರಿತ ನಗರಗಳು ಹಾಗೂ ಅಭಿವೃದ್ಧಿಶೀಲ ಹಳ್ಳಿಗಳ ರಚನೆಗಾಗಿ ರೂ. 1ಲಕ್ಷ ಕೋಟಿ ಮೊತ್ತದ ಬೃಹತ್ ಹೂಡಿಕೆಗೆ ಯೋಚಿಸಲಾಗಿದೆ ಎಂದು ಹೇಳಿದ್ದೀರಿ. 1ಲಕ್ಷ ಕೋಟಿ ಅಂದರೆ, 2 ಬಜೆಟ್‌ನ ಹಣವಾಗುತ್ತದೆ. ಈಗ ನಿಮ್ಮ ಬಜೆಟ್ 55 ಸಾವಿರ ಕೋಟಿ ರೂಪಾಯಿ ಇದೆ. ಕಳೆದ ಸಲ ನಮ್ಮ ಬಜೆಟ್ 47 ಸಾವಿರ ಕೋಟಿ ರೂಪಾಯಿಗಳಿಷ್ಟಿತ್ತು. ಆದರೆ, ಈಗ ಅವರು ಹೇಳಿರತಕ್ಕಂಥದ್ದೇನೆಂದರೆ, ಪ್ರತಿ ವರ್ಷ ಆಗತಕ್ಕಂಥದ್ದನ್ನು ಬಿಟ್ಟು, 1ಲಕ್ಷ ಕೋಟಿ ಮೊತ್ತದ ಬೃಹತ್ ಹೂಡಿಕೆ ಮಾಡಿ ಎಲ್ಲಾಕಡೆ ಇನ್‌ವೆಸ್ಟ್‌ಮೆಂಟ್ ಮಾಡಿಸುತ್ತೇವೆಂದು ಹೇಳಿದ್ದೀರಿ.

ನನ್ನದೊಂದು ಇರಲಿ ಬರೆಯಿರಿ ಎಂದು ಇದನ್ನು ಮಾನ್ಯ ಕಟ್ಟಾಸುಬ್ರಹ್ಮಣ್ಯ ನಾಯ್ಡುರವರು ಹೇಳಿದರೇನೊ ಗೊತ್ತಿಲ್ಲ.

ಅಧ್ಯಕ್ಷರು : ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಕೈಗಾರಿಕಾ ಇಲಾಖೆಯ ಸಚಿವರಾಗಿಲ್ಲ. ಮಾನ್ಯ ಮುರುಗೇಶ್ ನಿರಾಣಿರವರು ಈಗ ಕೈಗಾರಿಕಾ ಇಲಾಖೆಯ ಸಚಿವರಾಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : Sorry, ಮಾನ್ಯ ಮುರುಗೇಶ್ ನಿರಾಣಿಯವರು ಶುಗರ್ ಎಕ್ಸ್‌ಪರ್ಟ್ ಆಗಿದ್ದಾರೆ. 1ಲಕ್ಷ ಕೋಟಿ ರೂಪಾಯಿಗಳ ಬೃಹತ್ ಮೊತ್ತದ ಹೂಡಿಕೆ ಮಾಡುವುದಕ್ಕೆ ಯೋಚಿಸಲಾಗಿದೆ ಮತ್ತೆ ಇದರೊಂದಿಗೆ ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಹಿಂದಿನ ಎರಡು ಮುಂಗಡ ಪತ್ರದಲ್ಲಿ ನೀಡಿದ ಎಲ್ಲಾ ಜನ ಕಲ್ಯಾಣ ಕಾರ್ಯಕ್ರಮಗಳು ಸೇರಿದ್ದು ಇದರ ಜೊತೆಗೆ ಮತ್ತೆ 1000 CL-2 ಹಾಗೂ 500 CL-9 ಕೂಡ ಸೇರಿ ಕಾರ್ಯಕ್ರಮಗಳನ್ನು ಮಂದುವರಿಸಲಾಗಿದೆ. ಬನ್ನಿ ಬೆಂಬಲಿಸಿ, ಸಮೃದ್ಧ ಕರ್ನಾಟಕ ಕಟ್ಟಲು BJP ಗೆ ಮತ ನೀಡಿ ಎಂದು ಹೇಳಿದ್ದಾರೆ. ಇದಕ್ಕಾಗಿ ನಿಮಗೆ ಮತ ನೀಡಬೇಕು? ಯಾವುದಕ್ಕೆಂದರೆ, ಬಿಯರ್ ಅಂಗಡಿಗಳನ್ನು ಜಾಸ್ತಿ ಮಾಡಿರುವುದಕ್ಕ ಮತ್ತು ನೀರಾವರಿಗೆ ಕಡಿತ ಮಾಡಿರುವುದಕ್ಕೆ ಮತ್ತೆ ರೂರಲ್ ಡೆವಲಪ್‌ಮೆಂಟ್‌ಗೆ ಹಣ ಕಡಿತ ಮಾಡಿರುವುದಕ್ಕೆ ಮತ್ತು ಕುಡಿಯುವ ನೀರಿಗಾಗಿ ಬೇಕಾಗಿರತಕ್ಕಂಥ ಹಣವನ್ನು ಕಡಿತ ಮಾಡಿರುವುದಕ್ಕೆ ಮತ್ತೆ ಮೂಲಭುತ ಸೌಕರ್ಯಕ್ಕೆ ಹಣ ಇಡದೆ ಇಚ್ಛೆ ಬಂದಂತೆ ಹಣವನ್ನು ಹಂಚಿರುವುದಕ್ಕಾಗಿ ನಿಮಗೆ ಮತ ನೀಡಬೇಕೆ? ಬಹುಶಃ ಜನ ಇದಕ್ಕಾಗಿ ಮತ ಕೊಟ್ಟಿದ್ದಾರೆಂದು ಅವರ ಭಾವನೆ ಇರಬಹುದು ಅದಕ್ಕಾಗಿ ಇವತ್ತಿನ ದಿವಸ ಅವರು ಇದ್ದಾರೆ. ಇನ್ನೊಂದು ವಿಶೇಷ ಏನೆಂದರೆ, ನಂಜುಡಪ್ಪನವರ ವರದಿ ಪ್ರಕಾರ ರೀಜನಲ್ ಇಂಬ್ಯಾಲನ್ಸ್‌ನ್ನು ಸರಿಪಡಿಸುವುದಕ್ಕೋಸ್ಕರ 2500 ಕೋಟಿ ಇದರಲ್ಲಿ ಇಟ್ಟಿದ್ದಾರೆ. ಹೋದ ಸಲ ಇವರೇ 1571 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಎಲ್ಲಾ ಇಲಾಖೆಯಿಂದ ಸಂಗ್ರಹಿಸಿದ ಹಣವನ್ನು ಒಂದು ಕಡೆ ಕ್ರೋಢಿಕರಿಸಿ ಬಹ್ರುತ್ ಮೊತ್ತವನ್ನು ಮಾಡಿ ನಂಜುಂಡಪ್ಪನವರ ವರದಿ ಪ್ರಕಾರ 1571 ಕೋಟಿ ರೂಪಾಯಿ ಇಟ್ಟಿದ್ದೇವೆಂದು ಹೇಳಲಾಗಿತ್ತು. ಎಲ್ಲಾ ಇಲಾಖೆಯ ಹಣವನ್ನು ಒಂದು ಗೂಡಿಸಿ ಆ ಫಿಗರ್ಸ್ ತೋರಿಸಿದ್ದರು. ಆದರೆ, ಅದರಲ್ಲಿ ಖರ್ಚು ಎಷ್ಟಾಯಿತ್ತೆಂಬುದನ್ನು ನೋಡಬೇಕಲ್ಲವೆ? ಈ ಸಾರಿ 2500 ಕೋಟಿ ರೂಪಾಯಿಗಳೆಂದು ತೋರಿಸಿದ್ದೀರಿ. ಆದರೆ, ಇದರಲ್ಲಿ ಎಲ್ಲಾ ಇಲಾಖೆಯಲ್ಲಿನ ಎಲ್ಲಾ ಯೋಜನೆಗಳನ್ನು ಸೇರಿಸಲಾಗಿದೆಯೋ ಅಥವಾ ಇದು ವಿಶೇಷವಾದಂಥ ಸಹಾಯಧನವೇ? ಒಂದು ವೇಳೆ ಇದು ವಿಶೇಷವಾಗಿಲ್ಲವೆಂದರೆ, ನೀವು ನಮಗೆ ಸಹಾಯ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಎಲ್ಲಾ ಯೋಜನೆಗಳಿಗೆ ಕೊಟ್ಟಿರುವ ಹಣ ಉದಾಹರಣೆಗೆ ಹೇಳುವುದಾದರೆ, ಪ್ರತಿಯೊಂದು ಮತ ಕ್ಷೇತ್ರದಲ್ಲಿ 50 ಕಿ.ಮೀ.ರಸ್ತೆ ಇರುತ್ತದೆ. ಆದರೆ, ಅಲ್ಲಿಯೂ ಕೂಡ 50 ಕಿ.ಮೀ. ರಸ್ತೆಯನ್ನು ರೋಟಿನ್ ಆಗಿ ಕೊಟ್ಟು ನಂಜುಡಪ್ಪ ವರದಿ ಪ್ರಕಾರ ಉಳಿದಂತಹ ಮತ್ತೊಂದು 10 ಕಿ.ಮೀ.ರಸ್ತೆ ಅಥವಾ ಬೇರೆ ಬೇರೆ ಕೆಲಸಕ್ಕೆ ಅಂದರೆ, ಸ್ಕೂಲ್, ಕಾಲೇಜುಗಳ ಕಟ್ಟಡಕ್ಕೆ ಕೊಟ್ಟಿದ್ದಾರೆ. ಇದರಿಂದ ನಂಜುಂಡಪ್ಪ ವರದಿ ಮೂಲೆ ಗುಂಪಾಯಿತು. ಆಗ ನಮ್ಮ ಮಾನ್ಯ ರೇವಣ್ಣನವರೂ ಸಹ ಇದಕ್ಕೆ ಕಾರಣರಾಗಿದ್ದಾರೆ. ಮಾನ್ಯ ಯಡಿಯೂರಪ್ಪನವರು ಮತ್ತು ಇವರು ಕುಳಿತು ಸ್ಕೂಲ್ ಮತ್ತು

ಕಾಲೇಜುಗಳು ಇದ್ದ ಕಡೆಯೇ ಮತ್ತೆ ಸ್ಕೂಲ್ ಮತ್ತು ಕಾಲೇಜುಗಳಿಗೆ ಅನುಮತಿ ಕೊಟ್ಟರು. ಸಿಗದೆ ಇರತಕ್ಕಂಥವರು ಸುಮ್ಮನಾದರು, ಇದ್ದವನು ಎಲ್ಲವನ್ನೂ ತೆಗೆದುಕೊಂಡು ಹೋದ. ನಾವೆಲ್ಲಾ ಮಾನ್ಯ ಯಡಿಯೂರಪ್ಪನವರನ್ನು ಮತ್ತು ಮಾನ್ಯ ರೇವಣ್ಣನವರನ್ನು ನೋಡಿಕೊಂಡು ಅಲ್ಲಿಯೇ ಕುಳಿತುಕೊಂಡೆವು. ಇಲ್ಲಿ ಏನಾಯಿತ್ತೆಂದರೆ, ಬಫೆ ಸಿಸ್ಟಮ್‌ನಲ್ಲಿ ಯಾರ ಕೈಗೆ ಎಷ್ಟು ಸಿಗುತ್ತದೆಯೋ ಅಷ್ಟನ್ನು ಮಾಡಿಕೊಂಡರು. ಮಾನ್ಯ ರೇವಣ್ಣನವರು ಕೈಗೆ ಸಿಕ್ಕಷ್ಟು ತೆಗೆದುಕೊಂಡರು, ಮಾನ್ಯ ಯಡಿಯೂರಪ್ಪನವರು ಸಹಾ ಕೈಗೆ ಸಿಕ್ಕಷ್ಟು ತೆಗೆದುಕೊಂಡರು. ಮತ್ತೆ ಇವರು ಒಂದು ಚರಂಡಿ ಸಹಿತ ಬಿಡಲಿಲ್ಲ. ಅವರ ವಿಧಾನ ಸಭಾ ಕ್ಷೇತ್ರಕ್ಕೆ 70, 90ಕೋಟಿ ರೂಪಾಯಿಗಳನ್ನು ಕೊಟ್ಟು ಅವರಿಗೇನು ಬೇಕಾಗಿತ್ತೋ ಅವೆಲ್ಲವನ್ನು ಮಾಡಿಕೊಂಡರು. ನೀನು ಹಾಗೆ ಮಾಡಿದರೆ ನಾನು ಹೀಗೆ ಮಾಡುತ್ತೇನೆಂದು ಮಾಡಿಕೊಂಡರು. ಇದೇನು systematic growth? ಇದೇನು ನ್ಯಾಯಬದ್ಧವಾದ ಅಭಿವೃದ್ಧಿಯೇ? ಇದು ಎಲ್ಲರಿಗೂ ಸರಿ ಮಾನವಾಗಿ ನೋಡತತಕ್ಕಂಥ ಅಭಿವೃದ್ಧಿಯೇ? ಆದ್ದರಿಂದ, ಈ ರೀತಿಯಾದ ಬಫೆ ಸಿಸ್ಟಮ್ ಅನ್ನು ತೆಗೆದು ಹಾಕಬೇಕು. ಎಲ್ಲರಿಗೂ ಸ್ವಲ್ಪ ಬಡಿಸಿ ಊಟ ಹಾಕಿದರೆ ಇರತಕ್ಕಂಥದರಲ್ಲಿಯೇ ಹೊಟ್ಟೆ ತುಂಬಾ ತಿನ್ನುತ್ತಾನೆ. ಅದನ್ನು ಬಿಟ್ಟು ಯಾರ ಕೈಗೆ ಎಷ್ಟು ಸಿಗುತ್ತದೆಯೋ ಅಷ್ಟು ಮಾಡಿಕೊಂಡು ಹೋಗುವುದು ಬೇರೆಯವರು ಅದನ್ನು ನೋಡಿಕೊಂಡು ಕುಳಿತುಕೊಳ್ಳುವಂಥದಾಗುತ್ತದೆ. ನಾಲ್ಕು ಜನ ಒತ್ತಡ ತಂದರೆ ಅವರಿಗೊಂದು ಕೊಡುವುದು. ಈ ರೀತಿಯಾದರೆ, ನಂಜುಂಡಪ್ಪನವರು ತಮ್ಮ ವರದಿಯಲ್ಲಿ ಹೇಳಿರುವಂಥ ಮಾರ್ಗಸೂಚಿಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಆಗುತ್ತದೆಯೇ? ಆದ್ದರಿಂದ ನಂಜುಂಡಪ್ಪನವರ ವರದಿಯಲ್ಲಿರತಕ್ಕಂಥದ್ದು ಅನುಷ್ಠಾನಕ್ಕೆ ಬರಬೇಕಾದರೆ ಅದಕ್ಕೆ ವಿಶೇಷವಾದಂಥ ಹಣವನ್ನು ತೆಗೆದಿಡಬೇಕು. ಈ ಹಣ ನಂಜುಂಡಪ್ಪನವರ ಕಾರ್ಯಕ್ರಮಕ್ಕೆಂದು ಮತ್ತು ಇದು regional imbalance fund ಎಂದು ಹೇಳಬೇಕು. ಇದರಲ್ಲಿ ರೆಗ್ಯುಲರ್ ಪ್ರೋಗ್ರಾಮ್‌ಗಳನ್ನು ಬಿಟ್ಟು ಹೇಳುತ್ತಿದ್ದೇನೆ. ಇದು additional fund ಆಗಿರಬೇಕು. ಅದಕ್ಕೆ regular program ಬಿಟ್ಟು ಎಲ್ಲರಿಗೆ ಕೊಡತಕ್ಕಂಥದ್ದು ಬಿಟ್ಟು ಈ imbalance ನ್ನು ಸರಿಪಡಿಸುವುದಕ್ಕೋಸ್ಕರ ನೀವು ಹಣವನ್ನು ಹಂಚಿದರೆ ಅದಕ್ಕೆ ಅನ್ನುತ್ತಾರೆ, ನೀವು balance ಅನ್ನು ಮಾಡುವುದಕ್ಕೆ ಹೊರಟಿದ್ದೀರಿ ಎಂದು. ಹೋದ ವರ್ಷ ನಾವು ನೋಡಿದ್ದೇವೆ, imbalance ಅನ್ನು further create ಮಾಡಿದಿರಿ, ಹೊರತಾಗಿ balance ನ್ನು ಮಾಡಲಿಲ್ಲ. ಅದಕ್ಕೆ ದಯವಿಟ್ಟು ಇದಕ್ಕೆ ಒಂದು ಸ್ಪಷ್ಟನೆಯನ್ನು ಕೊಡಬೇಕು. Regular program ನಲ್ಲಿ ಬರುವುದನ್ನು ಬಿಟ್ಟು ಇದಕ್ಕೆ ವಿಶೇಷವಾದಂಥ additional fund ಅನ್ನು ಈ ಒಂದು ಹಿಂದುಳಿದ ಪ್ರದೇಶಕ್ಕೆ ಎಷ್ಟು ಕೊಟ್ಟಿದ್ದೀರಿ ಎನ್ನುವುದು ಒಂದು. ಎರಡನೆಯದು ಏನು ಎಂದರೆ, ಹೈದ್ರಾಬಾದ್-ಕರ್ನಾಟಕದ ಬಗ್ಗೆ ನಾವು ಕೂಗುವವರು ಕೂಗುತ್ತಿದ್ದೇವೆ, ಮತ್ತು ಕೇಳುತ್ತಿದ್ದೇವೆ, ಆದರೆ ಈ ಸಲವಾದರೂ ತಾವು ಹೆಚ್ಚಿಗೆ ಹಣವನ್ನು ಕೊಡುತ್ತೀರಿ ಎಂದು ನಾನು ಭಾವಿಸಿದ್ದೆ. ಏಕೆಂದರೆ ಅಲ್ಲಿ ಬಂದಾಗ ಮಾನ್ಯ ಯಡಿಯೂರಪ್ಪನವರು, ಈಶ್ವರಪ್ಪನವರು ಎಲ್ಲಾ ಹೇಳಿ ಬಂದಿರುತ್ತಾರೆ. ಕೆಲವು ಜನ ಇನ್ನು ಇಬ್ಬರು ಅವರ ಜೊತೆಯಲ್ಲಿ ಬರುತ್ತಾರೆ. ಇವರಿಂದ ಹೈದ್ರಾಬಾದ್-ಕರ್ನಾಟಕ ಏನಾಗಿದೆ, ಅದು ಎಲ್ಲಾ ಹಾಳಾಗಿ ಹೋಗಿದೆ. ನಮಗೆ ಅಧಿಕಾರವನ್ನು ಕೊಡಿ ನಾವು

ಮಾಡುತ್ತೇವೆ, ಕೊಟ್ಟಿದ್ದರೆ, ಎಲ್ಲಿ ಕೊಟ್ಟಿದ್ದೀರಿ, ಅದರ ವಿವರವನ್ನು ಕೊಡಿ. ಹೈದ್ರಾಬಾದ್-ಕರ್ನಾಟಕಕ್ಕೆ ವಿಶೇಷವಾದಂಥ ಅನುದಾನ ಎಲ್ಲಿ ಇಟ್ಟಿದ್ದೀರಿ. ಎಷ್ಟು ಇಟ್ಟಿದ್ದೀರಿ. ಎಷ್ಟು ಕೋಟಿ ಹಣ ಇಟ್ಟಿದ್ದೀರಿ. ಒಂದು ಕೆಲಸ ಮಾಡಿದ್ದೀರಿ, ನಾವು ಆ ಒಂದು ವಿಮಾನ ನಿಲ್ದಾಣಕ್ಕೆ ಎಲ್ಲಾ acquire ಮಾಡಿ ಇಟ್ಟಿದ್ದು, ಅದಕ್ಕೆ ನೀವು ಹೋಗಿ foundation ಹಾಕಿ ಬಂದಿದ್ದೀರಿ ಅದಕ್ಕೆ ದುಡ್ಡು ಬಿಡುಗಡೆಯಾಗಬೇಕು ಅಲ್ಲವೇ? ಕೆಲಸವು ಆಗಿಲ್ಲ, ದುಡ್ಡು ಬಿಡುಗಡೆಯಾಗಿಲ್ಲ, contractor ಇಲ್ಲ ಏನು ಮಾಡಿದ್ದೀರೋ ಗೊತ್ತಿಲ್ಲ. ಏಕೆಂದರೆ ನಿಮ್ಮದು ಆದ ಮೇಲೆಯೇ ನಮ್ಮದು ಮಾಡಬೇಕಲ್ಲ. ಶಿವಮೊಗ್ಗದು ಆದ ನಂತರ ಅದರ ನಂಬರ್ ಹತ್ತುತ್ತದೆ. ಅದಕ್ಕಿಂತ ಮುಂದೆಯಾದರೆ ಅದು ತಪ್ಪಾಗುತ್ತದೆ. ಅದು ಹೋಗಲಿ, ಹೈದ್ರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡಿಗೆ ವಿಶೇಷವಾದಂಥ ಹಣ ಇಲ್ಲ. ಕನಿಷ್ಠಪಕ್ಷ ಅದಕ್ಕೆ ಕೊಟ್ಟಿಲ್ಲ. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಅನೇಕ ಜಿಲ್ಲೆಗಳು ಏನಿವೆ. ಡಾ|| ನಂಜುಂಡಪ್ಪನವರ ವರದಿಯ ಪ್ರಕಾರ ಆ ಜಿಲ್ಲೆಗಳಿಗೆ ಹೋಲಿಸಿದರೆ, ಹೈದ್ರಾಬಾದ್ - ಕರ್ನಾಟಕಕ್ಕೆ ಹೋಲಿಸಿದರೆ, still there is vast difference. ವ್ಯತ್ಯಾಸ ಇದೆ. ಇಲ್ಲಾ ಎಂದು ಹೇಳುವುದಿಲ್ಲ. ಅದಕ್ಕೆ ಅನೇಕ historical ಕಾರಣಗಳು ಇವೆ. ಶಿಕ್ಷಣದಲ್ಲಿ ಹಿಂದುಳಿದಿರಬಹುದು, ಆರೋಗ್ಯದಿಂದ ಹಿಂದುಳಿದಿರಬಹುದು, ನೀರಾವರಿಯಿಂದ ಇದೆ, ಅದಕ್ಕಾಗಿ ಅದನ್ನು ಸರಿಪಡಿಸಬೇಕು ಎನ್ನುವ ದೃಷ್ಟಿಯಿಂದ ನಾವು ಯಾವಾಗಲೂ ಕೂಡ ಹೈದ್ರಾಬಾದ್-ಕರ್ನಾಟಕಕ್ಕೆ ವಿಶೇಷವಾದಂಥ ಅನುದಾನವನ್ನು ಕೊಡಿ ಎಂದು ಕೇಳಿರುತ್ತೇವೆ. ನೀವು ಹೇಳಿದಿರಿ, ಆದರೆ ಕೊಡಲಿಲ್ಲ. ಅದರ ಬಗ್ಗೆ specific ಆಗಿ ಇಡಬೇಕು. ಅದನ್ನು ತೋರಿಸಲೇ ಇಲ್ಲ. ಅದೇ ರೀತಿ ನಮ್ಮ ಬಯಲು ಸೀಮೆಯವರನ್ನು ಕರೆದು ಒಂದು meeting ಮಾಡಿ ಹೇಳಿದರು. ಒಬ್ಬೊಬ್ಬ ಬಯಲುಸೀಮೆ ಶಾಸಕರಿಗೆ hardly 5 ಲಕ್ಷ ರೂಪಾಯಿ ಬರುತ್ತದೆ. ಒಬ್ಬ ಗ್ರಾಮ ಪಂಚಾಯತಿ ಸದಸ್ಯನಿಗೂ ಕೂಡ ಬಂದಷ್ಟು, ಈ Rural Employment Guarantee Scheme ಬಂದ ಮೇಲೆ ಆ ಗ್ರಾಮ ಪಂಚಾಯತಿಯ position ಚೆನ್ನಾಗಿದೆ. Minimum 2-3 ಕೋಟಿ ರೂ.ಗಳನ್ನು ಖರ್ಚು ಮಾಡಬಹುದು. ಆದರೆ ಆ ಶಾಸಕರಿಗೆ ಅಷ್ಟನ್ನು ಖರ್ಚು ಮಾಡುವುದಕ್ಕೆ ಇಲ್ಲ. ಆ ಬಯಲು ಸೀಮೆಗೆ 5 ಲಕ್ಷ ರೂ.ಗಳು ಇಲ್ಲ. ಅದೇ ರೀತಿಯಾಗಿ ಮಲೆನಾಡು ಅಭಿವೃದ್ಧಿ ಮಂಡಲಿ ಅದನ್ನು ಕೇಳಬೇಡಿ ಅದೇ ಪದ್ಧತಿ. ಅದಕ್ಕಾಗಿ ಹೋದ ಸಲ 40 ಕೋಟಿ ರೂ.ಗಳಲ್ಲಿ 20 ಕೋಟಿ ರೂ.ಗಳು ಬಿಡುಗಡೆಯಾಯಿತು. ಇವತ್ತು ಆ ಹಣ ಕೂಡ ಎಷ್ಟರಮಟ್ಟಿಗೆ ಬಿಡುಗಡೆ ಮಾಡುತ್ತಾರೋ ಗೊತ್ತಿಲ್ಲ. ಹೋದ ಸಲ 100 ಕೋಟಿ ಇತ್ತು ಅಷ್ಟನ್ನಾದರೂ ಮಾಡಬೇಕಾಗಿತ್ತು.

ಶ್ರೀ ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, ಈ ವರ್ಷ ಶಾಸಕರ ನಿಧಿ ಇಲ್ಲ. ಬಜೆಟ್‌ನಲ್ಲಿ ತೋರಿಸಿಲ್ಲದಿರುವುದರಿಂದ ಅದರ ಬಗ್ಗೆ ಹೇಳಬೇಕು. ಬಜೆಟ್‌ನಲ್ಲಿ ಅದರ ಬಗ್ಗೆ ಕಾಣುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದರ ಬಗ್ಗೆಯೂ ಹೇಳಬೇಕು. ಬಹುಶಃ ಯಡಿಯೂರಪ್ಪನವರ ಮನಸ್ಸಿನಲ್ಲಿ ಬಂದಿರಬಹುದು. ಈ ಸದನದಲ್ಲಿ ವಿರೋಧ ಪಕ್ಷದಲ್ಲಿ ಮತ್ತು ರೂಲಿಂಗ್ ಪಾರ್ಟಿಯಲ್ಲಿ ಸಮ ಸಮ ಇದ್ದಾರೆ. ಇದಕ್ಕೇನಾದರೂ 400 ಕೋಟಿ ರೂ.ಗಳ ಹಣ ಇಟ್ಟರೆ 200 ಕೋಟಿ ರೂ.ಗಳು

ವಿರೋಧ ಪಕ್ಷದವರಿಗೆ ಹೋಗಿ, ನಮಗೆ 200 ಕೋಟಿ ರೂ.ಗಳು ಉಳಿಯುತ್ತದೆ, ಅದರಿಂದ ಏನಾಗುತ್ತದೆ. ಅದಕ್ಕಾಗಿ discretionary fund ಇಟ್ಟುಕೊಂಡರೆ ಎಲ್ಲಾ MLA ಗಳು ಓಡೋಡಿ ಬರುತ್ತಾರೆ, ಸಿಕ್ಕವರಿಗೆ ಇಷ್ಟು ಎಂದು ಬರೆದು ಕೊಡುವುದಕ್ಕಾಗುತ್ತದೆ. ಅದಕ್ಕೆ ಅವರು ಇವತ್ತು ಏನು ಮಾಡಿದ್ದಾರೆಂದರೆ, ಬಹುಶಃ discretion ಇಟ್ಟುಕೊಂಡು ಹಣ ಕೊಡಬೇಕೆಂದು ಮಾಡಿದ್ದಾರೋ ಏನೋ ಗೊತ್ತಿಲ್ಲ. ಇಲ್ಲಾ ಅಂದರೆ, each MLA constitutency development ಗೆ ಇಡೀ ರಾಜ್ಯದಲ್ಲಿಯೇ ಇಡೀ ದೇಶದಲ್ಲಿಯೇ ಎಲ್ಲಾ ಕಡೆ ಶಾಸಕರ ಮತ ಕ್ಷೇತ್ರದ ಅಭಿವೃದ್ಧಿಗಾಗಿ.....

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಏನು ಹೇಳಿದಿರಲ್ಲಾ ಅದಕ್ಕೆ ನಾನು ಬೆಂಬಲವನ್ನು ಕೊಡುತ್ತೇನೆ. ಶಾಸಕರ ನಿಧಿ ಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಭಿವೃದ್ಧಿಗಾಗಿ ಪಾರ್ಲಿಮೆಂಟಿಗೆ, ರಾಜ್ಯಸಭಾಕ್ಕೆ ಹಣ ಇದೆ. ಇಡೀ ದೇಶದಲ್ಲಿಯೇ ಇರುವಾಗ ಇಲ್ಲಿ ಏಕೆ ಇಲ್ಲ. ಇದ್ದದ್ದನ್ನು ಏಕೆ ಕಟ್ ಮಾಡಿದಿರಿ. ಅಂದರೆ ಎಲ್ಲರೂ ನಿಮ್ಮಲ್ಲಿ ಬರಬೇಕು ಏನು? ನನಗೆ ಶರಣಾದವರಿಗೆ ಮರಣ ಇಲ್ಲವೆಂದು ಹೇಳಿ, ಅದಕ್ಕಾಗಿ ನೀವು ಏನು preparation ಮಾಡುತ್ತಿದ್ದೀರಾ? ಸ್ವಾಮಿ ಅಧಿಕಾರ ಶಾಶ್ವತವಾಗಿ ಇರುವುದಿಲ್ಲ. ಯಾವ ಗಳಿಗೆಯಲ್ಲಿ ಏನಾಗುತ್ತದೋ ಗೊತ್ತಿಲ್ಲ. ಇರುವವರೆಗೆ ಮನುಷ್ಯ ಪ್ರಯತ್ನ ಮಾಡುತ್ತಾನೆ. ಆದರೆ ಆ ಪ್ರಯತ್ನ ಒಳ್ಳೆಯದಕ್ಕಾಗಿ ಆಗಬೇಕು. ನಾವು ಒಳ್ಳೆಯದನ್ನು ಮಾಡಿದರೆ ಖಂಡಿತವಾಗಿ ಒಳ್ಳೆಯದಾಗುತ್ತದೆ. ನಾವು ಕೆಟ್ಟದ್ದನ್ನು ಮಾಡಿದರೆ ಕೆಟ್ಟದ್ದು ಆಗಲೇಬೇಕು. ನೀವು ಏನಾದರೂ ಬೇವಿನ ಬೀಜವನ್ನು ಬಿತ್ತಿ ಮಾವಿನ ಹಣ್ಣು ಕೇಳಿದರೆ ಸಿಗುವುದಿಲ್ಲ ಮಾನ್ಯ ಯಡಿಯೂರಪ್ಪನವರೆ. ನೀವು ನೂರು ಮಠಕ್ಕೆ ನೂರು ಮಂದಿರಕ್ಕೆ ಹೋಗಿ. ಏನು ಬೀಜ ಬಿತ್ತುತ್ತೀರೋ, ಕಹಿ ಬೀಜ ಬಿತ್ತಿದರೆ ಕಹಿ ಫಲವೇ ಸಿಗುವುದು. ಒಳ್ಳೆಯ ಬೀಜ ಬಿತ್ತಿದರೆ ಒಳ್ಳೆಯದೇ ಸಿಗುತ್ತದೆ. ಅದಕ್ಕಾಗಿ ಒಳ್ಳೆಯದನ್ನು ಮಾಡುವುದನ್ನು ಕಲಿಯಿರಿ. ಏಕೆ ನಿಮ್ಮಲ್ಲಿ discretion ಇಟ್ಟುಕೊಂಡು ಆ MLA ಗಳಿಗೆ ಗೋಳಾಡಿಸುತ್ತೀರಿ? ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳುವುದಕ್ಕೆ ಮಾಡುತ್ತೀರಾ? ಕೆಲವು ಜನ ಎಲ್ಲಾ ಪಾರ್ಟಿಯಲ್ಲಿಯೂ ಇರುತ್ತಾರೆ. ಪಕ್ಷ ತತ್ವ ನೀತಿ ಮೇಲೆ ಬರತಕ್ಕಂಥವರು ಇರುತ್ತಾರೆ, ಕೆಲವರು ಅವಕಾಶವಾದಿಗಳು ಇರುತ್ತಾರೆ. ಅದನ್ನು ನೀವು ಲೆಕ್ಕ ಹಾಕಬಾರದು. ಅದರಿಂದ ಏನಾಗಿದೆ ಎಂದರೆ, ಹೇಗಾದರೂ ಮಾಡಿ ಅಧಿಕಾರವನ್ನು ಉಳಿಸಿಕೊಳ್ಳಬೇಕು. ಅದಕ್ಕಾಗಿ ಕೆಲವು ಜನರಿಗೆ ಬನ್ನಿ, ಬಂದ ಕೂಡಲೇ ಮಂತ್ರಿಗಿರಿ, ಯಾವ ದೇಶದಲ್ಲಿಯಾದರೂ ಮಾಡಿದ್ದಾರಾ? ಯಾವ ರಾಜ್ಯದಲ್ಲಿಯಾದರೂ ಮಾಡಿದ್ದಾರಾ? ನೀವು ಇಲ್ಲಿ ತತ್ವ ಹೇಳಿದಿರಿ, ನೀತಿ ಹೇಳುತ್ತೀರಿ. ಎಲ್ಲಾ ಅನೈತಿಕತೆಯಿಂದ ಕೂಡಿದ ಕೆಲಸವನ್ನು ಮಾಡಿ ಅಧಿಕಾರ ಉಳಿಸಿಕೊಂಡಿರುತ್ತೀರಿ. ಮತ್ತೆ ಮೇಲಿಂದ ಹೇಳುವುದು, ನಮ್ಮದು ಬಹಳ ಶಿಸ್ತಿನ ಪಕ್ಷ, ಬಹಳ disciplined ಪಕ್ಷ ಮತ್ತು ನಾವು ಯಾವಾಗಲೂ ಕೂಡ ಶಿಸ್ತಿನಿಂದ ಹೋಗುತ್ತೇವೆ ಎನ್ನುವಂಥದ್ದು. ಶಿಸ್ತನಿಂದ ನಡೆದು ಅಧಿಕಾರ ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಿ ಎಂದರೆ ಅದಕ್ಕೆ ಜನ ಏನು ಮೆಚ್ಚುವುದಿಲ್ಲ. ತಕ್ಕ ಪಾಠವನ್ನು ಕಲಿಸುತ್ತಾರೆ. ಮತ್ತೆ ಇವತ್ತು ಇಲ್ಲಿ ಯಾವ ತತ್ವ ನೀತಿ ಮೇಲೆ ಇಲ್ಲಿ ಶಾಸಕರಾಗಿ ಮತವನ್ನು ಜನರಿಂದ ಗಳಿಸಿ ಯಾವ ಪಕ್ಷದ ಗುರುತಿನ ಮೇಲೆ ಬಂದಿದ್ದಾರೋ, ಇವತ್ತು ಅಧಿಕಾರದ

ಆಸೆಗಾಗಿ, ಹಣದ ಆಸೆಗಾಗಿ ತೊರೆದು ಹೋಗುತ್ತಿದ್ದಾರೋ, ನಿಜವಾಗಲೂ ಅವರೆಲ್ಲರೂ ಕೂಡ ಹೇಡಿಗಳು ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಈ ಮಾತು ಇವತ್ತು ನನಗೆ ಆಗಬಹುದು. ನಾಳೆ ಅವರಿಗೆ ಆಗಬಹುದು. ಆದರೆ ಇದು ನಡೆಯತಕ್ಕಂಥದ್ದು ಸರಿಯಲ್ಲ. ಇದೇ ರೀತಿಯಾಗಿ ನಡೆದರೆ ಖಂಡಿತವಾಗಿ ಈ ರಾಜ್ಯದಲ್ಲಿ ಪ್ರಜಾಪ್ರಭುತ್ವ ಉಳಿಯುವುದಿಲ್ಲ. ಪ್ರಜಾಪ್ರಭುತ್ವ ನಶಿಸಿ ಹೋಗುತ್ತದೆ. ಸಾಮಾನ್ಯ ಜನರು ಎಲೆಕ್ಟ್ ಆಗುವುದಕ್ಕಾಗವುದಿಲ್ಲವೆನ್ನತಕ್ಕಂಥ ಮಾತು ನಾನು ಹೇಳುತ್ತೇನೆ. ಇವತ್ತು ಅನೇಕ ಜನ ರೈತ ಕುಟುಂಬದಿಂದ ಬಂದಿದ್ದಾರೆ. ಬಡತನದಿಂದ ಬಂದಿದ್ದಾರೆ, ಬಡವರ್ಗದಿಂದ ಬಂದಿದ್ದಾರೆ ಅವರೆಲ್ಲರೂ ಕೂಡ ಆಸ್ತಿವಂತರು ಅಲ್ಲ, ಹಣವಂತರು ಅಲ್ಲ. ಒಂದು ಚೂರು ಸಮಾಜ ಸೇವೆಯನ್ನು ಮಾಡಿ ಅಲ್ಲಿ ಇಲ್ಲಿ ಜನಸಂಪರ್ಕವನ್ನು ಇಟ್ಟುಕೊಂಡು ಜನರ ಸೇವೆಯನ್ನು ಮಾಡಿಕೊಂಡು ಆರಿಸಿ ಬಂದಂಥ ಜನ ಅನೇಕ ಜನರು ಇದ್ದಾರೆ. ಏನೋ ಕೆಲವು ಜನರಿಗೋಸ್ಕರ ಕೆಲವು ಜನರ ಮಾತು ಕೇಳಿಕೊಂಡು ಕೆಲವರ ಕಪಿಮುಷ್ಟಿಯಲ್ಲಿದ್ದು ನೀವು ಈ ರಾಜ್ಯವನ್ನು ನಡೆಸಿಕೊಂಡು ಹೋಗುತ್ತೇವೆ, ಇಚ್ಛೆ ಬಂದಂತೆ ಹಣವನ್ನು ಹಂಚುತ್ತೇವೆ, ಇಚ್ಛೆ ಬಂದಂತೆ ಬಜೆಟ್ ಮಾಡುತ್ತೇವೆಂದರೆ, ಖಂಡಿತವಾಗಿ ಜನ ಮೆಚ್ಚುವುದಿಲ್ಲ. ಜನ ನಿಮ್ಮನ್ನು ಮೆಚ್ಚಬೇಕಾದರೆ, ಜನಪರ ಕೆಲಸವನ್ನು ಮಾಡಿ. ಇವತ್ತು ಜನರಿಗೆ ಅನುಕೂಲವಾಗತಕ್ಕಂಥದ್ದು ನಾನು ಹೇಳಿದೆ, ಅದು ಪವರ್ ಇರಬಹುದು, ಇರಿಗೇಶನ್ ಇರಬಹುದು, ಕುಡಿಯುವ ನೀರು ಇರಬಹುದು, ಅಗ್ರಿಕಲ್ಚರ್ ಇರಬಹುದು, ಇವೆಲ್ಲಕ್ಕೂ ಹೆಚ್ಚು ಒತ್ತನ್ನು ಕೊಟ್ಟು ಕೆಲಸವನ್ನು ಮಾಡಬೇಕು ಹೊರತಾಗಿ ನಾನು ಮಾತು ಕೊಟ್ಟಿದ್ದೇನೆ, ಸೈಕಲ್ ಕೊಡುತ್ತೇನೆ, ಮಾತು ಕೊಟ್ಟಿದ್ದೇನೆ ಇನ್ನೊಂದಕ್ಕೆ ಒಂದು ಕೋಟಿ ರೂ.ಗಳನ್ನು ಕೊಡುತ್ತೇನೆಂದು ಆದರೆ, ಇವೆಲ್ಲಾ ಸಮಸ್ಯೆ ಬರುತ್ತವೆ. ಉತ್ಪತ್ತಿ ಹೆಚ್ಚಿಗೆ ಆದಂತೆ ನೀವು ಅದನ್ನೆ ಮಾಡಿಕೊಂಡು ಹೋಗಿ ಇಲ್ಲಿ ಹಣವೇ ಇಲ್ಲ. ಜೇಬಿನಲ್ಲಿ ದುಡ್ಡು ಇಲ್ಲ ಸಾಲ ಮಾಡಿಕೊಂಡು ನೀವು ಇವತ್ತು ಹೋಗುತ್ತಿದ್ದೀರಿ, ಯಾರು ಮೆಚ್ಚುತ್ತಾರೆ? ಅದಕ್ಕಾಗಿ ನನ್ನ ಕಳಕಳಿಯನ್ನು ತಮ್ಮ ಮುಖಾಂತರ ಈ ಸದನದ ಎಲ್ಲಾ ಶಾಸಕರಿಗೆ ವ್ಯಕ್ತ ಮಾಡುತ್ತೇನೆ. ದಯವಿಟ್ಟು ಏನು ಘನತೆ, ಗೌರವ ಈ ಒಂದು ಕರ್ನಾಟಕ ರಾಜ್ಯದ ಸದನಕ್ಕೆ ಇದೆ, ವಿಧಾನಸಭೆಗೆ ಇದೆ ಅದನ್ನು ನಾವೆಲ್ಲರೂ ಕೂಡ ಉಳಿಸಿಕೊಂಡು ಹೋಗೋಣ, ಆ ಹಿಂದಿನ ಪರಂಪರೆಯನ್ನು ಬೆಳಿಸಿಕೊಂಡು ಹೋಗೋಣ. ಅದನ್ನು ಬಿಟ್ಟು ನಾವು ಒಬ್ಬರ ಮೇಲೆ ಒಬ್ಬರು ಕೆಸರನ್ನು ಎರಚುವುದು, ಒಬ್ಬರಿಗೊಬ್ಬರು ಆಸೆಯನ್ನು ತೋರಿಸುವಂತಹದ್ದು ಮತ್ತು ನಾವು ಏನು ಜನರಿಗೆ ಇವತ್ತಿನ ದಿವಸ ಆಶ್ವಾಸನೆಯನ್ನು ಕೊಟ್ಟಿದ್ದೇವೆ ಅದನ್ನು ಮರೆತುಹೋಗುವಂತಹದ್ದು, ಅಲ್ಲಿ ಬೆಳವಣಿಗೆಯನ್ನು ಮಾಡದೆ ಇರುವಂತಹದ್ದು, ಪಕ್ಷಪಾತವನ್ನು ಮಾಡುವುದು ಇದೆಯಲ್ಲಾ, ಇದು ಆಗಬಾರದು. ನಾನು ಮತ್ತೊಮ್ಮೆ ಮಾನ್ಯ ಯಡಿಯೂರಪ್ಪನವರಲ್ಲಿ ಕೇಳಿಕೊಳ್ಳುತ್ತೇನೆ. ಇವರುಗಳು ವಿರೋಧಪಕ್ಷದವರು, ಇವರು ರೂಲಿಂಗ್ ಪಾರ್ಟಿಯವರು, ರೂಲಿಂಗ್ ಪಾರ್ಟಿಯಲ್ಲಿದ್ದರೆ ಕೆಲಸ ಆಗುತ್ತದೆ ಇಲ್ಲದಿದ್ದರೆ ಇಲ್ಲ ಎಂಬ ಬಾವನೆಯನ್ನು ನೀವು ಮೂಡಿಸಿದರೆ ಖಂಡಿತವಾಗಿಯೂ ನಿಮಗೆ ಒಳ್ಳೆಯದಾಗುವುದಿಲ್ಲ ಎಂಬ ಮಾತನ್ನು ಹೆಳುತ್ತೇನೆ. ಏಕೆಂದರೆ ಟಿ.ವಿ.ಯಲ್ಲಿ ನಾನು ಅನೇಕ ಜನರನ್ನು ನೋಡುತ್ತಿದ್ದೇನೆ. ಕೆಲವು ಜನರು ರಾಜೀನಾಮೆಯನ್ನು ಕೊಡುವವರು ಏನು ಹೇಳಿದ್ದಾರೆಂದರೆ, ನಮ್ಮ

ಮತಕ್ಷೇತ್ರದ ಅಭಿವೃದ್ಧಿಯಾಗಬೇಕಾಗಿದ್ದರೆ, 40 ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡುತ್ತೇವೆಂದು ಅವರು ನಮಗೆ ಹೇಳಿದ್ದಾರೆ, ಅದಕ್ಕೆ ನಾವು ಹೋಗುತ್ತೇವೆ. ನನಗೆ ಒಂದು ರಸ್ತೆಯನ್ನು ಹಾಗೂ ಕೆರೆಯನ್ನು ಮಾಡಿ ಕೊಡುತ್ತೇನೆಂದು ಹೇಳಿದ್ದಾರೆಂದು ಇನ್ನೊಬ್ಬರು ಹೇಳುತ್ತಾರೆ. ಅಂದರೆ ಇದರ ಅರ್ಥವೇನು? ಅವರಿಗೆ ಮಾತ್ರ ಕೆರೆಯ ಕೆಲಸಗಳು, ಅವರಿಗೆ ಮಾತ್ರ ರಸ್ತೆಯ ಕೆಲಸಗಳು, ಅವರಿಗೆ ಮಾತ್ರ ಅಭಿವೃದ್ಧಿಯ ಕೆಲಸಗಳು, ಬಾಕಿಯವರಿಗೆ ಏತಕ್ಕಾಗಿ ಬಿಡುತ್ತೀರಿ? ಅವರಿಗೆ ನೀವು ಹೊಡೆದುಬಿಡಿ, ಗುಂಡು ಹಾಕಿ, ಹಿಟ್ಲರ್ ಹಾಕಿದನಲ್ಲಾ, ಆ ರೀತಿಯಾಗಿ ನಿಮ್ಮಲ್ಲಿ ಹಣವಿದೆ, ಶಕ್ತಿ ಇದೆ, ಮನುಷ್ಯ ಬಲವಿದೆ, ಮಾನಸಿಕ ಬಲವಿದೆ, ಆರ್ಥಿಕ ಬಲವಿದೆ, ಮಾಡಿ, ಒಂದು ಸಾರಿ ಅದೂ ಆಗಲಿ, ಇಂತಹವರಿಗೆ ತಡೆ ಮಾಡಿ, ನೀವೇ ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರೆ ಈ ಭಾವನೆಯೂ ಹೋಯಿತೆಂದರೆ, ಪ್ರಜಾಪ್ರಭುತ್ವವು ಉಳಿಯುವುದಿಲ್ಲ. ಇವತ್ತು ಆಕ್ಸಿಡೆಂಟಲ್ಲಿ ತಾವು ಬಂದಿದ್ದೀರಿ, ಇದು ಏನು ಬಯಸಿಕೊಂಡು ಬಂದಿರುವುದಿಲ್ಲ. ನಿಮ್ಮ ಮುಖಗಳನ್ನು ನೋಡಿ ಅನೇಕ ಜನರು ಸೋತಂತಹ ಸಂಖ್ಯೆಗಳನ್ನು ನೋಡಿ ಜನರು ಇನ್ನೂ ನಿಮಗೆ ಸಂಪೂರ್ಣವಾಗಿ ಬೆಂಬಲವನ್ನು ಕೊಟ್ಟಿಲ್ಲ ಎನ್ನುವುದು ನೀವು ಕಣ್ಣುತೆರೆದು ನೋಡಿದರೆ ಗೊತ್ತಾಗುತ್ತದೆ. ನಿಮ್ಮ ಹಣದ ಬಲದ ಮೇಲೆ ನಿಮ್ಮ ಅಧಿಕಾರದ ಬಲದ ಮೇಲೆ ನೀವು ಇದನ್ನು ಮಾಡಿಕೊಂಡಿರಬಹುದು, ಆದರೆ ಇದು ಬಹು ಕಾಲ ಉಳಿಯುವುದಿಲ್ಲ. ನೀವು ಇವತ್ತು ಏನು ಜನಪರ ಬಜೆಟ್‌ನ್ನು ಕೊಡುತ್ತೇವೆಂದು ಹೇಳಿ, ಅದನ್ನು ನೀವು ಕೊಡಲಿಲ್ಲ. ನಿಮ್ಮ ಪ್ರಣಾಳಿಕೆಯಲ್ಲಿಯೂ ಕೂಡ ಪೇಜ್-1 ರಿಂದ ಹಿಡಿದು ನೀವು ಏನು ಮೊದಲನೆಯ ಮಾತನ್ನು ಹೇಳಿದ್ದೀರಿ, ಅದನ್ನು ಕೂಡ ತಾವು ಅನುಷ್ಠಾನದಲ್ಲಿ ತರುವುದಕ್ಕಾಗಲಿಲ್ಲ. ಬಿಪಿಎಲ್ ಕಾರ್ಡ್ ಬಗ್ಗೆ ಇರಬಹುದು, unemployed graduates ಗಳಿಗೆ ಭತ್ಯೆಗಳನ್ನು ಕೊಡುವುದು ಇರಬಹುದು, ಸ್ತ್ರೀ ಶಕ್ತಿ ಗುಂಪುಗಳಿಗೆ enhancement grant ನ್ನು ಸಂಪೂರ್ಣವಾಗಿ ಮಾಡುವಂತಹದ್ದು ಇರಬಹುದು, ಅದೇ ರೀತಿಯಾಗಿ ಇರಿಗೇಷನ್‌ಗೆ ಹೆಚ್ಚಿನ ಹಣವನ್ನು ಕೊಡುವಂತಹದ್ದು ಇರಬಹುದು, agriculture ಗೆ ಇರಬಹುದು, power ಗೆ ಇರಬಹುದು, ಇವೆಲ್ಲಕ್ಕೂ ಕೂಡ ನೀವು ಹಣ ಇಡದೆ ಇರುವ ಕಾರಣ, ನೀವು ಸಂಪೂರ್ಣವಾಗಿ ಸಹಾಯವನ್ನು ಮಾಡದೆ ಇರುವ ಕಾರಣಕ್ಕಾಗಿ ನಾನು ಅನಿವಾರ್ಯವಾಗಿ ಇದಕ್ಕೆ ವಿರೋಧ ಮಾಡುತ್ತೇನೆಂಬ ಮಾತನ್ನು ಹೇಳಬೇಕಾಗಿದೆ. ಖಂಡಿತವಾಗಿ ಮುಂದೆ ಬರುವಂತಹ ದಿನಗಳಲ್ಲಿಯಾದರೂ ಕೂಡ ಇದನ್ನು ತಾವು ಅರ್ಥ ಮಾಡಿಕೊಂಡು ಅವರು ರಾಜ್ಯದ ಜನತೆಗೆ ಸಹಕರಿಸುತ್ತಾರೆಂದು ಮತ್ತು ವಿಶೇಷವಾಗಿ ಈ ಶಾಸಕರ ನಿಧಿ ಏನು ಇದನ್ನು ಮೊಟಕು ಗೊಳಿಸಿದ್ದೀರಿ, ತಕ್ಷಣ ಹೆಚ್ಚಿನ ಪ್ರಮಾಣದಲ್ಲಿ restore ಮಾಡುವುದು ಒಂದೇ ಅಲ್ಲ, ಭೀಕರವಾದ ಬರಗಾಲ ಇವತ್ತು ಏನು ಬಂದಿದೆ. ಆ ಭೀಕರವಾದಂತಹ ಬರಗಾಲಕ್ಕೆ war footing ನಲ್ಲಿ ಕೆಲಸ ಗಳು ನಡೆಯಬೇಕು. Natural calamity ಯಲ್ಲಿರುವಂತಹ ಫಂಡನ್ನು ರಿಲೀಸ್ ಮಾಡಬೇಕು. ಎಲ್ಲೆಲ್ಲಿ ಇವತ್ತಿನ ದಿವಸ fodder bank ತೆಗೆಯಬೇಕು, ಅದನ್ನು ತಾವು ತೆಗೆಯಬೇಕು. ನಿಮ್ಮ ಎಲ್ಲಾ ಸೆಕ್ರೆಟರಿಗಳಿಗೆ ಈಗಾಗಲೇ ನಾನು ಪತ್ರವನ್ನು ಬರೆದು ತಮಗೆ ಹೇಳಿದ್ದೇನೆ. ಪ್ರತಿ ಜಿಲ್ಲೆಯನ್ನು ನೋಡಿಕೊಳ್ಳುವಂತಹ ಉಸ್ತುವಾರಿ ಸೆಕ್ರೆಟರಿಗಳು ಏನು ಇದ್ದಾರೆ, ವಾರದಲ್ಲಿ ಅವರುಗಳು 2-3 ದಿವಸಗಳು ಅಲ್ಲಿಯೇ ಇದ್ದು ಕುಡಿಯುವ ನೀರಿನದು, ಮೇವಿನದು, ಕೆಲಸದ್ದು ಮತ್ತೆ ಮುಂದೆ

ಬರುವಂತಹ ಬಿತ್ತನೆಯ ಬಗ್ಗೆ ಚಿಂತನೆಯನ್ನು ಮಾಡಿ ಕೆಲಸವನ್ನು ಮಾಡಬೇಕು. ಅದೇ ರೀತಿಯಾಗಿ ತಾವು ಯಾರಿಗೆ in charge minister ಮಾಡಿದ್ದೀರಿ ಅವರಿಗೂ ಕೂಡ ಅಲ್ಲಿ ಕೂರಿಸಿ ಪ್ರತಿ ಇಲಾಖೆಯವರನ್ನು ಒಂದು ಕಡೆ ಸೇರಿಸಿ, ಪ್ರತಿ ಇಲಾಖೆಯಲ್ಲಿ ಏನು ಹಣವಿದೆ, ಯಾರ್ಯಾರು ಏನೇನು ಕೆಲಸಗಳನ್ನು ತೆಗೆದುಕೊಳ್ಳಬಹುದು, ಆ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಅವರು ಒಂದು war footing ನಲ್ಲಿ ಕೆಲಸವನ್ನು ನಡೆಸಬೇಕು. ಇನ್ನೊಂದು ವಿಶೇಷವಾಗಿ ತಾವು task force ನ್ನು ಮಾಡಬೇಕು. ಇಲ್ಲಿ ಕ್ಯಾಬಿನೆಟ್ ಲೆವೆಲ್‌ನಲ್ಲಿ ಒಂದು task force, ಜಿಲ್ಲಾ ಮಟ್ಟದಲ್ಲಿ task force ಮತ್ತು ಪ್ರತಿ constituencyಗೆ ಏಕೆಂದರೆ ಈಗ ಮತಕ್ಷೇತ್ರಗಳು ಬಹಳಷ್ಟು ವಿಂಗಡನೆಯಾಗಿ ವ್ಯತ್ಯಾಸಗಳು ಆಗಿದೆ. ಅದನ್ನು ತಾವು taluk-wise ಮಾಡುವುದಕ್ಕಿಂತಲೂ ಮತಕ್ಷೇತ್ರ ವೈಸ್ ನೀವು task force ಮಾಡಿ ಈ ಬರಗಾಲ ಕಾಮಗಾರಿಯನ್ನು ಪ್ರಾರಂಭ ಮಾಡುವಂತಹದ್ದು, ನೀರಿನ ವ್ಯವಸ್ಥೆಯನ್ನು ಮಾಡುವಂತಹದ್ದು, ಇವೆಲ್ಲವನ್ನು ತಾವು ಮಾಡಬೇಕೆಂದು ನನ್ನ ಸಲಹೆಯಾಗಿದೆ. ಇದರ ಜೊತೆಗೆ ಈ ಬಜೆಟ್ ಸಂಪೂರ್ಣವಾಗಿ ಜನಪರವಾಗಿಲ್ಲವೆಂಬ ಮಾತನ್ನು ಹೇಳಿ ಇದಕ್ಕೆ ವಿರೋಧಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಇವತ್ತು ಜಿಡಿಎಸ್ ಪಕ್ಷದ ವತಿಯಿಂದ ಯಾರು ಮಾತನಾಡುತ್ತಾರೆ? ಕಾಂಗ್ರೆಸ್ ಪಾರ್ಟಿಯಿಂದ ಇವತ್ತು ಮತ್ಯಾರು ಮಾತನಾಡುವವರು ಇದ್ದಾರೆಯೇ? ಮಾನ್ಯ ಶ್ರೀಕಾಂತ್ ಕುಲಕರ್ಣಿಯವರೆ ತಾವು ಮಾತನಾಡಿ.

ಶ್ರೀ ಶ್ರೀಕಾಂತ್ ಕುಲಕರ್ಣಿ : (ಜಮಖಂಡಿ) ಸನ್ಮಾನ್ಯ ಅಧ್ಯಕ್ಷರೆ, 2008-09 ನೇ ಸಾಲಿನ ಬಜೆಟ್‌ನ್ನು ಸನ್ಮಾನ್ಯ ಯಡಿಯೂರಪ್ಪನವರು ಮಂಡಿಸಿದ್ದಾರೆ. ಅದು ಅತ್ಯಂತ ಸ್ವಾಗತಾರ್ಹವಾದುದು. ಕರ್ನಾಟಕ ರಾಜ್ಯದ ರೈತರ ಹಿತವನ್ನು ಕಾಪಾಡುವಂತಹ ಬಜೆಟ್ ಎಂದು ಹೇಳಿ ಇವತ್ತು ನಾನು ಸ್ವಾಗತ ಮಾಡುವುದಕದ್ಕೆ ಬಯಸುತ್ತೇನೆ. ಕೃಷಿರಂಗದಲ್ಲಿ ವಿಶೇಷವಾದಂತಹ ಕಾರ್ಯಕ್ರಮವನ್ನು ಅವರು ಘೋಷಣೆ ಮಾಡಿದ್ದಾರೆ. ಅದರಲ್ಲಿಯೂ ವಿಶೇಷವಾಗಿ 1 H.P ನಿಂದ 10 H.P. ನೀರಾವರಿ ಪಂಪ್‌ಸೆಟ್ಟುಹೊಂದಿರುವ ರೈತರಿಗೆ ಉಚಿತವಾಗಿ ವಿದ್ಯುತ್‌ನ್ನು ಕೊಡುವಂತಹ ಒಂದು ಯೋಜನೆಯನ್ನು ಅವರು ಘೋಷಣೆಮಾಡಿದ್ದಾರೆ. ಅದು ಬಹುಶಃ ಸಂಪೂರ್ಣವಾಗಿ ರಾಜ್ಯದ ರೈತರ ಹಿತವನ್ನು ಕಾಪಾಡಿದೆ. ಕರ್ನಾಟಕದಲ್ಲಿ ಅನೇಕ ಜನ ರೈತರು ಕೆಪಿಟಿಸಿಎಲ್‌ಗೆ ಕೊಡುವಂತಹ ಬಿಲ್ಲು ಸಾಕಷ್ಟು ಉಳಿಸಿಕೊಂಡಿದ್ದಾರೆ. ಅದನ್ನು ಮನ್ನಾ ಮಾಡುವ ಬಗ್ಗೆ ಆಗಾಗ್ಗೆ ಹಿಂದಿನ ಸರ್ಕಾರಗಳು ಚುನಾಯಿತ ಪ್ರತಿನಿಧಿಗಳು ಮನ್ನಾ ಆಗುತ್ತದೆ ಎಂಬ ಮಾತನ್ನು ಹೇಳಿದ್ದರಿಂದ, ಬಹುಶಃ ಇದು ಮನ್ನಾ ಆಗಬಹುದೆಂದು ರೈತರು ಆ ಬಿಲ್ಲನ್ನು ತುಂಬುವಂತಹ ಒಂದು ಪ್ರಯತ್ನವನ್ನು ಮಾಡಲಿಲ್ಲ. ಅದರಿಂದ ಇಲಾಖೆಯವರು ದಂಡ ಮತ್ತು ಬಡ್ಡಿ ಮೀಟರ್ ಚಾರ್ಜ್ ಎಂದು ಇತ್ಯಾದಿಯಾಗಿ ದೊಡ್ಡ ಪ್ರಮಾಣದಲ್ಲಿ ಬಿಲ್ಲನ್ನು ರೈತರ ಮೇಲೆ ಹೊರಿಸಿದ್ದರಿಂದ ಆ ಬಿಲ್ಲನ್ನು ತುಂಬುವಂತಹ ಶಕ್ತಿ ಇವತ್ತು ರೈತರಿಗೆ ಇಲ್ಲವಾಗಿದೆ. ಹೀಗಾಗಿ ಹಿಂದಿನ ಬಿಲ್ಲುಗಳು ಕೂಡ ಮನ್ನಾ ಮಾಡುವಂತಹ ಪ್ರಯತ್ನವನ್ನು ಈ ಸರ್ಕಾರದವರು ಮಾಡಿದರೆ ಬಹಳಷ್ಟು ಜನ ರೈತರಿಗೆ ಇದರಿಂದ ಅನುಕೂಲವಾಗುತ್ತದೆಂದು ನನ್ನ ಬಾವನೆಯಾಗಿದೆ. ಮನ್ನಾ ಮಾಡುವುದು ಸಂಪೂರ್ಣವಾಗಿ ಮಾಡದೆ ಇದ್ದರೆ ಹೊಸದೊಂದು ಏನಾದರೂ

ಪರ್ಯಾಯ ವ್ಯವಸ್ಥೆಯನ್ನು ಮಾಡಿದರೆ ದಂಡ ಅಥವಾ ಬಡ್ಡಿ ಮತ್ತು ಚಕ್ರಬಡ್ಡಿಯನ್ನು ಹಾಕಿ ರೈತರನ್ನು ಶೋಷಣೆ ಮಾಡುವಂತಹ ಕ್ರಮ ಏನು ಹಿಂದೆ ನಡೆದಿದೆ. ಅದನ್ನು ಕಡಿಮೆ ಮಾಡುವಂತಹ ಕ್ರಮವನ್ನು ಈ ಸರ್ಕಾರದವರು ಮಾಡಿದರೆ ಬಹುಶಃ ಕರ್ನಾಟಕ ರಾಜ್ಯದ ರೈತರ ಬಗ್ಗೆ ಈ ಸರ್ಕಾರದವರು ತೆಗೆದುಕೊಂಡಂತಹ ನೀತಿ ಸರಿಯಾಗುತ್ತದೆ. ಈ ಸದಂರ್ಭದಲ್ಲಿ ಒಣ ಭೂಮಿಯಲ್ಲಿ ಕೃಷಿಕರಿಗೆ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಬೀಜ ಗೊಬ್ಬರಕ್ಕಾಗಿ ತಲಾ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಿರುವುದು ಬಹಳ ಸ್ವಾಗತಾರ್ಹವಾದುದು. ಏಕೆಂದರೆ ಅನೇಕ ಜನ ರೈತರು ಮಳೆ ಇಲ್ಲದೇ ಈ ಬಾರಿ ಮುಂಗಾರು ಮಳೆ ವಿಶೇಷವಾಗಿ ಆಗದೇ ಇರುವುದರಿಂದ ಸಂಪೂರ್ಣವಾಗಿ ಕೈಕೊಟ್ಟ ಹಿನ್ನೆಲೆಯಲ್ಲಿ ರೈತರಿಗೆ ಏನಾದರೊಂದು ಪರಿಹಾರವನ್ನು ಕೊಡುವ ಅಗತ್ಯವಿತ್ತು. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಒಂದು ಯೋಜನೆಯನ್ನು ಜಾರಿಗೆ ತಂದು ಈ ರಾಜ್ಯದ ಸುಮಾರು 50 ಸಾವಿರ ಸಂಖ್ಯೆಯಲ್ಲಿರುವಂತಹ ರೈತರಿಗೆ ಈ ಒಂದು ವ್ಯವಸ್ತೆಯನ್ನು ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಇದು ಅಲ್ಲದೆ ಸಣ್ಣ ಮತ್ತು ಅತಿ ಸಣ್ಣ ರೈತರು ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಿಕೊಂಡಿದ್ದರೂ ಕೂಡ ಇಲ್ಲಿ ಮಳೆಯಾಗಿಲ್ಲ ಮತ್ತು ನೀರು ಕೂಡ ಇರುವುದಿಲ್ಲ. ಬಾವಿ ಹಾಗೂ ಬೋರವೆಲ್‌ಗಳಲ್ಲೂ ಕೂಡ ನೀರು ಇರುವುದಿಲ್ಲ. ಹೀಗಾಗಿ ಮುಂಗಾರು ಮಳೆ ಸಂಪೂರ್ಣವಾಗಿ ವಿಫಲವಾಗಿರುವುದರಿಂದ ಸಣ್ಣ ಮತ್ತು ಅತಿಸಣ್ಣ ನೀರಾವರಿಯನ್ನು ಹೊದಿರುವಂತಹ ರೈತರಿಗೂ ಕೂಡ ಈ ಯೋಜನೆಯನ್ನು ವಿಸ್ತರಿಸಿದರೆ ಬಹಳಷ್ಟು ಅನುಕೂಲವಾಗುತ್ತದೆ. ನೀರಾವರಿಯನ್ನು ಮಾಡಿರುವಂತಹ ರೈತರಿಗೆ ಅವರದೆ ಆದಂತಹ worry ಗಳು ಇರುತ್ತವೆ. ಅವರದೆ ಆದಂತಹ ಸಮಸ್ಯೆಗಳು ಕೂಡ ಇದೆ. ಅವರು ಖರ್ಚು ಮಾಡಿರುವಂತಹ ಬೀಜ ಮತ್ತು ಗೊಬ್ಬರಗಳು ಕೈಗೆ ಎಟುಕದೆ ಇವತ್ತು ಅವರುಗಳು ಬಹಳ ತೊಂದರೆಯಲ್ಲಿರುವುದರಿಂದ ಸಣ್ಣ ಮತ್ತು ಅತಿ ಸಣ್ಣ ನೀರಾವರಿಯನ್ನು ಹೊಂದಿರುವಂತಹ ರೈತರಿಗೆ ಈ ಯೋಜನೆಯನ್ನು ವಿಸ್ತರಿಸಬೇಕೆಂದು ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ.

ರೈತರಿಗೆ ಸಂಬಂಧಿಸಿದ ಅನೇಕ ವಿಷಯಗಳೆಲ್ಲವನ್ನೂ ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಿಸುವ ಮೂಲಕ ಇದೊಂದು ರೈತಪರವಾದ ಬಜೆಟ್ ಆಗಿ ಸಿದ್ಧಪಡಿಸಿಕೊಟ್ಟಿದ್ದಾರೆ. ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ರೈತರಿಗೆ ಸಂಬಂಧಿಸಿದಂತೆ ಆಕಸ್ಮಿಕ ಅನಾಹುತಗಳು ಪದೇ ಪದೇ ಜರುಗುತ್ತವೆ. ಆ ಸಂದರ್ಭದಲ್ಲಿ ರೈತ ಉತ್ಪಾದನೆ ಮಾಡಿದಂತಹ ಮೇವು ಸಂಗ್ರಹ ಇರಬಹುದು ಅಥವಾ ಆತ ಬೆಳೆದ ಬೆಳೆಗಳಿರಬಹುದು, ಆತ ನಿರ್ಮಿಸುವ ವಸತಿ ಇರಬಹುದು, ಜಮೀನಿನಲ್ಲಿ ನಿರ್ಮಿಸಿರುವ ವಸತಿಗಳು, ಇತ್ಯಾದಿಗಳಿಗೆ ಆಗಿಂದಾಗ್ಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಬಹಳ ದೊಡ್ಡ ಪ್ರಮಾಣದಲ್ಲಿ ಹಾನಿಯಾಗುತ್ತದೆ. ಆ ರೀತಿ ಹಾನಿಯಾದ ಸಂದರ್ಭದಲ್ಲಿ ಜಮೀನು ಹೊಂದಿರುವಂತಹ ರೈತನಿಗೆ ಸರ್ಕಾರದಿಂದ ಯಾವುದೇ ರೀತಿಯಲ್ಲೂ ಪರಿಹಾರ ಸಿಗುವುದಿಲ್ಲ. ಹೀಗಾಗಿ, ಹಾನಿಗೆ ಸಂಭವಿಸಿದ ರೈತರಿಗೆ ಯೋಗ್ಯ ಪರಿಹಾರ ಸಿಗುವ ದೃಷ್ಟಿಯಲ್ಲಿ ತಾಲ್ಲೂಕಿನ ತಹಶೀಲ್ದಾರ್ ಅಥವಾ ಅಸಿಸ್ಟೆಂಟ್ ಕಮೀಷನರ್‌ರವರ ಮೂಲಕ ಇಂತಹ ಹಾನಿ ಹೊಂದಿದ ರೈತ ನೆರವಿಗೆ ಸರ್ಕಾರ ಧಾವಿಸಿ ಅವರಿಗೆ ಯೋಗ್ಯ ಪರಿಹಾರ ಒದಗಿಸಿಕೊಡಬೇಕೆಂಬ ವಿಷಯವನ್ನು ಈ ಬಜೆಟ್‌ನಲ್ಲಿ ಸೇರಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರಲ್ಲಿ ನಾನು

ವಿನಂತಿಸಿಕೊಳ್ಳುತ್ತೇನೆ. ಇದನ್ನೇ ಇನ್‌ಶ್ಯೂರೆನ್ಸ್ ಕಂಪನಿ ಮೂಲಕವಾದರೂ ಜಾರಿಗೆ ತರುವುದಕ್ಕೆ ಸಾಧ್ಯವಿದೆ. ಆ ದೃಷ್ಟಿಯಿಂದ ಈ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುತ್ತೇವೆ.

ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಾಕಷ್ಟು ವಿಷಯಗಳನ್ನು ಬಜೆಟ್‌ನಲ್ಲಿ ಕೊಟ್ಟಿರುವುದು ಸ್ವಾಗತಾರ್ಹವಾದುದು. ಈ ದೇಶದಲ್ಲಿ ದೇವಭಾಷೆಯಾದ ಸಂಸ್ಕೃತ ಭಾಷೆಗೆ ಪ್ರಾಧಾನ್ಯತೆ ಕಡಿಮೆಯಾಗುತ್ತಿರುವುದು ದುಃಖಕರವಾದ ಸಂಗತಿಯೆಂದು ಹೇಳ ಬಯಸುತ್ತೇನೆ. ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಇನ್ನೂ ಅನೇಕ ಪ್ರಮುಖರು ಕೊಟ್ಟಿರುವ ಸಲಹೆಗಳನ್ನು ಬಹುಶಃ ಈ ದೇಶದಲ್ಲಿ ಅಂಗೀಕರಿಸಿದ್ದರೆ ಸಂಸ್ಕೃತ ಭಾಷೆಗೆ ಬಹಳಷ್ಟು ಪ್ರಾಧಾನ್ಯತೆ ಕೊಡುತ್ತಿದ್ದರು. ಆದರೆ, ಇವತ್ತು ಪ್ರಾಧಾನ್ಯತೆ ಸಿಗದೇ ವಿಶೇಷವಾಗಿ ಕರ್ನಾಟಕದಲ್ಲಿ ಸಂಸ್ಕೃತ ಭಾಷೆಗೆ ಹಿಂದಿನ ಸರ್ಕಾರಗಳು ಯಾವುದೇ ಮನ್ನಣೆ ನೀಡದೆ, ಬರೀ ನಿರ್ಲಕ್ಷ್ಯತನ ತೋರಿಸುತ್ತಾ ಬಂದಿದ್ದನ್ನು ಇಲ್ಲಿ ಖಂಡಿಸಬೇಕಾಗುತ್ತದೆ. ಸಂಸ್ಕೃತ ಭಾಷೆಯನ್ನು ಐಚ್ಛಿಕ ವಿಷಯವನ್ನಾಗಿ ಓದಿದಂತಹ ವಿದ್ಯಾರ್ಥಿಗಳಿಗೆ ಸರ್ಕಾರದ ಉದ್ಯೋಗದಲ್ಲಿ ಮತ್ತು ಹೆಚ್ಚಿನ ವ್ಯಾಸಂಗ ಮಾಡುವಲ್ಲಿ ತೊಂದರೆಯಾಗುತ್ತದೆ. ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಹಾಗೂ ಡಿಗ್ರಿ ಕಾಲೇಜುಗಳಲ್ಲಿ ತೆರವಾದ ಶಿಕ್ಷಕರುಗಳ ಹುದ್ದೆಗಳನ್ನು ಹಿಂದಿನ ಸರ್ಕಾರಗಳು ತುಂಬಲಿಲ್ಲ. ಅಷ್ಟೇ ಅಲ್ಲ, ಆ ಖಾಲಿಯಾದ ಸ್ಥಾನಗಳನ್ನು ಬೇರೆ ಭಾಷೆಗಳಿಗೆ ಪರಿವರ್ತಿಸಿರುವ ಅನೇಕ ನಿದರ್ಶನಗಳಿವೆ. ಹೀಗಾಗಿ, ರಾಜ್ಯದಲ್ಲಿ ಸಂಸ್ಕೃತ ಭಾಷೆಯನ್ನು ಅಭ್ಯಸಿಸುವಂತಹ ಸುಮಾರು 1 ಲಕ್ಷ ವಿದ್ಯಾರ್ಥಿಗಳ ಭವಿಷ್ಯ ಇವತ್ತು ತೂಗುಯ್ಯಾಲೆಯಲ್ಲಿದೆ. ವಿಶೇಷವಾಗಿ, ಬೆಳಗಾವಿ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಮಾಡಿಲ್ಲ. ಆ ಸ್ಥಾನಗಳನ್ನು ಬೇರೆ ಭಾಷೇಗಳಿಗೆ ಪರಿವರ್ತಿಸಿದ್ದಾರೆ. ಹೀಗಾಗಿ, ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಹಿತ ರಕ್ಷಿಸಲು ಹಿಂದಿನ ಸರ್ಕಾರಗಳು ಸಂಪೂರ್ಣವಾಗಿ ವಿಫಲವಾಗಿವೆ. ಇಂತಹ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ನಿರ್ಧಾರ ಕೈಗೊಂಡು ಅದಕ್ಕೆ 2 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿರುವುದು ಅತ್ಯಂತ ಸ್ವಾಗತಾರ್ಹವಾದುದು. ಇದರಿಂದ ಸಂಸ್ಕೃತ ಭಾಷೆ ಕಲಿಯುವ ಎಲ್ಲಾ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಅವರು ಎದುರಿಸುವಂತಹ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸುತ್ತದೆಂದು ಈ ಸಂದರ್ಭದಲ್ಲಿ ಆಶಿಸುತ್ತೇನೆ.

ವಿಶೇಷವಾಗಿ, ರೈತರು ರಸಗೊಬ್ಬರದ ಅಭಾವ ಎದುರಿಸುತ್ತಿರುವಂತಹ ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ರಾಸಾಯನಿಕ ಗೊಬ್ಬರದ ಬಳಕೆಯನ್ನು ಹಂತ ಹಂತವಾಗಿ ಕಡಿಮೆ ಮಾಡುವುದು ಬಹಳ ಅವಶ್ಯ. ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳಷ್ಟು ಚಿಂತನೆ ನಡೆಸಿ ಸಾವಯವ ಕೃಷಿಯ ಕಡೆಗೆ ಈ ರಾಜ್ಯವನ್ನು ಕೊಂಡೊಯ್ಯುವಂತಹ ಪ್ರಯತ್ನ ಮಾಡಿದ್ದಾರೆ. ಇದು ಅತ್ಯಂತ ಅಭಿನಂದನೀಯ ಮತ್ತು ಸ್ವಾಗತಾರ್ಹವಾದುದು. ರಾಸಾಯನಿಕ ವಸ್ತುಗಳ ಹೆಚ್ಚಿನ ಬಳಕೆ ಮತ್ತು ಹೆಚ್ಚಿನ ನೀರಿನ ಬಳಕೆ ಆಗಿದ್ದರಿಂದ ಕರ್ನಾಟಕದಲ್ಲಿ ವಿಶೇಷವಾಗಿ ಭೂಮಿಯ ಫಲವತ್ತತೆ ಕಡಿಮೆಯಾಗಿ ಸವಳು-ಜವುಳು ಸಮಸ್ಯೆಯುಂಟಾಗಿರುವುದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ನೈಸರ್ಗಿಕ ಕೃಷಿ ಬಗ್ಗೆ ವಿಶೇಷ ಒತ್ತು ಕೊಟ್ಟು ಜನಸಾಮಾನ್ಯರಲ್ಲಿ, ರೈತರಲ್ಲಿ ಈ ಬಗ್ಗೆ ತಿಳುವಳಿಕೆ ಮೂಡಿಸುವುದು ಕೂಡ ಬಹಳ ಸೂಕ್ತವಾಗಿದೆ.

ಅದರಲ್ಲಿ ದೇಶೀಯ ಆಕಳುಗಳ ಗೋ ಮೂತ್ರ ಮತ್ತು ಸಗಣಿ ಬಳಸಿ ಯಾವ ರೀತಿ ಕೃಷಿ ಕೈಗೊಳ್ಳಬಹುದು ಎನ್ನುವಂತಹ ಒಂದು ಪ್ರಕ್ರಿಯೆಯನ್ನು ಪ್ರಾಯೋಗಿಕವಾಗಿ ಜನರಿಗೆ ತಿಳಿಸುವಂತಹ "ಮಹಾತ್ಮಗಾಂಧಿ ಗೋವು ಆಧಾರಿತ ಗ್ರಾಮೋದ್ಯೋಗ"ದ ಹೆಸರಿನಲ್ಲಿ ಸರ್ಕಾರ ಯೋಜನೆಯೊಂದನ್ನು ಪ್ರಾರಂಭಿಸಬೇಕೆಂದು ಏನು ನಿರ್ಧಾರ ಕೈಗೊಂಡಿದೆ, ಬಹುಶಃ, ಕೋಟ್ಯಂತರ ರೈತರು ಸನ್ಮಾನ್ಯ ಯಡಿಯೂರಪ್ಪನವರ ಈ ನಿರ್ಧಾರವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆ. ನೈಸರ್ಗಿಕ ಕೃಷಿಗಾಗಿ ಶಿವಮೊಗ್ಗ ಮತ್ತು ಮೈಸೂರು ಮಾತ್ರ ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳುವಂತೆ ನಿರ್ಧಾರ ಮಾಡಲಾಗಿದೆ. ಇದರ ಬದಲಿಗೆ ಇಡೀ ರಾಜ್ಯಾದ್ಯಂತ ಎಲ್ಲಾ ಜಿಲ್ಲೆಗಳಲ್ಲೂ ಈ ಪ್ರಯೋಗ ಪ್ರಾರಂಭಿಸಬೇಕೆಂದು ಸರ್ಕಾರಕ್ಕೆ ವಿನಂತಿಸುತ್ತೇನೆ.

ಗ್ರಾಮೀಣ ಭಾಗದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇವತ್ತು ಬೇಕಾದಷ್ಟು ವೈದ್ಯಕೀಯ ಹುದ್ದೆಗಳು ಮತ್ತು ಅಲ್ಲಿ ಕೆಲಸ ಮಾಡುವಂತಹ ಅನೇಕ ಉದ್ಯೋಗಿಗಳ ಹುದ್ದೆಗಳು ಖಾಲಿ ಇವೆ. ಇವುಗಳನ್ನು ತಕ್ಷಣವೇ ತುಂಬಿ ಗ್ರಾಮಾಂತರ ಭಾಗದ ಸಾರ್ವಜನಿಕರ ಆರೋಗ್ಯ ಕಾಪಾಡುವಂತಹ ಈ ಎಲ್ಲಾ ಆಸ್ಪತ್ರೆಗಳಲ್ಲಿ ವಿಶೇಷ ಬದಲಾವಣೆಯಾಗಿ ಅಗತ್ಯವಿರುವಂತಹ ಅಧಿಕಾರಿಗಳ ವರ್ಗಾವಣೆಯಾಗಬೇಕು ಮತ್ತು ಖಾಲಿ ಇರುವ ಸ್ಥಾನಗಳಿಗೆ ತುಂಬುವ ಪ್ರಯತ್ನವಾಗಬೇಕು. ಅದರ ಜೊತೆಗೆ, ಸಾರ್ವಜನಿಕರಿಗೆ ಬೇಕಾಗುವ ಔಷಧಿಗಳನ್ನು ಸಮಯಕ್ಕೆ ಸರಿಯಾಗಿ ಪೂರೈಸುವ ವ್ಯವಸ್ಥೆಯಾಗಬೇಕೆಂದು ಇವತ್ತು ನಾನು ಸರ್ಕಾರವನ್ನು ಆಗ್ರಹಿಸುತ್ತೇನೆ.

ಗ್ರಾಮೀಣ ಭಾಗದ ಜನರ ಆರೋಗ್ಯ ಹದಗೆಡುವುದಕ್ಕೆ ಅಶುದ್ಧವಾದ ನೀರು ಮತ್ತು ವಿಶೇಷವಾಗಿ ಸಾರ್ವಜನಿಕರು ಬಯಲು ಬಹಿರ್ದೆಸೆಗೆ ಹೋಗುತ್ತಿರುವುದು ಕಾರಣವಾಗಿದೆ. ಕರ್ನಾಟಕದಲ್ಲಿ ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಇದೊಂದು ದೊಡ್ಡ ಸಮಸ್ಯೆಯಾಗಿ ನಮಗೆ ಕಾಣುತ್ತಿದೆ. ಅದರಲ್ಲೂ ವಿಶೇಷವಾಗಿ ಹೊಳೆದಂಡೆಯ ಹಳ್ಳಿಗಳಲ್ಲಿ ಈ ಸಮಸ್ಯೆ ಇನ್ನೂ ಭಯಾನಕ. ಗ್ರಾಮೀಣ ಭಾಗದಲ್ಲಿ ದೊಡ್ಡ ಸಂಖ್ಯೆಯಲ್ಲಿ ವಾಸಿಸುವ ಮಹಿಳೆಯರಿಗೆ ಮಾನ ಮರ್ಯಾದೆಯ ಪ್ರಶ್ನೆ ಇದಾಗಿದೆ. ಹೀಗಾಗಿ ಯಾವ ರೀತಿ ನಗರ ಭಾಗಗಳಲ್ಲಿ ಸುಲಭ ಶೌಚಾಲಯಗಳು ಆಗಬೇಕೋ ಅದೇ ರೀತಿಯಲ್ಲಿ ಗ್ರಾಮಾಂತರ ಭಾಗಗಳಲ್ಲೂ ಕೂಡ ಸುಲಭ ಶೌಚಾಲಯಗಲು ನಿರ್ಮಾಣವಾಗಬೇಕು. ಅದಕ್ಕೋಸ್ಕರ, ಸರ್ಕಾರ ವಿಶೇಷ ಯೋಜನೆಯೊಂದನ್ನು ಹಮ್ಮಿಕೊಂಡು ಗ್ರಾಮೀಣ ಭಾಗದ ಪ್ರತಿ ಮನೆಗಳಲ್ಲೂ ಶೌಚಾಲಯ ನಿರ್ಮಿಸುವುದನ್ನು ಕಡ್ಡಾಯಗೊಳಿಸಬೇಕು ಹಾಗೂ ಸಾರ್ವಜನಿಕ ಶೌಚಾಲಯಗಳ ನಿರ್ಮಾಣ ಕುರಿತು ಹೊಸ ಯೋಜನೆಯೊದನ್ನು ಸಿದ್ಧಪಡಿಸಿ ಇದಕ್ಕಾಗಿ ಹೆಚ್ಚು ಹಣವನ್ನು ಕೊಟ್ಟು ಪ್ರತಿ ಗ್ರಾಮಗಳಲ್ಲೂ ನೀರಿನ ಆಧಾರದ ಮೇಲೆ ಉಪಯೋಗಿಸುವಂತಹ ಸುಲಭ ಶೌಚಾಲಯಗಳ್ನು ನಿರ್ಮಿಸಬೇಕು. ಈ ಬಗ್ಗೆ ಸರ್ಕಾರ ತನ್ನ ಬಜೆಟ್‌ನಲ್ಲಿ ವಿಶೇಷ ಅನುದಾನ ಮೀಸಲಿಡಬೇಕೆಂದು ಉತ್ತರ ಕರ್ನಾಟಕದ ಗ್ರಾಮಾಂತರ ಭಾಗದ ಎಲ್ಲ ಜನರ ಪರವಾಗಿ ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

ಈ ಬಜೆಟ್‌ನಲ್ಲಿ ಅನೇಕ ರೈಲು ಮಾರ್ಗಗಳ ಬಗ್ಗೆ ಉಲ್ಲೇಖಿಸಲಾಗಿದೆ. ಆದರೆ, ಆ ಕಡೆಯ ಕುಡಚಿಯಿಂದ ಬಾಗಲಕೋಟೆಗೆ ಒಂದು ಹೊಸ ರೈಲು ಮಾರ್ಗ ಆಗಬೇಕೆಂಬ ಬೇಡಿಕೆ ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಿದೆ. ಈಗಾಗಲೇ ಹಿಂದಿನ ಕೇಂದ್ರ ಸರ್ಕಾರ ಬಾಗಲಕೋಟೆ ಮತ್ತು ಕುಡಚಿ ನಡುವೆ ರೈಲು

ಮಾರ್ಗ ಆಗಬೇಕೆಂದು ಉದ್ಘಾಟನೆ ಕಾರ್ಯಕ್ರಮ ಜರುಗಿಸಿ ಸಮೀಕ್ಷೆ ನಡೆಸಲಾಗಿದೆ. ಆದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮನಸ್ಸು ಮಾಡಿದರೆ ಮಾತ್ರ ರೈಲು ಯೋಜನೆ ಜಾರಿಗೆ ಬರಲು ಸಾಧ್ಯವಿದೆ. ಬಾಗಲಕೋಟೆ ಜಿಲ್ಲೆಯಲ್ಲಿ ಯಾವ ರೀತಿ ನೀರಾವರಿ ಸೌಲಭ್ಯ ಮತ್ತು ಕೃಷಿಕರು ಉತ್ಪಾದಿಸಿದಂತಹ ವಸ್ತುಗಳು ಹೆಚ್ಚು ಇದೆಯೋ, ಅದೇ ರೀತಿ ಜವಳಿ ಉದ್ದಿಮೆದಾರರು ಬಹಳ ದೊಡ್ಡ ಸಂಖ್ಯೆಯಲ್ಲಿ ಆ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಜವಳಿ ಉದ್ದಿಮೆ ಮತ್ತು ರೈತರು ಉತ್ಪಾದಿಸುವಂತಹ ವಸ್ತುಗಳನ್ನು ಸಾಗಾಟ ಮಾಡುವುದಕ್ಕೆ ಇವತ್ತು ರೈಲು ಮಾರ್ಗ ಬಹಳ ಅವಶ್ಯಕತೆ ಇದೆ.

ಆಲಮಟ್ಟಿ ಹಿನ್ನೀರು ಹೆಚ್ಚು ಸಂಗ್ರಹವಾಗಿ ಬೀಳಗಿ, ಜಮಖಂಡಿ ಮತ್ತು ಮುದೋಳ್ ತಾಲ್ಲೂಕುಗಳಲ್ಲಿ ಬಹಳಷ್ಟು ತೊಂದರೆ ಮಾಡುತ್ತದೆ. ಸಾಗಾಟಕ್ಕೂ ಬಹಳ ತೊಂದರೆಯಾಗುತ್ತದೆ. ರಸ್ತೆಗಳು, ಸೇತುವೆಗಳು ಮುಳುಗಿ ಹೋಗುತ್ತವೆ. ಇದರಿಂದ ಕುಡಚಿ ಮತ್ತು ಬಾಗಲಕೋಟೆ ರೈಲು ಮಾರ್ಗವಾದರೆ ಆ ಭಾಗದ ಸಂಪೂರ್ಣ ಅಬಿವೃದ್ಧಿಯಾಗುತ್ತದೆ. ರೈತ ಮತ್ತು ನೇಕಾರರು ಉತ್ಪಾದನೆ ಮಾಡಿದ ವಸ್ತುಗಳನ್ನು ಸಾಗಾಟ ಮಾಡಲು ಅವಕಾಶವಾಗುತ್ತದೆ. ಆದ್ದರಿಂದ ರಾಜ್ಯ ಸರ್ಕಾರ ಮುಂದೆ ಬಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ, ರಾಜ್ಯದಿಂದ ಕೊಡಬೇಕಾಗಿರುವ 50 ಪರ್ಸೆಂಟ್ ಹಣವನ್ನು ಕೇಂದ್ರ ಸರ್ಕಾರಕ್ಕೆ ಕೊಡುವ ಒಂದು ಪ್ರಸ್ತಾವನೆಯನ್ನು ಕಳುಹಿಸಬೇಕು. ಇದರ ಬಗ್ಗೆ ಹಿಂದಿನ ಸರ್ಕಾರವು ಪ್ರಸ್ತಾವನೆ ಕಳುಹಿಸಿತ್ತು ಎಂಬ ಸುದ್ದಿ ಕೂಡ ಇದೆ. ಆದ್ದರಿಂದ ಕೇಂದ್ರಕ್ಕೆ ಇದರ ಬಗ್ಗೆ ವಿನಂತಿ ಮಾಡಿ ಈ ಪ್ರಸಕ್ತ ವರ್ಷದಲ್ಲಿ ಕುಡಚಿ ಮತ್ತು ಬಾಗಲಕೋಟೆ ನಡುವೆ ರೈಲು ಮಾರ್ಗದ ಸಮೀಕ್ಷೆ ಮತ್ತು ಸರ್ವೆ ಕೆಲಸವನ್ನು ಮುಗಿಸಿ ಆದಷ್ಟು ಬೇಗ ಇಲ್ಲಿ ರೈಲುಗಳು ಓಡಾಡುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುತ್ತೇನೆ. ಒಟ್ಟಾರೆ ಇವತ್ತು ಈ ರಾಜ್ಯದಲ್ಲಿ 2008-09ನೇ ಸಾಲಿಗೆ ಮಂಡಿಸಿರುವಂಥ ಬಜೆಟ್ ರೈತರ, ಜನರ ಪರವಾಗಿ ಹಾಗೂ ಸಾಮಾನ್ಯ ಜನರ ಸಮಸ್ಯೆಗಳಿಗೆ ಸ್ಪಂಧಿಸುವಂಥ ಬಜೆಟ್ ಎಂದು ಹೇಳಿ ಈ ಬಜೆಟ್‌ನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3. ಪ್ರಕಟಣೆ

ಅಧ್ಯಕ್ಷರು : 13ನೇ ವಿಧಾನಸಭೆಗೆ ಕಾರವಾರ ವಿಧಾನಸಭಾ ಕ್ಷೇತ್ರ ಸಂಖ್ಯೆ:77ರಿಂದ ಚುನಾಯಿತರಾಗಿದ್ದ ಶ್ರೀ ಅಸ್ನೋಟಿಕರ್ ಆನಂದ ವಸಂತ್, ದೇವದುರ್ಗ ವಿಧಾನಸಭಾ ಕ್ಷೇತ್ರ ಸಂಖ್ಯೆ: 56 ರಿಂದ ಚುನಾಯಿತರಾಗಿದ್ದ ಶ್ರೀ ಕೆ. ಶಿವನಗೌಡ ನಾಯಕ್, ಅರಬಾವಿ ವಿಧಾನಸಭಾ ಕ್ಷೇತ್ರ ಸಂಖ್ಯೆ:08 ರಿಂದ ಚುನಾಯಿತರಾಗಿದ್ದ ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ ಅವರುಗಳ ರಾಜೀನಾಮೆಗಳನ್ನು.....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಯಾವ ಕಾರಣ? ಯಾವ ಕಾರಣಕ್ಕೆ ಎಂದು ಬೇಕಲ್ಲಾ? ಕಾರಣ ಹೇಳಿ?

ಅಧ್ಯಕ್ಷರು : ನಾನು ಮಾತನಾಡುವಾಗ ಮಾನ್ಯ ವಿರೋಧ ಪಕ್ಷದ ನಾಯಕರು ಇಂಟರ್‌ವಿನ್ ಮಾಡಬಾರದು. ಅವರುಗಳ ರಾಜೀನಾಮೆಗಳನ್ನು ದಿನಾಂಕ 5ನೇ ಜುಲೈ, 2008ರಂದು, ದೊಡ್ಡಬಳ್ಳಾಪುರ